ಪುಷ್ಯ ಮಾಸ

ಪುಷ್ಯಮಾಸದೊಂದು ಪ್ರಥಮ **ರಾಗ: ಕಾಮವರ್ಧಿನಿ**

ಪುಷ್ಯಮಾಸದೊಂದು ಪ್ರಥಮ ಪ್ರಾತಃಕಾಲ। ಮೋಡವಿಲ್ಲ ಎಲ್ಲಿ ನೋಡಲಲ್ಲಿ ನೀಲ। ಶುದ್ಧ ನವಮಿ ಆಕಾಶದಿ ಶುಭ್ರನೀಲ॥ಪ॥ ತೆಂಗು ಮರದ ಹಿಂಗಾರದ ಹೂಗಳಲ್ಲಿ ಹಾಡುತ್ತಿತ್ತು ಹಕ್ಕಿ ಟುವ್ವಿ ರಾಗದಲ್ಲಿ। ಹುಳುಹುಪ್ಪಟೆ ಹಿಡಿದು ತಿನ್ನುವ ಭೋಗದಲ್ಲಿ॥1॥ ಉಲಿವ ಹಕ್ಕಿ ಕೂಗುತಲಿಂದು ಅಮೃತಮಾಯೆ। ಓರೆ ಬಿಸಿಲು ಗುಡಿಸಿ ತನ್ನ ದೀರ್ಘಛಾಯೆ। ತಾರಸಿ ಇಂದುರುಳಿದರೇನು ನೋಯೆ ಸಾಯೆ॥2॥

❖ ❖ ❖

55. "ನಾರಾಯಣ" ಮಾಸ ನಿಯಾಮಕ

ನಮಾಮಿ ನಾರಾಯಣ ಪಾದಪಂಕಜಂ। ಕರೋಮಿ ನಾರಾಯಣ ಪೂಜನಂಸದಾ।
ವದಾಮಿ ನಾರಾಯಣ ನಾಮನಿರ್ಮಲಂ। ಸ್ಮರಾಮಿ ನಾರಾಯಣ ತತ್ವಮವ್ಯಯಂ॥

ನಾರಾಯಣಾಯ ನರಲೋಕ ಪಾರಾಯಣಾಯ ಲೋಕಾನನಾಯ ಕಮಲಾಮಲ ಲೋಚನಾಯ
ರಾಮಾಯ ರಾವಣ ವಿಲೋಚನ ಪಾತನಾಯ ವೀರಾಯ ವೀರ್ಯ ನಿಲಯಾಯ ನಮೋವರಾಯ॥

ನಾರಾಯಣಾಮಲ ಕಾರಣವಂದೇ ಕಾರಣ ಕಾರಣ ಪೂರ್ಣವರೇಣ್ಯ॥

ನಾರಾಯಣ ನಾರಾಯಣ ಎಂದರೆ ಸಪ್ತ ಸಮುದ್ರವು ಮಹಾಪ್ರಳಯದ ಜಲಧಿಯಲ್ಲಿ ಏಕಾಕಾರವಾಗಿ।
ವಟಪತ್ರಶಾಯಿಯಾದ್ದರಿಂದ। ನಾರಾಯಣ ಎನಿಸಿಕೊಂಡ ॥ಕೇಶವಾಯ ನಮಃ॥

ಬದರಿಕಾಶ್ರಮದಲ್ಲಿ ನಾರಾಯಣನಿದ್ದಾನೆ ರಾಮರಾಮ।
ಬದರಿಕಾಶ್ರಮ ಕಂಡೆ ನಾರಾಯಣನ ದಯದಿ ರಾಮರಾಮ॥ಕಾಶಿಯ ಹಾದಿಯಲಿ॥

ನಾರಾಯಣ ನಿಮ್ಮ ನಾಮ। ವೆನ್ನ। ನಾಲಿಗೆ ಮೇಲಿರಬೇಕೆಂಬ ನೇಮ।
ನಾನು ಬೇಡುವೆ ನಿಮ್ಮನಾಮ। ಪ್ರಾಣ। ಪಯಣ ಸಮಯಕೊದಗಲಿ ಗುಣಧಾಮ॥ಅಚ್ಯುತಾನಂತ॥

ಶರಣು ಹೊಕ್ಕೆನಯ್ಯ ಎನ್ನ ಮರಣ ಸಮಯದಲ್ಲಿ ನಿಮ್ಮ। ಚರಣ ಸ್ಮರಣೆ ಕರುಣಿಸಯ್ಯ ನಾರಾಯಣ ॥ಈಶ ನಿಮ್ಮ॥

ನಾರಾಯಣಂ ನಿರಾಕಾರಂ। ನರವೀರಂ ನರೋತ್ತಮಂ।
ನೃಸಿಂಹಂ ನಾಗನಾಥಂ ಚ ತಂ ವಂದೇ ನರಕಾಂತಕಂ॥ ಓಂ ನಮೋ ಭಗವತೇ॥

ವಾರಣ ವಂದ್ಯನೆ ಕಾರುಣ್ಯರೂಪನೆ। ಪುರಾಣಗಳಲಿ ಪೊಗಳುವ।
ಪುರಾಣಗಳಲಿ ಪೊಗಳುವ ಶ್ರೀಕೃಷ್ಣ। ನಾರಾಯಣ ನಮ್ಮ ಮನೆದೈವ ॥ರಂಗ ಬಾರೋ॥

ನಾರಾಯಣ ನಿನ್ನ ನಾಮಾಮೃತವನು

ನಾರಾಯಣ ನಿನ್ನ ನಾಮಾಮೃತವನು। ಸವಿಯುತನಾ ಬಂದೇ॥ಪ॥ ಸಾರರಹಿತ ಸಂಸಾರ ವಿಷಯಗಳ ಘೋರ ಬಿಡಿಸುತಂದೇ॥ಅ.ಪ.॥ ತ್ರಿಜಕುಲಬಿಟ್ಟಿಹ ಅಜಮಿಳನನು ನೀ। ಅಂತ್ಯಕಾಲದಿ ಹೊರೆದೇ। ಭುಜಗನ ಹೆಡೆಯಲಿ ರಕ್ಷಿಸಿ ಗೋವ್ಗಳ। ಸಲಹುತ ನೀ ಮೆರೆದೇ॥1॥ ಶ್ರೀಶನಿನ್ನಯ ನಿಜ ದಾಸರ ಪಾದದ। ಆಶ ತೋರಿಸೊ ಎನಗೆ। ವಾಸುದೇವ

ವಿಠಲ ನಿನ್ನ ನಂಬಿದೆ ಸುಜ್ಞಾನ ಕೊಡೆಲೊ ಬೇಗ॥2॥

ನಾರಾಯಣ ಎನ್ನಿರೋ। ನರಹರಿಯ

ನಾರಾಯಣ ಎನ್ನಿರೋ। ನರಹರಿಯ॥ಪ॥ ನಾರಾಯಣ ಎಂದು ಅಜಮಿಳ ಕೈವಲ್ಯ। ಸೇರಿದನೆಂಬೊ ಶ್ರುತಿ ಕೇಳರಿಯಿರಾ॥ಅ.ಪ.॥ ಕಾಶಿಗೆ ಹೋಗಲ್ಯಾರೆ ಕಾವಡಿಯನೆ ಪೊತ್ತು। ಬೇಸತ್ತು ತಿರುಗಲಿ ಯಾತಕೇ॥ ವಾಸುದೇವನ ನಾಮ ಒಲಿದೊಮ್ಮೆ ನೆನೆದರೆ। ಕ್ಲೇಶಗಳೆಲ್ಲವು ಲೇಶಮಾತ್ರದಿ ಕಾಣೆ॥1॥ ಸ್ನಾನವಮಾಡಲೇಕೆ ಮಾನವರು। ಮೌನವ್ರತಂಗಳ್ಯಾತಕೇ ದೀನಪಾಲಕ ನಮ್ಮ ಬೆಟ್ಟದೊಡೆಯನ್ನ। ಧ್ಯಾನಿಸಿ ನೆನೆಸುತ ಪುರಂದರ ವಿಠಲನ॥2॥

ಹರಿನಾರಾಯಣ ಹರಿನಾರಾಯಣ — ರಾಗ: ಶಂಕರಾಭರಣ-ಆದಿತಾಳ

ಹರಿನಾರಾಯಣ ಹರಿನಾರಾಯಣ ಹರಿನಾರಾಯಣ ಎನು ಮನವೆ॥ಪ॥ ನಾರಾಯಣನೆಂಬ ನಾಮದ ಬೀಜವ ನಾರದ ಬಿತ್ತಿದ ಧರೆಯೊಳಗೆ॥ಅ.ಪ.॥ ತರಳ ಧ್ರುವನಿಂದ ಅಂಕುರಿಸಿತು ಅದು। ವರ ಪ್ರಹ್ಲಾದನಿಂದ ಮೊಳಕೆಯಾಯ್ತು। ಧರಣೀಶ ರುಕುಮಾಂಗದನಿಂದ ಚಿಗುರಿತು। ಕುರು ಪಿತಾಮಹನಿಂದ ಹೂವಾಯ್ತು॥1॥ ವಿಜಯನ ಸತಿಯಿಂದ ಕಾಯಾಯಿತು। ಅದು ಗಜೇಂದ್ರನಿಂದ ದೋರೆ ಹಣ್ಣಾಯ್ತು। ಶ್ರೀ ಶುಕಮುನಿಯಿಂದ ಪರಿ ಪಕ್ವವಾಯಿತು। ಅಜಾಮಿಳ ತಾನುಂಡು ರಸ ಸವಿದ॥2॥ ಕಾಮಿತ ಫಲವೀವ ನಾಮವೊಂದಿರಲಾಗಿ। ಹೋಮ ನೇಮ ಜಪ ತಪವೇಕೆ। ಸ್ವಾಮಿ ಶ್ರೀ ಪುರಂದರವಿಠಲನ ನಾಮವ। ನೇಮದಿಂದ ನೀ ನೆನೆ ಮನವೇ॥3॥

ಕಾವುದೆಮ್ಮನು ಜಗವ ಕಾವಕರುಣಿಯೆ

ಕಾವುದೆಮ್ಮನು ಜಗವ ಕಾವಕರುಣಿಯೆ॥ಪ॥ ಈವುದೆಮ್ಮಗೆ ಸಕಲ ಸುಖವ ದೇವ ಲಕುಮಿ ನಾರಾಯಣ॥ಅ.ಪ॥ ಕಮಲ ಕರ್ಣಿಕೆ ಮಧ್ಯದಲ್ಲಿ। ವಿಮಲವಿಹಂಗಮ ಪತಿಯಶಿರಧಿ। ಕಮಲಭವನು ಬಿಡದೆ ಪೂಜಿಪ। ಅಮರಕುಲ ಲಲಾಮ ವಿಭೋ॥1॥ ಮಧ್ವಮುನಿಯ ಕರಗಳೆಂಬೊ ಪದ್ಮದಿಂದಪೂಜಿತ ಚರಣ। ಗೆದ್ದು ಕುಜನತತಿಯ ಸುಜನರುದ್ಧರಿಸುವ ಸುಗುಣನಿಧೇ॥2॥ ಶಂಖಚಕ್ರಗದಾಪದುಮ ಅಂಕೆಗಳಿಂದ ಶೋಭಿತಕರ। ಪಂಕಜಾಕ್ಷ ಪಯೋಧಿ ಶಯನ ಶಂಕೆಯಿಲ್ಲದ ಹಯವದನ॥3॥

ನಾರಾಯಣ ತೇ ನಮೋ ನಮೋ — ರಾಗ: ಜುಂಜೋಟಿ-ಆದಿತಾಳ

ನಾರಾಯಣ ತೇ ನಮೋ ನಮೋ ಭವ। ನಾರದ ಸನ್ನುತ ನಮೋ ನಮೋ॥ಪ॥ ಮುರಹರ ನಗಧರ ಮುಕುಂದ ಮಾಧವ। ಗರುಡಗಮನ ಪಂಕಜನಾಭ॥ ಪರಮಪುರುಷ ಭವ ಭಂಜನ ಕೇಶವ। ನರಹರಿ ಶರೀರ ನಮೋ ನಮೋ॥1॥ ಜಲಧಿಶಯನ ರವಿ ಚಂದ್ರ ವಿಲೋಚನ। ಜಲರುಹ ಭವನುತ ಚರಣಯುಗ। ಬಲಿಭಂಜನ ಗೋವರ್ಧನವಲ್ಲಭ। ನಳಿನೋದರ ತೇ ನಮೋ ನಮೋ॥2॥ ಆದಿದೇವ ಸಕಲಾಗಮ ಪೂಜಿತ। ಯಾದವಕುಲ ಮೋಹನರೂಪ। ವೇದೋದ್ಧಾರ ಶ್ರೀ ವೇಂಕಟನಾಯಕ। ಪುರಂದರವಿಠಲ ತೇ ನಮೋ ನಮೋ॥3॥

ನಾರಾಯಣ ನಿನ್ನ ನಾಮದ ಸ್ಮರಣೆಯ — ರಾಗ: ಶುದ್ಧಧನ್ಯಾಸಿ

ನಾರಾಯಣ ನಿನ್ನ ನಾಮದ ಸ್ಮರಣೆಯ ಸಾರಾಮೃತವೆನ್ನ ನಾಲಿಗೆಗೆ ಬರಲಿ॥ಪ॥ ಕೂಡುವಾಗಲಿ ನಿಂತಾಡುವಾಗಲಿ ಮತ್ತೆ ಹಾಡುವಾಗಲಿ ಹರಿದಾಡುವಾಗಲಿ ಖೋಡಿ ವಿನೋದದಿ ನೋಡದೆ ನಾ ಬಲು ಮಾಡಿದ ಪಾಪ ಬಿಟ್ಟೋಡಿ ಹೋಗೋಹಾಂಗೆ॥1॥ ಊರಿಗೆ ಹೋಗಲಿ ಊರೊಳ ಗಿರಲಿ ಕರಣಾರ್ಥಂಗಳೆಲ್ಲ ಕಾದಿರಲಿ। ವಾರಿಜನಾಭ ನರಸಾರಥಿ ನಿನ್ನನು ಸಾರಿಸಾರಿಗೆ ನಾ ಬೇಸರದ್ಹಾಂಗೆ॥2॥ ಹಸಿದಿದ್ದಾಗಲಿ ಹಸಿವಿಲ್ಲದಾಗಲಿ। ಕಸಿವಿಸಿಯಿರಲಿ ಹರುಷವಿರಲಿ। ವಸುದೇವಾತ್ಮಕ ಶಿಶುಪಾಲಕ್ಷಯ ಅಸುರಾಂತಕ ನಿನ್ನ ಹೆಸರು ಮರೆಯದ್ಹಾಂಗೆ॥3। ಕಷ್ಟದಲಿರಲಿ

ಉತ್ಕೃಷ್ಟದಲ್ಲಿರಲಿ। ಎಷ್ಟಾದರೂ ಮತಿಗೆಟ್ಟಿರಲಿ। ಕೃಷ್ಣ ಕೃಷ್ಣಾ ಎಂದು ಶಿಷ್ಯರು ಪೇಳುವ। ಅಷ್ಟಾಕ್ಷರ ಮಹಾಮಂತ್ರದ ನಾಮದ॥4॥ ಕನಸಿನೊಳಾಗಲಿ ಕಳವಳಿಕಾಗಲಿ ಮನಸುಗೊಟ್ಟಿರಲಿ ಮುನಿದಿರಲಿ। ಜನಕಜಾಪತಿ ನಿನ್ನ ಚರಣಕಮಲವನ್ನು ಮನಸಿನೊಳಗೆ ಒಮ್ಮೆ ನೆನೆಸಿಕೊಳ್ಳೋ ಹಾಂಗೆ॥5॥ ಜ್ವರ ಬಂದಾಗಲಿ ಚಳಿ ಬಂದಾಗಲಿ ಮರಳಿ ಮರಳಿ ಮತ್ತೆ ನಡುಗುವಾಗಲಿ। ಹರಿನಾರಾಯಣ ದುರಿತನಿವಾರಣನೆಂದು ಇರುಳು ಹಗಲು ನಿನ್ನ ಸ್ಮರಣೆ ಮರೆಯದ್ದಾಂಗೆ॥6॥ ಸಂತತ ಹರಿ ನಿನ್ನ ಸಾಸಿರನಾಮವ। ಅಂತರಂಗದ ಒಳಗಿರಿಸಿ। ಎಂತೋ ಪುರಂದರವಿಠ್ಠಲ ರಾಯನೆ। ಅಂತ್ಯಕಾಲದಲ್ಲಿ ಚಿಂತಿಸೊಹಾಂಗೆ॥7॥

ನಾರಾಯಣ ಎನಬಾರದೆ **ರಾಗ: ಕಲ್ಯಾಣಿ-ಆದಿತಾಳ**

ನಾರಾಯಣ ಎನಬಾರದೆ? ನಿಮ್ಮ ನಾಲಿಗೆಯೊಳು ಮುಳ್ಳು ಮುರಿದಿಹುದೆ?॥ಪ॥ ವಾರಣಾಸಿಗೆ ಪೋಗಿ ದೂರ ಬಳಲಲೇಕೆ। ನೀರ ಕಾವಡಿ ಪೊತ್ತು ತಿರುಗಲೇಕೆ। ಊರೂರು ತಪ್ಪದೆ ದೇಶಾಂತರವೇಕೆ। ದಾರಿಗೆ ಸಾಧನವಲ್ಲವೆ ಹರಿ ನಾಮ॥1॥ ನಿತ್ಯ ಉಪವಾಸವಿದ್ದು ಹಸಿದು ಬಳಲಲೇಕೆ। ಮತ್ತೆ ಚಳಿಯೊಳು ಗಂಗೆ ಮುಳುಗಲೇಕೆ। ಹಸ್ತವ ಪಿಡಿದು ಮಾಡುವ ಜಪತಪವೇಕೆ। ಮುಕ್ತಿಗೆ ಸಾಧನವಲ್ಲವೆ ಹರಿನಾಮ॥2॥ ಸತಿಸುತರನು ಬಿಟ್ಟು ಯತಿಗಳಾಶ್ರಮವೇಕೆ। ವ್ರತಕೃಚ್ಛ್ರನೇಮ ನಿಷ್ಠೆಗಳೇತಕೆ। ಪೃಥ್ವಿಯೊಳಗೆ ನಮ್ಮ ಪುರಂದರವಿಠಲನ। ಅತಿಭಕುತಿಯಿಂದೊಮ್ಮೆ ನೆನೆದರೆ ಸಾಲದೆ॥3॥

ನಾರಾಯಣಾ ಎನ್ನಿರೋ **ರಾಗ: ಕಲ್ಯಾಣಿ-ಆದಿತಾಳ**

ನಾರಾಯಣಾ ಎನ್ನಿರೋ ಸಜ್ಜನರೆಲ್ಲ॥ಪ॥ ಸಾರ ರಹಿತ ಸಂಸಾರದಲಿ ಪರಸಾರ ಇದು ಎಂದು ಸಂಸಾರಿ ನೀವೆಲ್ಲ॥ಅ.ಪ.॥ ಇಹಪರ ಸುಖವುಂಟೋ ಇದರ ಫಲ ಬಹಳ ಕಟ್ಟಿದ ಗಂಟೋ। ಘನಮಹಿಮಗೆ ಇದು ಮಹಾಮಹಿಮೆ ಇದಲ್ಲದೆ ಮಹಿಯೊಳಗಿದು ಮಹಾರಸವಾದಂಥ ಮಂತ್ರವು ಮಹಭಕುತಿ ಪೂರ್ವಕವಾಗಿ ಒಮ್ಮೆ॥1॥ ಚೋರನೆಂದೆನದೆ ಚಿತ್ತದಲಿ ಜಾರನೆಂದೆಣಿಸದೆ। ಸ್ಮರಣೆ ಮಾತ್ರದಲಿ ಬಹಳ ಪಾರರಹಿತ ಅನರ್ಥಸಂಚಿತ। ಹರಣ ಮಾಡುವ ಪವನಪ್ರಿಯ ಸರ್ವರಂತರ ಹಯವದನ॥2॥

ನಾರಾಯಣಾ ನಿನ್ ನಾಮಸ್ಮರಣಂ (ತಮಿಳು) **ರಾಗ: ಶುದ್ಧಧನ್ಯಾಸಿ**

ನಾರಾಯಣಾ ನಿನ್ ನಾಮಸ್ಮರಣಂ ಎನ್ ನಾವಿಲ್ ಎಪ್ಪೋದುಂ ಅಮೃತಮಾಯ್ ಒಳಿಕ್ಕಣಂ॥ಪ॥ ದುರಿತಂಗಳ್ ಪಲದುಂ ನೀಂಡಿ ಕಡಕ್ಕುಂಬೋಳ್। ನಿನ್ ಅಪಾರ ಮಹಿಮ ನಾನ್ ಪಾಡಿ ಪುಗಳ್‌ದಿಡಣುಂ॥ ಕೃಷ್ಣ ಕೃಷ್ಣ ನಿನ್ನುಡೈ ರೂಪಂ ಎನ್ ಮನಸಿಲುಂ। ಅಷ್ಟಾಕ್ಷರಮಂತ್ರಂ ಎನ್‌ನಾವಿಲುಂ ವಂದಿಡಣುಂ॥1॥ ಸಂತತಂ ನಿನ್ ನಾಮಂ ಹರಿನಾನ್ ಪಾಡಿಡಣುಂ। ಎನ್ ಅಂತರಂಗತ್ತಿಲ್ ನೀ ನಡಮಾಡಿಡಣುಂ। ಮೋಹನ ರೂಪ ಕೃಷ್ಣ ಮಣಿವಣ್ಣ ಮಾಧವಾ। ಎನ್ ಅಂತ್ಯಕಾಲ ಸಮಯೇ ನಿನ್ ದರ್ಶನಂ ಅರುಳಿಡಣುಂ॥2॥

ನಾರಾಯಣ ನಾಮತ್ತೈ ನಾತಳುಂಬೇರ (ತಮಿಳು) **ರಾಗ: ಕಾನಡ-ಆದಿತಾಳ**

ನಾರಾಯಣ ನಾಮತ್ತೈ ನಾತಳುಂಬೇರ ಸೊಲ್ಲು। ನರಕತ್ತೈ ಪಾರ್ತು ನಗುನೇಂಜೇ ನೀ॥ಪ॥ ಪೂಮಗಳ್ ನಾಥನ್ನೈ ಪುರಾಣ ಪುರುಷನ್ನೈ ಪೋಟ್ರಿತುದಿತ್ತು ಅವನ್ ಅಡಿ ಫಣಿನೀ ನೆಂಜೇ॥ಅ.ಪ.॥ ನೀ ಎಪ್ಪಡಿ ಕೂಪಿಟ್ಟಾಲುಂ ಅಪ್ಪಡಿಯೇ ವರುವಾನ್। ತನ್ ಒಪ್ಪಾರುಂ ಮಿಕ್ಕಾರುಂ ಇಲ್ಲಾದವನ್ ಅವನ್। ಅನ್ನೈತ್ತೆಯುಂ ಕಾತ್ತುರಕ್ಷಿಕ್ಕುಂ ನಾಥನ್। ಆನಂದಮೂರ್ತಿ ಅವನ್ನೈ ಅಡೈಕಲಂಕೊಳ್ ನೆಂಜೇ॥1॥ ಧರಣೀನಾಥನ್ ಅವನ್ ದಯಾಸಾಗರನ್। ದಶರಥ ಪುತ್ರನ್ ದಶಕಂಠ ಮರ್ದನನ್। ತನ್ನಿಗರಿಲ್ಲಾದ ತನಿಪ್ಪೆರು ನಾಯಗನ್। ಅರವಿಂದ ಲೋಚನನ್ನೈ ಅಡೈಕಲಂ ಅಡೈ ನೆಂಜೇ॥2॥

ಸೇತುಬಂಧನ ನಾರಾಯಣ

ಸೇತುಬಂಧನ ನಾರಾಯಣ। ಕ್ಷೀರಾಬ್ಧಿಶಯನ ನಾರಾಯಣ॥ಪ॥ ಸೀತಾ ಕಾಂತ ನಾರಾಯಣ। ಶೇಷಶಯನ ನಾರಾಯಣ। ನಾರಾಯಣ ಹರಿ ನಾರಾಯಣ। ನಾರಾಯಣ ನಮೋ ನಾರಾಯಣ॥1॥ ಭವಭಯ ಹರಣ ನಾರಾಯಣ। ಭಕ್ತಜನ ಪ್ರಿಯ ನಾರಾಯಣ। ಕಾಮಿತ ಫಲದಾ ನಾರಾಯಣ। ಗೌತಮ ಪೂಜಿತ ನಾರಾಯಣ॥2॥ ಅಂಜನಾದ್ರಿವಾಸ ನಾರಾಯಣ। ಅಕಾರವಾಚ್ಯ ನಾರಾಯಣ। ಆತ್ಮಾರಾಮಾ ನಾರಾಯಣ। ಅನಂತ ಶಯನ ನಾರಾಯಣ॥3॥ ರಘುಕುಲ ಭೂಷಣ ನಾರಾಯಣ। ರಾಜೀವನೇತ್ರ ನಾರಾಯಣ। ಶ್ರೀನಿಕೇತನ ನಾರಾಯಣ। ಶ್ರೀದೇವಿ ಕಾಂತ ನಾರಾಯಣ॥4॥ ಭರತಾಗ್ರಜ ಹರಿ ನಾರಾಯಣ। ಪರಮ ಪವಿತ್ರ ನಾರಾಯಣ। ಪ್ರಹ್ಲಾದ ವರದ ನಾರಾಯಣ। ಬ್ರಹ್ಮಸ್ವರೂಪ ನಾರಾಯಣ॥5॥ ನರಮೃಗರೂಪ ನಾರಾಯಣ। ನಾಮಗಿರೀಶ ನಾರಾಯಣ। ನರಕಾಂತಕನೆ ನಾರಾಯಣ। ನಳಿನಲೋಚನ ನಾರಾಯಣ॥6॥ ಗರುಡಾರೂಢ ನಾರಾಯಣ। ಖಗಪತಿ ವಾಹನ ನಾರಾಯಣ। ಕರುಣಾ ಜಲಧೇ ನಾರಾಯಣ। ಗೋಕುಲಾಂಬುಧಿ ನಾರಾಯಣ॥7॥ ಶಾಂತಮೂರ್ತೇ ನಾರಾಯಣ। ಚತುರ್ಭುಜರೂಪ ನಾರಾಯಣ। ಜನಕಜಾರಮಣ ನಾರಾಯಣ। ಜಾನಕಿಪ್ರಿಯ ನಾರಾಯಣ॥8॥ ಆನಂದರೂಪ ನಾರಾಯಣ। ಅಖಿಲಲೋಕೇಶ ನಾರಾಯಣ।ಅರಣ್ಯ ವಾಸ ನಾರಾಯಣ। ಅಚ್ಯುತಾನಂತಹರಿ ನಾರಾಯಣ॥9॥ ಮಂದರೋದ್ಧಾರ ನಾರಾಯಣ। ಮಧುಕೈಟಭಹರ ನಾರಾಯಣ। ಮಧುಸೂಧನ ಹರಿ ನಾರಾಯಣ। ಗೋವರ್ಧನೋದ್ಧಾರ ನಾರಾಯಣ॥10॥ ಗೋಪಿ ವಲ್ಲಭ ನಾರಾಯಣ। ಪಂಕಜ ನೇತ್ರ ನಾರಾಯಣ। ಪನ್ನಗ ಶಾಯಿ ನಾರಾಯಣ। ಪದ್ಮನಾಭ ನಾರಾಯಣ। ಬ್ರಹ್ಮವಂದಿತ ನಾರಾಯಣ॥11॥ಸಾಧುರಕ್ಷಕಹರಿ ನಾರಾಯಣ। ಶಬರೀ ಮೋಕ್ಷ ಹರಿ ನಾರಾಯಣ। ಸರಸಿಜ ನಾಭ ಹರಿ ನಾರಾಯಣ। ಮುಚುಕುಂದ ವರದ ಹರಿ ನಾರಾಯಣ॥12॥ ಮೋಕ್ಷದಾಯಕ ಹರಿ ನಾರಾಯಣ। ಮೋಹನ ರೂಪ ಹರಿ ನಾರಾಯಣ।ವಸುದೇವಪುತ್ರ ಹರಿ ನಾರಾಯಣ। ವಾಸವಿರಮಣ ಹರಿ ನಾರಾಯಣ॥13॥ ವೈಕುಂಠವಾಸ ಹರಿ ನಾರಾಯಣ। ಶ್ವೇತವರಾಹ ಹರಿ ನಾರಾಯಣ। ಸುಧಾರಮಣ ಹರಿ ನಾರಾಯಣ। ಶಾಶ್ವತ ನಿಧೇ ಹರಿ ನಾರಾಯಣ॥14॥ ಆದಿಶೇಷ ತಲ್ಪ ಹರಿ ನಾರಾಯಣ। ಅಪ್ರಮೇಯ ಹರಿ ನಾರಾಯಣ। ಅನಾಥರಕ್ಷಕ ಹರಿ ನಾರಾಯಣ। ಕರುಣಾ ಸಮುದ್ರ ಹರಿ ನಾರಾಯಣ॥15॥ ಕಾರುಣ್ಯ ರೂಪ ಹರಿ ನಾರಾಯಣ। ಕಮನೀಯಾನನ ಹರಿ ನಾರಾಯಣ। ನಾಗಶಯನ ಹರಿ ನಾರಾಯಣ। ನಾಗವಂದ್ಯ ಹರಿ ನಾರಾಯಣ॥16॥ ನರಹರಿ ಮುರಹರ ಹರಿ ನಾರಾಯಣ। ದಶರಥ ನಂದನ ಹರಿ ನಾರಾಯಣ। ದಶಮುಖ ಮರ್ಧನ ಹರಿ ನಾರಾಯಣ। ದಾರುಣವನಸ್ಥಿತ ಹರಿ ನಾರಾಯಣ॥17॥ ಗರುಡಗಮನ ಹರಿ ನಾರಾಯಣ। ಕಾಮಿತಫಲದಾ ಹರಿ ನಾರಾಯಣ। ಕೌಸ್ತುಭಧಾರಿ ಹರಿ ನಾರಾಯಣ। ಪದ್ಮಪತ್ರ ಲೋಚನ ಹರಿ ನಾರಾಯಣ॥18॥ ಪರಮಾನಂದ ಹರಿ ನಾರಾಯಣ। ಬಹುವಿಧರೂಪ ಹರಿ ನಾರಾಯಣ। ಕಮಲಪತ್ರಾಕ್ಷ ಹರಿ ನಾರಾಯಣ। ಕಂದರ್ಪಜನಕ ಹರಿ ನಾರಾಯಣ॥19॥ ಕಮಲಾ ವಲ್ಲಭ ಹರಿ ನಾರಾಯಣ। ಇಂದುವದನ ಹರಿ ನಾರಾಯಣ। ಇಂದಿರಾ ರಮಣ ಹರಿ ನಾರಾಯಣ। ಸುಂದರರೂಪ ಹರಿ ನಾರಾಯಣ॥20॥ ಸೂಕ್ಷ್ಮಸ್ವರೂಪ ಹರಿ ನಾರಾಯಣ। ಮಕರಕುಂಡಲಧರ ಹರಿ ನಾರಾಯಣ। ಮನ್ಮಥರೂಪ ಹರಿ ನಾರಾಯಣ। ಮಾಧವಿರಮಣ ಹರಿ ನಾರಾಯಣ॥21॥ ಭಕ್ತವತ್ಸಲ ಹರಿ ನಾರಾಯಣ। ಪಂಚಾಯುಧಧರ ಹರಿ ನಾರಾಯಣ। ಸೇತುಬಂಧನ ಹರಿ ನಾರಾಯಣ। ಸಾಧು ಸಂರಕ್ಷಕ ಹರಿ ನಾರಾಯಣ॥22॥ ವೇದವೇದ್ಯ ಹರಿ ನಾರಾಯಣ। ವೇಂದಾಂತಸಾರ ಹರಿ ನಾರಾಯಣ। ವೈದಿಕಪ್ರಿಯ ಹರಿ ನಾರಾಯಣ। ನಾರಾಯಣ ಹರಿ ನಾರಾಯಣ॥23॥

ಯಾರು ನನಗೆ ಗತಿಯೆಂದು ನಾರಾಯಣ

ಯಾರು ನನಗೆ ಗತಿಯೆಂದು ನಾರಾಯಣ। ಸೇರುವೆ ನಿನ್ನ ಪಾದ ನಾರಾಯಣ। ದೇಹದಾಸೆ ಬಿಡಿಸೊ ನಾರಾಯಣ। ಸಾಧು ಜನದೊಳಗೆ ಸೇರಿಸೋ ನಾರಾಯಣ। ಪರಿಪರಿ ಚಿಂತೆಯಲಿ ನಾರಾಯಣ। ಮರೆತು ಬಿಟ್ಟೇನು ನಾನು

ನಾರಾಯಣ। ಅಂದು ಅಜಮಿಳನ ನಾರಾಯಣ। ಒಂದೇ ಮಾತಲಿ ಕಾಯ್ದೆಯೋ ನಾರಾಯಣ। ನಾರಿ ದ್ರೌಪದಿಯನು ನಾರಾಯಣ। ಸೀರೆಯನು ಸೆಳೆವಾಗ ನಾರಾಯಣ। ಅಕ್ರೂರ ವರದನೆ ನಾರಾಯಣ। ಸ್ವಾಮಿ ಚಕ್ರಧರ ಗೋವಿಂದನೆ ನಾರಾಯಣ। ರಕ್ಕಸಾಂತಕ ಸ್ವಾಮಿ ನಾರಾಯಣ। ರುಕ್ಮಿಣಿ ಪತಿ ನೀನು ನಾರಾಯಣ। ಅಂಗಿಪೀತಾಂಬರ ನಾರಾಯಣ। ಚಂದದಲಿ ಬಿಗುದುಟ್ಟು ನಾರಾಯಣ। ಆಕಳ ಬಾಲವನು ನಾರಾಯಣ। ವೈತರಣಿಯನು ದಾಟಿಸೋ ನಾರಾಯಣ। ಶೇಷನಾ ಹಾಸಿಗೆ ಮೇಲೆ ನಾರಾಯಣ। ನೀನು ಹಾಸಿ ಮಲಗಿದೆಯೋ ನಾರಾಯಣ। ಆಪತ್ತು ಬಂದಾಗ ನಾರಾಯಣ ಅನಾದಿ ರಕ್ಷಕ ನಾರಾಯಣ।।

ಕೃಪಾಸಮುದ್ರಂ ಭಜ ಹೇ ಮಾನಸ **ರಾಗ: ಧರ್ಮವತಿ-ಆದಿತಾಳ**

ಕೃಪಾಸಮುದ್ರಂ ಭಜ ಹೇ ಮಾನಸ। ಶ್ರೀಕೃಷ್ಣರುಕ್ಮಿಣಿಕಾಂತಂ।।ಪ।। ಸಮಾನ ರಹಿತಂ ಸತ್ವಗುಣ ನಿಧಿಂ ಸರಸಿಜಾಕ್ಷಿನುತ ಸಾರಸನಾಭಂ ಹರಿಂ।।ಅ.ಪ।। ಶ್ರೀಕಿಪಿಂಚ ಭಕ್ತಕೇಶಂ ಕೇಶವಂ ಮುರಾರಿಪುಂ। ಶಂಖಚಕ್ರಧರ ಹಸ್ತಂ ಕೌಸ್ತುಭ ಧಾರಿಣಂ। ವನಮಾಲಾ ವಿರಾಜಿತಂ ವೈಕುಂಠ ನಿಲಯಂ। ವಿಲಸಿತ ವೇಣು ಹಸ್ತಂ ವಿರಾಜಮಾನ ಹರಿಂ।।ಚ।।

ತೋರೋ ಸುಂದರಾಂಗ **ರಾಗ: ಕುಂತಲವರಾಳಿ-ಏಕತಾಳ**

ತೋರೋ ಸುಂದರಾಂಗ ನಿನ್ನ ರೂಪವ। ಮಾರನಜನಕ ಶ್ರೀ ಚೆಲುವನಾರಾಯಣ।।ಪ।। ವಾರಿಧಿಯಲಿ ಆದಿಶೇಷನ ಮೇಲೆ ಮಲಗಿ ವಾರಿಜೆ ಲಕುಮಿಯಿಂ ಸೇವೆಯ ಕೈಗೊಳ್ವೆ।।ಅ.ಪ।। ದುಷ್ಟ ಶಿಕ್ಷಕನಾಗಿ ಶಿಷ್ಟ ಪಾಲಕನಾಗಿ। ಇಷ್ಟಾರ್ಥ ಸಲ್ಲಿಸಲಿಕೆ ಅವತಾರಗಳ ತಳೆದೆ। ನಿಷ್ಠೆಯಿಂ ನಿನ್ನಯ ಸೇವೆಮಾಳ್ಪ ಭಕ್ತರಿಗೆ। ಕಷ್ಟವೊಂದಿಷ್ಟಿಲ್ಲವೊ ಸೃಷ್ಟಿಗೊಡೆಯ ಸ್ವಾಮಿ।।1।। ಬಲ್ಲಿದನಾಗಿ ಭಕ್ತ ಪಂಚಪಾಂಡವರ ಪೊರೆದೆ। ಮಲ್ಲಮರ್ದನನಾಗಿ ಕಂಸನ ಅಸು ಸೆಳೆದೆ। ಸೊಲ್ಲ ಕೇಳಿ ಲಲನೆ ದ್ರೌಪದಿಯ ಸಮಯಕೆ ಬಂದೆ। ಫುಲ್ಲಲೋಚನ ಕೃಷ್ಣ ದೇವೀರುಕ್ಮಿಣೀ ಒಡೆಯ।।2।।

ಧ್ಯಾನದಲಿ ಮೈ ಮರೆತು **ರಾಗ: ಭೌಳಿ-ಆದಿತಾಳ**

ಧ್ಯಾನದಲಿ ಮೈ ಮರೆತು ಕನಸೊಂದ ನಾ ಕಂಡೆ। ಬದರಿನಾರಾಯಣನ ದಿವ್ಯ ದರುಶನ ಕಂಡೆ।।ಪ।। ಅತಿ ಸುಂದರವಾದ ಹಿಮಶಿಖರವ ಕಂಡೆ। ಶಿಖರದಿ ನೆಲೆಸಿರುವ ನಾರಾಯಣನ ಕಂಡೆ। ಎಡಬಲದಿ ಸೇವಿಸುವ ಗರುಡ ನಾರದನ ಕಂಡೆ। ಮೈ ಮರೆತು ಧ್ಯಾನಿಸುವ ಭಕ್ತರನು ನಾ ಕಂಡೆ।।1।। ಪೀತಾಂಬರ ವಜ್ರಕಿರೀಟ ಮುಕುಟದಿ ಕಂಡೆ। ಅಭಯ ಹಸ್ತದಿ ಶಂಕು ಚಕ್ರವನು ನಾ ಕಂಡೆ। ನಂದಾದೀಪಗಳ ಬೆಳಕನ್ನು ನಾ ಕಂಡೆ। ಶತಕೋಟಿ ಸೂರ್ಯ ಕಿರಣದ ತೇಜವನು ಕಂಡೆ।।2।। ಪತ್ರ ಪುಷ್ಪ ಅರ್ಪಿಸುವ ಮನುಜರನು ನಾ ಕಂಡೆ। ಮಿಂದು ಸೇವೆ ಮಾಡುವವರ ಕಂಡೆ। ಪಾದಸೇವೆ ಮಾಡುವ ಸರ್ಪರನು ನಾ ಕಂಡೆ। ರಕ್ಷಿಸು ಕುಕ್ಕೆ ಸ್ವಾಮಿ ಎಂದು ಬೇಡುವರನು ಭಕ್ತಿಲಿ ಕಂಡೆ।।3।।

ನಾರಾಯಣ ಹರಿ

ನಾರಾಯಣ ಹರಿ। ನಾರಾಯಣ ಹರಿ। ನಾರಾಯಣ ಹರಿ ಭಜೋರೇ। ರಾಮಕೃಷ್ಣ ಹರಿ ಮದನ ಗೋಪಾಲ। ಗೋಪಿ ಕೃಷ್ಣ ಹರಿ ಶ್ಯಾಮ ಗೋಪಾಲ। ಗೋಪಿ ಗೋಪಾಲ ಗೋಪಿ ಗೋಪಾಲ।ಗೋಪಿ ಗೋಪಾಲ ನ ಭಜೋರೆ।।

ನಾರಾಯಣನೆಂಬ ನಾಮದ ಬೀಜವ **ರಾಗ: ಶಂಕರಾಭರಣ-ಆದಿತಾಳ**

ನಾರಾಯಣನೆಂಬ ನಾಮದ ಬೀಜವ। ನಿಮ್ಮ ನಾಲಿಗೆ ತುದಿಯಿಂದಲಿ ಬಿತ್ತಿರಯ್ಯ।।ಪ।। ಹೃದಯ ಹೊಲವ ಮಾಡಿ। ಮನವ ನೇಗಿಲ ಮಾಡಿ। ಶ್ವಾಸೋಚ್ಛ್ವಾಸ ಎರಡೆತ್ತು ಮಾಡಿ। ಜ್ಞಾನವೆಂಬ ಹಗ್ಗ ಕಣ್ಣಿಯ ಮಾಡಿ। ನಿರ್ಮಮವೆಂಬ ಗುಂಟೆಲಿ ಹರವಿರಯ್ಯ।।1।। ಮದ ಮತ್ಸರಗಳೆಂಬ ಮರಗಳನೆ ತರಿದು। ಕಾಮಕ್ರೋಧಗಳೆಂಬ ಕಳೆಯ ಕಿತ್ತಿ। ಪಂಚೇಂದ್ರಿಯವೆಂಬ ಮಂಚಿಕೆಯನೆ ಹಾಕಿ। ಚಂಚಲವೆಂಬ ಹಕ್ಕಿಯ ಹೊಡೆಯಿರಯ್ಯ।।2।। ಉದಯಾಸ್ತಮಾನವೆಂಬ ಎರಡು ಕೊಳಗದಲ್ಲಿ। ಆಯುಷ್ಯವೆಂಬ ರಾಶಿ ಅಳೆಯುತಿರೆ। ಸ್ವಾಮಿ ಶ್ರೀ ಪುರಂದರವಿಠಲನ ನೆನೆದರೆ। ಪಾಪರಾಶಿಯ ಪರಿಹರಿಸುವನಯ್ಯ।।3।।

ಕಂಗೆಟ್ಟು ಬಂದೆನ್ನೈ ನಾರಾಯಣ — ರಾಗ: ಆನಂದಭೈರವಿ

ಕಂಗೆಟ್ಟು ಬಂದೆನ್ನೈ ನಾರಾಯಣ ಕೃಷ್ಣ। ಗಣಪನ ನೆನೆವೇನು ನಾರಾಯಣ ಕೃಷ್ಣ। ಸಕಲ ಕಾರ್ಯಸಿದ್ಧಿ ನಾರಾಯಣ ಕೃಷ್ಣ। ಸಕಲ ಸಂಪತ್ತು ಕಂಡ್ಯೆ ನಾರಾಯಣ ಕೃಷ್ಣ। ಬೃಂದಾವನದ ಸೇವೆ ನಾರಾಯಣ ಕೃಷ್ಣ। ಬಂದು ಮಾಡುವೆನಯ್ಯ ನಾರಾಯಣ ಕೃಷ್ಣ। ಚೆಂದದಲಿ ಸಾರಿಸಿ ನಾರಾಯಣ ಕೃಷ್ಣ। ಶಂಖುಚಕ್ರವನೀಡುವೆ ನಾರಾಯಣ ಕೃಷ್ಣ। ಪಂಚವರ್ಣವ ತುಂಬಿ ನಾರಾಯಣ ಕೃಷ್ಣ। ಪಚ್ಚೆಯ ಎಡೆಯಲ್ಲಿ ನಾರಾಯಣ ಕೃಷ್ಣ। ಶ್ರೀಕೃಷ್ಣಗರ್ಪಿಸುವೆ ನಾರಾಯಣ ಕೃಷ್ಣ। ಆಕಳ ತುಪ್ಪದಲಿ ನಾರಾಯಣ ಕೃಷ್ಣ। ದೀಪವನು ಹಚ್ಚುವೆನು ನಾರಾಯಣ ಕೃಷ್ಣ। ಕಾವೇರಿ ಉದಕವನು ನಾರಾಯಣ ಕೃಷ್ಣ। ತಾಲಿಯಲಿ ತಂದೆರೆವೆ ನಾರಾಯಣ ಕೃಷ್ಣ। ತುಂಗಭದ್ರೆ ಉದಕವನು ನಾರಾಯಣ ಕೃಷ್ಣ। ಗಿಂಡಿಯಲಿ ತಂದೆರೆವೆ ನಾರಾಯಣ ಕೃಷ್ಣ। ಕೇದಿಗೆ ಹೂವು ತಂದು ನಾರಾಯಣ ಕೃಷ್ಣ। ದೇವರಿಗೆ ಅರ್ಪಿಸುವೆ ನಾರಾಯಣ ಕೃಷ್ಣ। ಸಂಪಿಗೆ ಹೂವು ತಂದು ನಾರಾಯಣ ಕೃಷ್ಣ। ಸಂಪತ್ತಿನಿಂದರ್ಪಿಸುವೆನು ನಾರಾಯಣ ಕೃಷ್ಣ। ಜಾಜಿಹೂವು ತಂದು ನಾರಾಯಣ ಕೃಷ್ಣ। ತುಳಸಮ್ಮನಿಗೆ ಅರ್ಪಿಸುವೆನು ನಾರಾಯಣ ಕೃಷ್ಣ। ಸಣ್ಣಕ್ಕಿ ಅನ್ನವನು ನಾರಾಯಣ ಕೃಷ್ಣ। ಬೆಣ್ಣೆ ಕಾಯಿಸಿದ ತುಪ್ಪವನು ನಾರಾಯಣ ಕೃಷ್ಣ। ಹೆಸರು ಬೇಳೆ ತೊವ್ವೆ ನಾರಾಯಣ ಕೃಷ್ಣ। ಹಸಿ ಇಂಗು ಉಪ್ಪಾಕಿ ನಾರಾಯಣ ಕೃಷ್ಣ। ಬೆಲ್ಲ ಬಾಳೆ ಹಣ್ಣು ನಾರಾಯಣ ಕೃಷ್ಣ। ಎಲ್ಲವನು ಅರ್ಪಿಸುವೆನು ನಾರಾಯಣ ಕೃಷ್ಣ। ಗಗ್ಗುಳ ಸಂಬ್ರಾಣಿ ನಾರಾಯಣ ಕೃಷ್ಣ। ಧೂಪವನು ಅರ್ಪಿಸುವೆನು ನಾರಾಯಣ ಕೃಷ್ಣ। ಇಷ್ಟು ಮಾಡಿದವರಿಗೆ ನಾರಾಯಣ ಕೃಷ್ಣ ಏನಯ್ಯ ವರಗಳು ನಾರಾಯಣ ಕೃಷ್ಣ। ಮುಪ್ಪು ತಪ್ಪುವ ತನಕ ನಾರಾಯಣ ಕೃಷ್ಣ। ಮುತ್ತೈದೆತನ ಕೊಡು ನಾರಾಯಣ ಕೃಷ್ಣ। ಮುಪ್ಪು ತಪ್ಪಿದ ಮೇಲೆ ನಾರಾಯಣ ಕೃಷ್ಣ। ಮುಕ್ತಿಯನುಕೊಡು ಸ್ವಾಮಿ ನಾರಾಯಣ ಕೃಷ್ಣ। ನಾರಾಯಣ ಕೃಷ್ಣ ನಾರಾಯಣ ರಂಗ। ನಾರಾಯಣ ವೇದ ಪಾರಾಯಣ।

ಶ್ರೀಮನ್ನಾರಾಯಣ (ಶೃಂಗಾರ ಕೀರ್ತನಾಲು) — ರಾಗ: ಭೌಳಿ-ಆದಿತಾಳ

ಶ್ರೀಮನ್ನಾರಾಯಣ ಶ್ರೀಮನ್ನಾರಾಯಣ ಶ್ರೀಮನ್ನಾರಾಯಣ ನಿನ್ ಶ್ರೀಪಾದಮೇ ಶರಣು॥ಪ॥ ಕಮಲಾಸನ ಶ್ರೀಮುಖಿ ಕಮಲ ಕಮಲಜಿತ ಕಮಲಪ್ರಿಯ ಕಮಲೇಕ್ಷಣಾ। ಕಮಲಾಸನ ಹಿತ ಗರುಡ ಗಮನ ಶ್ರೀ ಕಮಲಾನಾಭ ನಿನ್ ಪಾದ ಕಮಲಮೆ ಶರಣು॥1॥ ಪರಮಯೋಗಿ ಜನ ಭಾಗದೇಯ ಶ್ರೀಪರಮ ಪುರುಷ ಪರಾತ್ಪರ। ಪರಮಾತ್ಮ ಪರಮಾಣು ರೂಪ ಶ್ರೀ ತಿರುವೆಂಕಟಗಿರಿ ದೇವಾಶರಣು॥2॥

ವರನಾರದ ನಾರಾಯಣ — ರಾಗ: ವಿಜಯಶ್ರೀ-ಆದಿತಾಳ

ವರನಾರದ ನಾರಾಯಣ। ಸ್ಮರಣಾನಂದಾನುಭವಮುಗಲ॥ಪ॥ ಶರದಿಂದು ನಿಭಾಪಘನಾ। ನಘ ಸಾರಮುಗಾನು ಬ್ರೋವುಮಿಕ॥ಅ.ಪ॥ ಸಕಲ ಲೋಕಮುಲಕು ಸದ್ಗುರುಡನುಚು। ಸದಾ ನೇ ನತಡನುಚು ಹರಿಯು। ಪ್ರಕಟಂಬುಗ ಕೀರ್ತಿನೊಸಂಗೆನೇ ಭಾವುಕ ತ್ಯಾಗರಾಜನುತ ॥ಪ॥ಚರಣ॥

ಓಂ ನಮಃ ಪ್ರಣವಾರ್ಥಾರ್ಥ (ಅಷ್ಟಾಕ್ಷರೀಮಂತ್ರ)

ಓಂ ನಮಃ ಪ್ರಣವಾರ್ಧಾರ್ಥ ಸ್ಥೂಲಸೂಕ್ಷ್ಮ ಕ್ಷರಾಕ್ಷರ। ವ್ಯಕ್ತಾವ್ಯಕ್ತ ಕಳಾತೀತ "ಓಂ"ಕಾರಾಯ ನಮೋನಮೋ॥ ನಮೋ ದೇವಾದಿದೇವಾಯ ದೇಹ ಸಂಚಾರ ಹೇತವೇ। ದೈತ್ಯ ಸಂಘವಿನಾಶಾಯ "ನ"ಕಾರಾಯ ನಮೋ ನಮಃ॥ ಮೋಹನಂ ವಿಶ್ವರೂಪಂಚ ಶಿಷ್ಟಾಚಾರ ಸುಪೋಷಿತಂ। ಮೋಹವಿಧ್ವಂಸಕಂ ವಂದೇ ಮೋಕಾರಾಯ ನಮೋನಮಃ॥ ನಾರಾಯಣಾಯ ನವ್ಯಾಯ ನರಸಿಂಹಾಯ ನಾಮಿನೇ। ನಾದಾಯ ನಾದಿನೇ ತುಭ್ಯಂ "ನಾ"ಕಾರಾಯ ನಮೋ ನಮಃ॥ ರಾಮಚಂದ್ರಂ ರಘುಪತಿಂ ಪಿತ್ರಾಜ್ಞಾ ಪರಿಪಾಲಕಂ। ಕೌಸಲ್ಯಾತನಯಂ ವಂದೇ "ರಾ" ಕರಾಯ ನಮೋ ನಮಃ॥ ಯಜ್ಞಾಯ ಯಜ್ಞಗಮ್ಯಾಯ ಯಜ್ಞರಕ್ಷಕರಾಯಚ। ಯಜ್ಞಾಂಗ ರೂಪಿಣೇ ತುಭ್ಯಂ ಯ ಕಾರಾಯ ನಮೋ ನಮಃ॥ ಣಾಕಾರಂ ಲೋಕ ವಿಖ್ಯಾತಂ ನಾನಾ ಜನ್ಮ ಕಲಪ್ರದಂ। ನಾನಾಭೀಷ್ಟ ಪ್ರದಂವಂದೇ "ಣಾ" ಕರಾಯ ನಮೋ ನಮಃ॥

ಯಜ್ಞಕರ್ತೇ ಯಜ್ಞಭರ್ತೇ ಯಜ್ಞರೂಪಾಯತೇ ನಮಃ। ಸುಜ್ಞಾನ ಗೋಚರಾಯಾಸ್ತು "ಯ"ಕಾರಾಯ ನಮೋನಮಃ।। ಓಂಕಾರ ಮಂತ್ರ ಸಂಯುಕ್ತಂ ನಿತ್ಯ ಧ್ಯಾಯಂತಿ ಯೋಗಿನಃ। ಕಾಮದಂ ಮೋಕ್ಷದಂ ತಸ್ಮೈ "ಓಂ"ಕಾರಾಯ ನಮೋನಮಃ।। ನಾರಾಯಣ ಪರಬ್ರಹ್ಮ ನಾರಾಯಣ ಪರಂತಪಃ। ನಾರಾಯಣ ಪರೋದೇವಃ ಸರ್ವಂ ನಾರಾಯಣ ಸ್ಸದಾ।।

ನಾರಾಯಣ ನಾರಾಯಣ ಜಯ ಗೋವಿಂದಹರೇ

ನಾರಾಯಣ ನಾರಾಯಣ ಜಯ ಗೋವಿಂದಹರೇ।। ನಾರಾಯಣ ನಾರಾಯಣ ಜಯ ಗೋಪಾಲಹರೇ।। ಕರುಣಾಪಾರಾವಾರ ವರುಣಾಲಯ ಗಂಭೀರ ನಾರಾಯಣ ನಾರಾಯಣ ....।।1।। ಘನನೀರದ ಸಂಕಾಶ ಕ್ರತಕಲಿ ಕಲ್ಮಶನಾಶ ನಾರಾಯಣ ನಾರಾಯಣ।।2।। ಯಮುನಾತೀರವಿಹಾರ ದೃತಕೌಸ್ತುಭಮಣಿಹಾರ। ನಾರಾಯಣ ನಾರಾಯಣ।।3।। ಪೀತಾಂಬರ ಪರಿಧಾನ ಸುರಕಲ್ಯಾಣ ನಿಧಾನ ನಾರಾಯಣ ನಾರಾಯಣ।।4।। ಮಂಜುಲಗುಂಜಾ ಭೂಷ ಮಾಯಾಮಾನುಷ ವೇಷ ನಾರಾಯಣ ನಾರಾಯಣ।।5।। ರಾಧಾಧರಮಧುರಸಿಕ ರಜನೀಕರಕುಲ ತಿಲಕ ನಾರಾಯಣ ನಾರಾಯಣ।।6।। ಮುರಲೀಗಾನ ವಿನೋದ ವೇದಸ್ತುತಭೂಪಾದ ನಾರಾಯಣ ನಾರಾಯಣ ।।7।। ಬರ್ಹಿನಿಬರ್ಹಾಪೀಡ ನಟನಾಟಕಫಣಿಕ್ರೀಡ ನಾರಾಯಣ ನಾರಾಯಣ।।8।। ವಾರಿಜ ಭೂಷಾಭರಣ ರಾಜೀವರುಕ್ಮಿಣಿ ರಮಣ ನಾರಾಯಣ ನಾರಾಯಣ ।।9।। ಜಲರುಹದಲ ನಿಭನೇತ್ರ ಜಗದಾರಂಭಕ ಸೂತ್ರ ನಾರಾಯಣ ನಾರಾಯಣ।।10।। ಪಾತಕರಜನೀಸಂಹರ ಕರುಣಾಲಯ ಮಾಮುದ್ಧರ ನಾರಾಯಣ ನಾರಾಯಣ ।।11।। ಅಘಬಕಕ್ಷಯ ಕಂಸಾರೇ ಕೇಶವಕೃಷ್ಣ ಮುರಾರೇ ನಾರಾಯಣ ನಾರಾಯಣ।।12।। ಹಾಟಕನಿಭಪೀತಾಂಬರ ಅಭಯಂ ಕುರು ಮೇ ಮಾವರ ನಾರಾಯಣ ನಾರಾಯಣ।।13।। ದಶರಥರಾಜಕುಮಾರ ದಾನವ ಮದಸಂಹಾರ ನಾರಾಯಣ ನಾರಾಯಣ ।।14।। ಗೋವರ್ಧನಗಿರಿರಮಣ ಗೋಪೀ ಮಾನಸಹರಣ ನಾರಾಯಣ ನಾರಾಯಣ ।।15।। ಸರಯೂ ತೀರವಿಹಾರ ಸಜ್ಜನ ಋಷಿ ಮಂದಾರ ನಾರಾಯಣ ನಾರಾಯಣ ।।16।। ವಿಶ್ವಾಮಿತ್ರ ಮಕತ್ರ, ವಿವಿಧ ಪರಾಸುಚರಿತ್ರ ನಾರಾಯಣ ನಾರಾಯಣ।।17।। ಧ್ವಜವ ಜ್ರಾಂಕುಶಪಾದ ಧರಣೀಸುತ ಸಹಮೋದ ನಾರಾಯಣ ನಾರಾಯಣ।।18।। ಜನಕಸುತಾ ಪ್ರತಿಪಾಲ ಜಯಜಯ ಸಂಸ್ಮೃತಿಲೀಲ ನಾರಾಯಣ ನಾರಾಯಣ ।।19।। ದಶರಥ ವಾಗ್ಧೃತಿಧಾರ ದಂಡಕವನ ಸಂಚಾರ ನಾರಾಯಣ ನಾರಾಯಣ।।20।। ಮುಷ್ಟಿಕ ಚಾಣೂರ ಸಂಹಾರ ಮುನಿಮಾನಸ ವಿಹಾರ ನಾರಾಯಣ ನಾರಾಯಣ।।21।। ವಾಲಿವಿನಿಗ್ರಹಶೌರ್ಯ, ವರಸುಗ್ರೀವಹಿತಾರ್ಯ ನಾರಾಯಣ ನಾರಾಯಣ।।22।। ಮಾಂ ಮುರಲೀ ಕರಧೀವರ ಪಾಲಯ ಪಾಲಯ ಶ್ರೀಧರ ನಾರಾಯಣ ನಾರಾಯಣ।।23।। ಜಲನಿಧಿ ಬಂಧನ ವೀರ, ರಾವಣ ಕಂಠವಿದಾರ ನಾರಾಯಣ ನಾರಾಯಣ ।।24।। ತಾಟೀಮದದಲನಾಢ್ಯ, ನಟಗುಣವಿವಿಧ ಧನಾಢ್ಯ ನಾರಾಯಣ ನಾರಾಯಣ।।25।। ಗೌತಮಪತ್ನಿ ಪೂಜನ, ಕರುಣಾಘನಾವಲೋಕನ ನಾರಾಯಣ ನಾರಾಯಣ।।26।। ಸಂಭ್ರಮ ಸೀತಾ ಹಾರ, ಸಾಕೇತಪುರವಿಹಾರ ನಾರಾಯಣ ನಾರಾಯಣ ।।27।। ಅಚಲೋದ್ಧೃತಿ-ಚಂಚತ್ಕರ ಭಕ್ತಾನುಗ್ರಹತತ್ಪರ ನಾರಾಯಣ ನಾರಾಯಣ ।।28।। ನೈಗಮಗಾನ ವಿನೋದ, ರಕ್ಷಃ ಸುತಪ್ರಹ್ಲಾದ ನಾರಾಯಣ ನಾರಾಯಣ।।29।। ಭಾರತಿಯತಿವರ ಶಂಕರ, ನಾಮಾಮೃತ ಮಖಿಲಾಂತರ ನಾರಾಯಣ ನಾರಾಯಣ।।30।।

ಮೇಲುಕೋಟೆಯಲ್ಲಿರುವ ಚೆಲುವನಾರಾಯಣನೆ ರಾಗ: ಶಿವರಂಜನಿ

ಮೇಲುಕೋಟೆಯಲ್ಲಿರುವ ಚೆಲುವನಾರಾಯಣನೆ। ನಿನ್ನ ಚೆಲುವಿಗೆ ನಾವು ಮನಸೋತೆವು। ರಮ್ಯ ಪ್ರಕೃತಿಯ ನಡುವೆ ನೀನಿರಲು ದೇವನೆ। ನಿನ್ನ ಪಾದಕೆ ನಾವು ಶರಣಾದೆವು।।1।। ಜಗದ ಚೆಲುವೆಲ್ಲವು ನಿನ್ನಲ್ಲಿ ತುಂಬಿರಲು। ಚೆಲುವ ಚೆನ್ನಿಗರಾಯ ನೀನು ಹರಿಯೆ। ಜಗವ ರಕ್ಷಿಸಲೆಂದು ನೀನಿಲ್ಲಿ ಬಂದಿರಲು। ನಿನ್ನ ನೆಚ್ಚಿದೆವಯ್ಯ ನಾವು ಹರಿಯೆ।।2।। ವೇದಘೋಷದ ನಡುವೆ ಪೂಜೆ ನಡೆಯುತ್ತಿರಲು। ನೋಡಲೇನಾನಂದ ವೇದಾಂತ ಸಾರ। ಹಾಲಿನಭಿಷೇಕವ ನಿನಗೆ

ಮಾಡುತ್ತಿರಲು। ಹಾಲಂತೆ ನಗುತಿರುವೆ ಚಿತ್ತ ಚೋರ॥3॥ ವೈರ ಮುಡಿಯನು ಧರಿಸಿ ವೈಭವದಿ ನೀನಿರಲು। ವೈಕುಂಠವೇ ಧರೆಗೆ ಬಂದ ಹಾಗೆ। ಧೂಪ ದೀಪದ ನಡುವೆ ನಿನ್ನ ಮುಖ ಮಿಂಚಿರಲು। ನಮ್ಮೆದುರು ನೀ ಬಂದು ನಿಂತಹಾಗೆ॥4॥

ಕಾವೇರಿ ಜೋಗುಳಕ್ಕೆ ಮೈ ಮರೆತು **ರಾಗ: ನೀಲಾಂಬರಿ**

ಕಾವೇರಿ ಜೋಗುಳಕ್ಕೆ ಮೈ ಮರೆತು ಮಲಗಿರುವ। ಶ್ರೀರಂಗ ಪಟ್ಟಣದ ಶ್ರೀರಂಗನಾಥ। ಈ ನೆಲದಿ ಮೈಯ್ಯೊಡ್ಡಿ ಎಲ್ಲವನು ಮರೆತಿರುವ। ಲಕ್ಷ್ಮೀರಮಣ ಶ್ರೀ ವೈಕುಂಠನಾಥ॥ಪ॥ ಬೇಸರವ ತಂದಿತೇ ಈ ವೈಕುಂಠಪುರ ನಿನಗೆ। ತಾಯಿ ಲಕ್ಷ್ಮಿಯ ಮೇಲೆ ಕೋಪವೇನು? ಗರುಡನ ಹೆಗಲೇರಿ ಲೋಕ ಸುತ್ತಿದ ನಿನಗೆ। ಕನ್ನಡದ ನೆಲಕಂಡು ಪ್ರೀತಿಯೇನು?॥1॥ ಧನ್ಯರಾದೆವು ನಾವು ಶ್ರೀರಂಗನಾಥನೆ। ಕನ್ನಡದ ನಾಡಿಗೆ ನೀನು ಬರಲು। ಪಾವನವು ಆಯಿತು ಈ ನಾಡು ದೇವನೆ। ಶ್ರೀರಂಗ ಪಟ್ಟಣದಿ ನೀನು ಮಲಗಿರಲು॥2॥ ಅವತಾರಗಳ ಎತ್ತಿ, ಆದ ಆಯಾಸವನು। ಇಲ್ಲಿ ಪರಿಹರಿಸಿಕೋ ತಂದೆ ನೀನು। ನಿನ್ನ ನಿದ್ದೆಗೆ ನಾವು ತರಲಾರೆವು ಭಂಗ। ಹಾಯಾಗಿ ನೀನಿಲ್ಲಿ ಮಲಗು ರಂಗ॥3॥

ಆರುತಿ ಗೈವೇ ನಾನಾರತಿಗೈವೆ ನಾರಾಯಣನಿಗೆ **ರಾಗ: ವಸಂತ-ಆದಿತಾಳ**

ಆರತಿ ಗೈವೇ ನಾನಾರತಿಗೈವೆ ನಾರಾಯಣನಿಗೆ। ನಾರದ ಪ್ರಿಯ ಕರುಣಾಕರಹರಿಗೆ॥ಪ॥ ಆದಿ ಮೂಲನಿಗೆ ಮೋದದಾಯಕಗೆ। ಮೇದಿನಿ ಪಾಲಿಪೊ ದೇವನಿಗೆ॥ ರಾಧಾ ವಲ್ಲಭ ರತಿ ಪತಿ ಪಿತನಿಗೆ। ಸಾಧಿಸಿ ಕಂಸನ ಶಿರ ತರಿದವಗೆ॥1॥ ನಾದ ವಿನೋದ ಗಿರಿಧರಗೆ। ಯಾದವೇಂದ್ರ ಮಧುಸೂದನಗೆ। ಹತ್ತಾವತಾರ ಎತ್ತಿದ ಧೀರ ಉತ್ತುಮನಾದಂಥ ಬೌದ್ಧನಿಗೆ॥2॥ ನಿತ್ಯಾತೃಪ್ತಗೆ ನೀರಜನಾಭಗೆ। ಭಕ್ತಿಯಿಂದಾರತಿ ಎತ್ತಿರೆ ಹರಿಗೆ। ಭಕ್ತರಿಗೊಲಿದ ಸಮರ್ಥನಿಗೆ। ಅರ್ತಿಯಿಂದ ಅಸುರಾಂತಕಗೇ॥3॥

❖ ❖ ❖

56. ವೈಕುಂಠ ಏಕಾದಶಿ

ಏಳು ಏಳಯ್ಯ ಶ್ರೀ ತಿರುಮಲೇಶ **ರಾಗ: ಭೌಳಿ**

ಏಳು ಏಳಯ್ಯ ಶ್ರೀ ತಿರುಮಲೇಶ॥ಪ॥ ಸಪ್ತಋಷಿಮುನಿಗಳು ದ್ವಾರದಿ ನಿಂದಿಹರು। ಸಪ್ತ ಸಾಗರ ಜಲವ ನಿನಗಾಗಿ ತಂದಿಹರು। ಸಪ್ತ ಏಳು ಏಳಯ್ಯ ಶ್ರೀ ತಿರುಮಲೇಶ॥ಅ.ಪ॥ ಲೋಕದ ಜನರು ನಿನಗಾಗಿ ಕಾದಿಹರು। ಸಪ್ತ ಬೆಟ್ಟದ ಒಡೆಯ ವೈಕುಂಠಪತಿ ಏಳು। ಪದ್ಮಾವತೀಪ್ರಿಯನೆ ಬೇಗೆದ್ದು ಬಾರಯ್ಯ। ನಿನ್ನ ಮುಖವತೋರಿ ಸಂತಸವ ನೀಡಯ್ಯ॥1॥ ನಿನ್ನ ದರುಶನಭಾಗ್ಯ ಅನುಗಾಲ ಇರಲಯ್ಯ। ನಿನ್ನ ಸಾಕ್ಷಾತ್ಕಾರ ಬಾಳ ಬೆಳಕಯ್ಯ। ಭಕ್ತರೆಲ್ಲರು ಬಂದು ಕರಮುಗಿದು ನಿಂದಿಹರು। ಭಕ್ತಿಭಾವದಲಿ ಸುಪ್ರಭಾತ ಹಾಡಿಹರು॥2॥ ನೆಟ್ಟ ಕಣ್ನೋಟ ನಿನ್ನೆಡೆಗೆ ಬೀರಿಹರು। ಆವ ಜನ್ಮದ ಪುಣ್ಯ ನಮ್ಮದು ಎಂದಿಹರು। ದಧಿಕ್ಷೀರ ಮಧುಪರ್ಕ ಹರಿವಾಣ ತುಂಬಿಹುದು। ಪಚ್ಚಕರ್ಪೂರ ಶ್ರೀಗಂಧ ಘಮಘಮಿಸಿಹುದು॥3॥ ಮಜ್ಜನಕೆ ಸಕಲ ಸಿದ್ಧತೆಯು ನಡೆದಿಹುದು। ಬೇಗೆದ್ದು ಬಾರಯ್ಯ ಕ್ಷೀರಸಾಗರ ಶಯನ॥4॥

ಓಡಿ ಬಾರೋ ಶ್ರೀ ವೈಕುಂಠಪತಿ ನಿನ್ನ **ರಾಗ: ಭೈರವಿ-ಆದಿತಾಳ**

ಓಡಿ ಬಾರೋ ಶ್ರೀ ವೈಕುಂಠಪತಿ ನಿನ್ನ। ನೋಡುವೆ ಮನದಣಿಯೆ॥ಪ॥ ನೋಡಿ ಮುದ್ದಾಡಿ ಮಾತಾಡಿ ಸಂತೋಷಗೂಡಿ। ಪಾಡಿ ಪೊಗಳುವೆನು ಪರಮಪುರುಷ ಹರಿ॥ಅ.ಪ॥ ಕೆಂದಾವರೆ ಪೋಲ್ವ ಪಾದಗಳಿಂದ ರಂಗ। ಧಿಂ ಧಿಮಿ ಧಿಮಿಕೆಂದು ಕುಣಿಯುತಲಿ॥ ಅಂದಿಗೆ ಕಿರುಗೆಜ್ಜೆ ಘಲುಘಲುರೆನ್ನುತ। ಚಂದದಿ ಪೀತಾಂಬರ ನಲಿದಾಡುತ॥1॥ ಕೋಟಿಸೂರ್ಯ ಪ್ರಕಾಶದಂತೆ। ಕಿರೀಟ ಕುಂಡಲ ಬಾವುಲಿ ಹೊಳೆಯೆ। ಲಲಾಟದಿಕಸ್ತೂರಿ ತಿಲಕ ಇಡುವೆ। ರಂಗಕೂಟ

ಗೋಪಾಲರ ಆಟ ಸಾಕೋ ಈಗ।।2।। ಎಣ್ಣೂರಿಗತಿರಸ ದಧಿ ಘೃತವೋ।ರಂಗ। ಎನ್ನಯ್ಯಾ ನಿನಗೆ ಕೊಡುವೆ ಬಾರೊ। ಚಿಣ್ಣರ ಒಡನಾಟ ಸಾಕು ಬಿಡೋ ರಂಗ। ಬೆಣ್ಣೆಯ ಮೆಲುವುದು ಬೇಡಎನ್ನ ಕಂದ ।।3।। ತುರುಬಿನ ಮೇಲೆ ನಲಿಯುತಲಿರುತಿಹ। ಮರುಗ ಮಲ್ಲಿಗೆ ಜಾಜಿ ತುಲಸಿಯ ದಂಡೆ। ಕರದಲ್ಲಿ ಪಿಡಿದು ಪೊಂಗಳನೆ ಊದುತ। ಸರಸದಿಂದಲಿ ನೀ ನಲಿನಲಿದಾಡುತ।।4।। ಮಂಗಳಾತ್ಮಕ ಮೋಹನಕಾಯ ರಂಗ। ಸಂಗೀತಲೋಲ ಸದ್ಗುಣಶೀಲ। ಅಂಗನೆಯರಿಗೆಲ್ಲ ಅತಿಪ್ರಿಯನಾದ। ಶುಭಾಂಗ ಪುರಂದರ ವಿಠಲರಾಯ।।5।।

ಓಡೋಡಿ ಬರುವನು ಶ್ರೀನಿವಾಸ — ರಾಗ: ಕಲ್ಯಾಣಿ

ಓಡೋಡಿ ಬರುವನು ಶ್ರೀನಿವಾಸ। ಒಲಿದೋಡೋಡಿ ಬರುವನು ಶ್ರೀನಿವಾಸ। ಭಕ್ತರ ಮೊರೆ ಕೇಳಿ ಬೇಗದಿ ಬಂದು। ಭವವ ಹರಿಸುವನು ಶ್ರೀನಿವಾಸ।।1।। ನಂಬಿದವರ ಉದ್ಧರಿಸುವ ಶ್ರೀನಿವಾಸ। ಪಾಪ ಹೋಗಿಸುವ ಶ್ರೀನಿವಾಸ। ನಾಮ ಪಾರಾಯಣಕೆ ಹಿಗ್ಗಿ ನಲಿಯುವ। ನಾರದ ಸನ್ನುತ ಶ್ರೀನಿವಾಸ।।2।। ಬೆಂಬಿಡದೆ ಕಾಯುವ ಶ್ರೀನಿವಾಸ। ಭಗವನ್ನಾಮಕೆ ಒಲಿಯುವ ಶ್ರೀನಿವಾಸ। ಬಾಲ ಹನುಮನ ಪೂಜ್ಯ ಸ್ವರೂಪನ। ಬನ್ನಿರೆಲ್ಲ ಭಜಿಸೋಣ ಏಕೆ ತಾಮಸ।।3।।

ಬಂದು ನಿಂದಿಹ ನೋಡಿ — ರಾಗ: ಮಧ್ಯಮಾವತಿ-ಅಟ್ಟತಾಳ

ಬಂದು ನಿಂದಿಹ ನೋಡಿ, ಭೂತಳದಿ ವೆಂಕಟ। ಇಂದಿರೆಯ ಒಡಗೂಡಿ। ಒಪ್ಪುವ ನಿರಂತರ ಪೊಂದಿ ಭುಜನೆಯ ಮಾಡಿ, ಆನಂದಗೂಡಿ।।ಪ।। ವಂದಿಸುತ ಮನದೊಳಗೆ ಇವನಡಿ। ದ್ವಂದ್ವ ಭಜಿಸಲು ಬಂದ ಭಯಹರ ಇಂದುಧರ ಸುರ ವೃಂದನುತ ಗೋ। ವಿಂದ ಘನ ದಯಾಸಿಂಧು ಶ್ರೀಹರಿ।।ಅ.ಪ.।। ದ್ವಾರದೆಡ ಬಲದಲ್ಲಿ ಜಯವಿಜಯರಿಬ್ಬರು। ಸೇರಿ ಸೇವಿಪರಲ್ಲಿ ಸನಕಾದಿನುತ ಶೃಂಗಾರ ನಿಧಿ ಅಂಗದಲ್ಲಿ ಮುತ್ತಿನಲ್ಲಿ ಶೋಭಿಪ ಹಾರ ಪೊಂದಿಹುದಲ್ಲಿ ವಿಸ್ತಾರದಲ್ಲಿ। ವಾರವಾರಕೆ ಪೂಜೆಗೊಂಬುವ। ಹಾರ ಮಕುಟಾಭರಣ ಕುಂಡಲಧಾರ ಭುಜ ಕೇ। ಯೂರಭೂಷಿತ ಮಾರಪಿತ ಗುಣ ಮೋಹನಾಂಗ। ಚಾರು ಪೀತಾಂಬರ ಕಟಿ ಕರವೀರ ಕ। ಲ್ಹಾರಾದಿ ಪೂವಿನ ಹಾರ ಕೊರಳೊಳು ಎಸೆವುತಿ। ರೆ ವದನಾರವಿಂದನ ನಗುತ ನಲಿಯುತ।।1।। ಎಲ್ಲ ಭಕುತರಭೀಷ್ಟ ಕೊಡುವುದಕೆ ತಾ ಕೈ। ವಲ್ಯ ಸ್ಥಾನವ ಬಿಟ್ಟ ಶೇಷಾದ್ರಿ ಮಂದಿರ। ದಲ್ಲಿ ಲೋಲುಪ ದಿಟ್ಟ ಸೌಭಾಗ್ಯ ನಿಧಿಗೆದುರಿಲ್ಲ। ಭುಜಬಲ ಪುಷ್ಟ ಕಸ್ತೂರಿಯಿಟ್ಟ। ಚೆಲ್ವ ಫಣೆಯಲಿ ಶೋಭಿಸುವ ಸಿರಿ। ವಲ್ಲಭನ ಗುಣ ಪೊಗಳದಿಹ ಜಗ। ಖುಲ್ಲರೆದೆದಲ್ಯಣ ಪರಾಕ್ರಮ। ಮಲ್ಲಮರ್ದನ ಮಾತುಳಾರಿ ಫಲ್ಗುಣನ ಸಖ। ಪ್ರಕಟನಾಗಿಹ ದುರ್ಲಭನು। ಅಘದೂರ ಬಹುಮಾಂಗಲ್ಯ ಹೃದಯನು। ಸೃಷ್ಟಿಗೆ ಉಲ್ಲಾಸ ಕೊಡುತಲಿ ಚಂದದಿಂದಲಿ।।2।। ಪದಕ ಕೌಸ್ತುಭಧಾರ ಸರಿಗೆಯ ಕಂಧರ। ಸುದರುಶನದರಧಾರ ಸುಂದರ ಮನೋಹರ। ಪದಯುಗದಿ ನೂಪುರ ಇಟ್ಟಿಹನ। ಸನ್ಮುನಿ ಹೃದಯಸ್ಥಿತ ಗಂಭೀರ ಬಹು ದಾನಶೂರ। ವಿಧಿ ಭವಾದ್ಯರ ಪೊರೆವ ದಾತನು। ತುದಿ ಮೊದಲು ಮಧ್ಯಮ ವಿರಹಿತನು। ಉದುಭವಾದಿಗಳೀವ ಕರ್ತನು। ತ್ರಿದಶಪೂಜಿತ ತ್ರಿಭುವನೇಶ। ಸದುವಿಲಾಸದಿ ಸ್ವಾಮಿತೀರ್ಥದಿ। ಉದಿಸುತಿರೆ ಸಿರಿ ಮಹಿಳೆ ಸಹಿತದಿ। ಪದುಮನಾಭ ಪುರಂದರವಿಠಲ। ಪ್ರತಿ ವರುಷ ಬ್ರಹ್ಮೋತ್ಸವದಿ ಮೆರೆಯುತ।।3।।

ವೇಂಕಟಾಚಲನಿಲಯಂ — ರಾಗ: ಸಿಂಧೂಭೈರವಿ-ಏಕತಾಳ

ವೇಂಕಟಾಚಲನಿಲಯಂ ವೈಕುಂಠಪುರವಾಸಂ।। ಪಂಕಜನೇತ್ರಂ ಪರಮಪವಿತ್ರಂ। ಶಂಖಚಕ್ರಧರ ಚಿನ್ಮಯರೂಪಂ।।ಪ।। ಅಂಬುಜೋದ್ಭವ ವಿನುತಂ। ಅಗಣಿತಗುಣನಾಮಂ।। ತುಂಬುರುನಾರದ ಗಾನವಿಲೋಲಂ। ಅಂಬುಧಿಶಯನಂ ಆತ್ಮಾಭಿರಾಮಂ।।1।। ನೌಮಿ ಪಾಂಡವ ಪಕ್ಷಂ ಕೌರವಮದಹರಣಂ। ಬಾಹು ಪರಾಕ್ರಮಪೂರ್ಣಂ। ಅಹಲ್ಯಾಶಾಪ ಭಯನಿವಾರಣಂ।।2।। ಸಕಲ ವೇದ ವಿಚಾರಂ ಸರ್ವಜೀವ ನಿಕರಂ। ಮಕರಕುಂಡಲಧರ ಮದನಗೋಪಾಲಂ। ಭಕ್ತ ಪೋಷಕ ಶ್ರೀಪುರಂದರವಿಠಲಂ।।3।।

ದಾರಿ ಯಾವುದಯ್ಯ ವೈಕುಂಠಕ್ಕೆ **ರಾಗ: ಶಿವರಂಜನಿ-ಆದಿತಾಳ**

ದಾರಿ ಯಾವುದಯ್ಯ ವೈಕುಂಠಕ್ಕೆ ದಾರಿ ತೋರಿಸಯ್ಯ॥ಪ॥ ದಾರಿ ಯಾವುದಯ್ಯ, ದಾರಿ ತೋರಿಸಯ್ಯ ಆಧಾರ ಮೂರುತಿ ನಿನ್ನ ಪಾದಸೇರುವುದಕ್ಕೆ॥ಅ॥ ಬಲು ಭವದನುಭವದಿ ಕತ್ತಲೆಯೊಳು। ಬಲು ಅಂಜುತೆ ನಡುಗಿ। ಬಳಲುತ್ತ ತಿರುಗಿದೆ ಹಾದಿಯ ಕಾಣದೆ ಹೋಳೆವಂಥ ದಾರಿಯ ತೋರೋ ನಾರಾಯಣ॥1॥ ಪಾಪ ಪೂರ್ವದಲಿ ಮಾಡಿದುದಕೆ। ಲೇಪವಾಗಿದೆ ಕರ್ಮ। ಈ ಪರಿಯಿಂದಲಿ ನಿನ್ನ ನೆನಸಿಕೊಂಬೆ। ಶ್ರೀಪತಿ ಸಲಹೆನ್ನ ಭೂಪ ನಾರಾಯಣ॥2॥ ಇನ್ನು ನಾ ಜನಿಸಲಾರೆ ಭೂಮಿಯ ಮೇಲೆ। ನಿನ್ನ ದಾಸನಾದೆನೊ ಪನ್ನಗಶಯನ। ಶ್ರೀ ಪುರಂದರವಿಠ್ಠಲ ಇನ್ನು ಪುಟ್ಟಿಸದಿರೋ। ಎನ್ನ ನಾರಾಯಣ ನಾರಾಯಣ॥3॥

ಇದೇ ಹಾದಿ ನೀ ಹಿಡಿ ಹಿಡಿ

ಇದೇ ಹಾದಿ ನೀ ಹಿಡಿ ಹಿಡಿ। ನಿನ್ನೆದುರಿಗೆ ವೈಕುಂಠ ನಡಿನಡಿ। ಎದುರಿಗೆ ಕಾಂಬುವುದೇ ಮಾರುತಿ ಗುಡಿ। ಬಲಕೆ ಮಾರಿಮಾಡಿ ಕುದುರೆ ಹೊಡಿ॥ಪ॥ ಹಗರಿಹಳ್ಳದ ಮ್ಯಾಲೆ ಕಳ್ಳರೈದಾರು ಮಂದಿ। ಸುಳ್ಳುಹೇಳಿತಪ್ಪಿಸ್ಯಾರೋ ಹಾದಿ। ಬಲ್ಲವರಸಂಗಡ ಸಂಗವ ಮಾಡುತ। ಹಳ್ಳ ದಾಟಿದರೇನೀ ಪಾರಾದೆ॥1॥ ಆನೆ ಆಡುತಾವೆ ಏಳೆಂಟು ನಿನಗೆ। ಆಡ ಬರುತಾವೆ ಮುಗ್ಗಟ್ಟು। ಏನು ಪೇಳಲಿನಾ ತಿಳಿದಷ್ಟು। ನಿನ್ನ ಮನದಾಗೆ ಇರಲಿ। ಈ ಗುಟ್ಟು॥2॥ ಎಂಟು ದಳದ ಕಮಲದ ಒಳಗೆ। ಹದಿನೆಂಟು ಆಡುತಾವ ತಿಳಿಬೇಗ। ಗಂಟೆ ಹೊಡಿ ನಿನ್ನ ಪುರದಾಗ। ವೇಂಕಟೇಶ ವಿಠ್ಠಲ ಕಾಂಬುವ ನಿನಗೆ॥3॥

ಎಂಥಾದೋ ಶ್ರೀ ವೈಕುಂಠ **ರಾಗ: ಶಂಕರಾಭರಣ-ಅಟ್ಟತಾಳ**

ಎಂಥಾದೋ। ಶ್ರೀ ವೈಕುಂಠ ವಿ।ನ್ನೆಂಥಾದೋ॥ಪ॥ ಎಂಥಾದೋ ವೈಕುಂಠಾ ವರಣಾ ಅಲ್ಲಿ. ಕಂತು ಪಿತನ ದೇಹ ಕಿರಣಾ। ಅದರಂತರಂಗ ಹೇಮಾ ಭರಣಾ। ಕಾಂತಿ। ಗಂತು ನಾಚಿದ ರವಿಕಿರಣಾ। ಆಹಾ॥ ಅಂತ್ಯ ಕಾಲದಲ್ಲಿ ಸಂತತ ಸ್ತುತಿಪರ್ಗೆ। ಪ್ರಾಂತಕ್ಕೆ ನಾಲ್ಕು ನಿಶ್ಚಿಂತ ಮುಕ್ತಿಯ ಸ್ಥಾನಾ॥1॥ ಪಾಲಸಾಗರ ಮಧ್ಯೆ ಕೋಟಿ ಒಳಗೇಳು ಸುತ್ತಿನಾಗಾರ ದಾಟೀ। ತಾಳ॥ ಮೇಳದವರು ಮೂರು ಕೋಟಿ ನಾಮಪೇಳ್ವ ಗಾಯಕರ ಗಲಾಟೇ। ಆಹಾ॥ ಶೀಲ ಮುನಿಗಳು ದೇವ ಗಂಧರ್ವರು। ಜೀವನ್ಮುಕ್ತರುಗಳು ಸೇರಿಪ್ಪ ಹರಿಪುರಾ॥2॥ ಹೇಮ ಪ್ರಕಾರಾದಾ ಪುರವೂ। ಅಲ್ಲಿ। ಆ ಮಹ ಬೀದಿ ಶೃಂಗಾರವೂ ನೋಡೆ॥ ಕಾಮಧೇನು ಕಲ್ಪತರುವೂ। ಬಲು। ರಮಣೀಯ ತರವಾದ ಇರವೂ। ಆಹಾ॥ ಶ್ರೀಮೂರುತಿ ಎಂದು ವೇದಾಂತ ವೇದಾಂತ ಶ್ರುತಿ। ಸಾರೆ। ಆ ಮಹಾ ಮುಕ್ತರು ಸೇರಿದ ಮಂದಿರಾ॥3॥ ಸುತ್ತಲ ಸನಕಾದಿ ಮುನಿಯೂ। ದಿವ್ಯ ನರ್ತನ ಗಾಯನ ಧ್ವನಿಯೂ। ಪುಷ್ಪ॥ ವೃಷ್ಠಿ ಚಂಪಕ ಜಾಜಿ ಹನಿಯ ಅಷ್ಟಮ ಸ್ತ್ರೀಯರ ಮನೆಯೂ। ಆಹಾ॥ ನಿತ್ಯಾ ವಿಯೋಗಿನಿ ಒತ್ತುತ್ತ ಪಾದ ಸಂ। ಪತ್ತಿಗೀ ಶಯನ ಸರ್ವೋತ್ತಮನಾಗೃಹಾ॥4॥ ಥಳಥಳಿಸುವ ದಿವ್ಯ ದ್ವಾರಾ।ಅಲ್ಲಿ। ಹೊಳೆವಂಥ ರಂಗ ಮಂದಿರಾ ಮುತ್ತಿನೆಳೆಗಳ ಗೊಂಚಲ ಭಾರಾ। ಹೇಮ। ತುಳಸಿ ಸರದ ಶೃಂಗಾರ। ಆಹಾ॥ ಹೊಳೆವ ಮಾಣಿಕದ ಮಂಟಪ। ಮಧ್ಯದೊಳ್ಮೆರೆವ। ಚೆಲುವ ಜಗನ್ನಾಥ ವಿಠಲನ ನಿಜಸ್ಥಾನಾ॥5॥

ಬಲ್ಲವಗಿಲ್ಲಿದೆ ವೈಕುಂಠ

ಬಲ್ಲವಗಿಲ್ಲಿದೆ ವೈಕುಂಠ॥ಪ॥ ಬಲ್ಲವಗೆಲ್ಲೂ ಶ್ರೀ ಹರಿ ಪೂಜೆ॥ಅ.ಪ॥ ಶರೀರ ಹರಿಯ ಪಟ್ಟಣ ಹೃದಯ। ಸರೋಜವಾತನ ಅರಮನೆ। ಸೂರ್ಯಾದಿ ದೇವರು ಚಕ್ಷುರಾದಿಗಳಲ್ಲಿ। ದ್ವಾರಪಾಲಕ ರಾಗಿ ಇಪ್ಪರೆಂದು॥1॥ ನಡೆ ಸರ್ವದಾ ಶ್ರೀಹರಿಯ ಯಾತ್ರೆ। ನುಡಿ ಸರ್ವ ಶಬ್ದಾರ್ಥ ಹರಿಯ ನಾಮ। ಬಿಡದೆ ಶ್ರೀ ಹರಿಗೆರಗುವ ಚೇತನ। ಜಡಗಳೆಲ್ಲ ಶ್ರೀಹರಿಯ ಪ್ರತಿಮೆಯೆಂದು॥2॥ ನಾರಾಯಣ ಅನಿರುದ್ಧ ರೂಪಗಳಿಂದ। ಶ್ರೀರಮಣನೆ ಭೋಜ್ಯಗಳಲ್ಲಿಪ್ಪ। ಸಾರ ಅಂಶವನು ಪ್ರದ್ಯುಮ್ನ ಸಂಕರುಷಣ। ಮೂರುತಿಯಿಂದ ಭುಂಜಿಪನೆಂದು॥3॥ ಹರಿ ಚರಾಚರ ಸರ್ವ ಜಗದ್ಭರಿತ। ಮುರಹರನಿದ್ದುದೆ ವೈಕುಂಠ। ನರಹರಿಯಲಿ ನವವಿಧ ಭಕುತಿಗೆ। ಸರಿಸಮ ವೆಂದಿಗಿಲ್ಲವೆಂದು॥4॥ ಜಾಗಾರಾದಿಗಳಲ್ಲಿ

ವಿಶ್ವಾದಿ ಮೂರುತಿ। ಯೋಗಿ ಶ್ರೀಕೃಷ್ಣನೆ ವಿಷಯಂಗಳ। ಭೋಗಿಪನೆಂಬ ಯೋಗಿಗೆ ವಿಹಿತ। ಭೋಗಂಗಳೆಲ್ಲ ಯಾಗಂಗಳೆಂದು॥5॥

ಇಲ್ಲೇ ವೈಕುಂಠ ನಮ್ಮ ಶ್ರೀಲಕ್ಷುಮಿ

ಇಲ್ಲೇ ವೈಕುಂಠ ನಮ್ಮ ಶ್ರೀಲಕ್ಷುಮಿ। ವಲ್ಲಭ ಪರಿಪೂರ್ಣನೆಂದು ಭಜಿಪರಿಗೆ॥ಪ॥ ಆಶಾಪಾಶಗಳನ್ನು ಮರೆದು ಶ್ರೀಹರಿಯ ಮೇ। ಲಾಸೆಯನ್ನು ಮಾಡಿ ನೆಲೆಗೊಳಿಸಿ॥ ವಾಸುಕಿಯನನ ದಾಸನಾಗಿ ಒಡನೆ। ವಾಸುದೇವನ ದಿವ್ಯಮೂರ್ತಿ ನಿಟ್ಟಿಸುವಗೆ॥1॥ ಕಾಮಕ್ರೋಧ ಲೋಭ ಮದ ಮತ್ಸರವಳಿದು। ಕಾಮಜನಕನ ಕಾರುಣ್ಯದಿಂದ। ನಾಮಾಮೃತವ ನುಂಡು। ನವವಿಧ ಭಕ್ತಿ। ನೇಮದಿಂದಚ್ಯುತನ ತಿಳಿದು ಭಜಿಪರಿಗೆ॥2॥ ವರ ಕಾವೇರಿಯೆ ವಿರಜಾನದಿಯೆಂದು। ಪರಮಪದವೆ ರಂಗಕ್ಷೇತ್ರವೆಂದು। ಪರವಾಸುದೇವನೆ ರಂಗನಾಯಕ ನೆಂದು। ಪರಮ ಭಕುತಿಯಿಂದ ಭಜಿಸುವ ಜನರಿಗೆ॥3॥ ಸ್ನಾನದಾನಾದಿ ಸತ್ಕರ್ಮವ ಮುದದಿಂದ। ಶ್ರೀನರಹರಿಗೆ ಸಮರ್ಪಿಸುವ। ಆನಂದ ವೈಕುಂಠ ಲಕ್ಷ್ಮೀಶನಡಿಗಳ। ಸಾನುರಾಗದಿ ನಿತ್ಯ ಧ್ಯಾನಿಪ ಜನರಿಗೆ॥4॥ ಉಭಯ ಕಾವೇರಿ ಮಧ್ಯದಲಿ ಪವಡಿಸಿ। ಅಭಯವನೀಯುತ ದಾಸರಿಗೆ॥ ವಿಭವ ಸಂಪದ್ ಸಾಲೋಕ್ಯ ಪದವಿಯೀವ। ಅಭಿನವ ಪುರಂದರವಿಠಲನ ಭಜಿಪರಿಗೆ॥5॥

ಲಗ್ಗೆಯೋ ವೈಕುಂಠ ಲಗ್ಗೆಯೋ

ಲಗ್ಗೆಯೋ ವೈಕುಂಠ ಲಗ್ಗೆಯೋ॥ಪ॥ ಒಗ್ಗಿಲಿ ಶ್ರೀ ಹರಿಯೊಡನಾಡೋ ಸುಜನರ್ಗೆ॥ಅ.ಪ.॥ ಸಂಸಾರವೆಂಬೋದು ತನ್ನ ಮನೆಯೊಳು ನೇಮಿಸಿ। ಕಾಂಸಾರಿಯೆಡೆಯೊಳು ಕಡು ಸ್ನೇಹ ಮಾಳ್ಪಗೆ॥1॥ ಮಾಯಾಪಾಶವ ಕಳೆದು ಮದಮತ್ಸರವಳಿದು। ಕಾಯವು ಸ್ಥಿರವಲ್ಲವೆಂದು ತಿಳಿದು॥ ನ್ಯಾಯ ಮೀರದೆ ಅನ್ಯಾಯಕೆ ಸೇರದೆ। ಕಾಯಜ ಪಿತನೊಳು ಕಡು ಸ್ನೇಹ ಮಾಳ್ಪಗೆ॥2॥ ಭ್ರೂ ಮಧ್ಯದೆಡೆಯೊಳು ನಾಸಿಕಾಗ್ರದೊಳು। ನೇಮದಿಂದ ದೃಷ್ಟಿಯ ನಿಲ್ಲಿಸಿ॥ ಪ್ರೇಮದಿ ಪುರಂದರವಿಠಲನ ಭಜಿಸುತ। ಭೂಮಿಯೊಳಿಹ ಬುದ್ಧಿವಂತ ಮನಜರಿಗೆ॥3॥

ದಾಸೋತ್ತಮ ನೀನೇ ಶ್ರೀ ವೈಕುಂಠ — ರಾಗ: ಕಲ್ಯಾಣಿ

ದಾಸೋತ್ತಮ ನೀನೇ ಶ್ರೀ ವೈಕಂಠ ದಾಸೋತ್ತಮ ನೀನೇ॥ಪ॥ ಮಕ್ಕಳುಗಳಿಗೆ ಮೊಮ್ಮಕ್ಕಳುಗಳಿಗೆ ದೇವರ್ಗಳಿಗೆ ಮನು ಮುನಿಗಳಿಗೆ। ಸಿಕ್ಕದಪರಬೊಮ್ಮನ ಕೂಸಮಾಡಿಕೊಂಡಿಕ್ಕಿ ತೊಡೆಯೊಳು। ಮುದ್ದಿಸಿ ಆಡಿಸುತಿಹ ವೇದಶಾಸ್ತ್ರಾಗಮಗಳಿಗೆ ಮೈದೋರದ। ಆದಿಪುರುಷನ ನೀನೊಲಿಸಿ ಕೊಂಡು॥॥1॥ ಈ ಧರೆಯ ವರಪಾವನ ಮಾಡಿ ನೋಡುವ ಸಾಧು ಸಜ್ಜನ। ಅಪರೋಕ್ಷ ಜ್ಞಾನಿಯಾದ ಹರಿಸರ್ವೋತ್ತಮ। ಹಯವದನ ಮೂರುತಿ ವೇಲಾಪುರದರಸನ ಪ್ರತಿಬಿಂಬನಾದ। ವರವೈಕುಂಠದಾಸೋತ್ತಮ ಎನಗೆ ಶ್ರೀಹರಿಯನ್ನು ತೋರಿಸಿ ಧನ್ಯನ ಮಾಡಿದೆ॥2॥

ದಾಸನಾದವನಿಗೆ ವೈಕುಂಠ ಲೋಕದಲ್ಲಿ

ದಾಸನಾದವನಿಗೆ ವೈಕುಂಠ ಲೋಕದಲ್ಲಿ ವಾಸ। ದಾಸನಾಗದವನೆಲ್ಲಿ ಪೋದರಾ ಭಾಸ। ದಾಸನೆಂದೆನಿಸಿದ ಭಾರತಿಯ ಗಂಡ। ಶ್ರೀಶವಾಸವಾದಿವಂದ್ಯ।ದ್ವಿಸಾಶಿರಂಬಕ ಶರಣ್ಯ ದಾಸರಿಗೊಲಿದ ಶ್ರೀ ಪುರಂದರವಿಠ್ಠಲ॥

ಇಷ್ಟುದಿನ ಈ ವೈಕುಂಠ — ರಾಗ : ಶುದ್ಧಧನ್ಯಾಸಿ-ಅಟ್ಟತಾಳ

ಇಷ್ಟುದಿನ ಈ ವೈಕುಂಠ ಎಷ್ಟು ದೂರವೊ ಎನ್ನುತ್ತಿದ್ದೆ। ದೃಷ್ಟಿಯಿಂದ ನೋಡಿದೇನಾ। ಸೃಷ್ಟಿಗೀತ ಶ್ರೀರಂಗಶಾಯಿ॥ಪ॥ ಎಂಟು ಏಳು ಕಳೆದುದರಿಂದ। ಬಂಟರೈವರ ತುಳಿದುದರಿಂದ। ಕಂಟಕನೊಬ್ಬನ ಕೊಲಿಸಿದುದರಿಂದ। ಬಂಟನಾಗಿ ಬಂದೆನು ಶ್ರೀರಂಗಶಾಯಿ॥1॥ ವಜ್ರವೈಢೂರ್ಯದ ತೊಲೆಗಳ ಕಂಡೆ। ಪ್ರಜ್ವಲಿಪ ಮಹಾ ದ್ವಾರವ ಕಂಡೆ। ನಿರ್ಜರಾದಿ

ಋಷಿಗಳ ಕಂಡೆ। ದುರ್ಜನಾಂತಕ ಶ್ರೀರಂಗಶಾಯಿ।।2।। ರಂಭೆಯೂರ್ವಶಿ ಮೇಳವ ಕಂಡೆ। ತುಂಬುರು ನಾರದರ ಕಂಡೆ। ಅಂಬುಜೋದ್ಭವ ರುದ್ರರ ಕಂಡೆ। ಶಂಬರಾರಿಪಿತನೇ ಶ್ರೀರಂಗಶಾಯಿ।।3।। ನಾಗಶಯನನ ಮೂರ್ತಿಯ ಕಂಡೆ। ಯೋಗಿ ಭೂಷಣ ಶಿವನ ಕಂಡೆ। ಭಾಗವತರ ಸಮ್ಮೇಳನ ಕಂಡೆ। ಕಾಗಿನೆಲೆಯಾದಿ ಕೇಶವ ರಂಗಶಾಯಿ।।4।।

ಪರಮ ಪದೌಹರೆ **ರಾಗ: ಬೇಹಾಗ್**

ಪರಮ ಪದೌಹರೆ ಶ್ರೀರಂಗಂ। ಪರವಾಸುದೇವನೆ ಶ್ರೀರಂಗಂ। ಸತ್ಯಲೋಕದಿ ಬ್ರಹ್ಮನು ಪೂಜಿಪ ವಸ್ತ್ರವಿಮಾನವೆ ಶ್ರೀರಂಗಂ। ಪನ್ನಂಡಾಳ್ವಾರ್ ವಂದಿಸಿ ಆಳ್ವ। ಆದಿ ವೈಕುಂಠವೆ ಶ್ರೀರಂಗಂ। ಶ್ರೀರಂಗನಾಯಕಿ ನಾಥನು ನೆಲೆಸಿರ್ಪ। ಆದಿ ವೈಕುಂಠವೆ ಶ್ರೀರಂಗಂ।।

ವೆಂಕಟಾದ್ರಿ ನಿಲಯಜೀಯ

ವೆಂಕಟಾದ್ರಿ ನಿಲಯಜೀಯ। ಸಂಕಟ ಪಡಲಾರೆನಯ್ಯ।।ಪ।। ಮಡದಿ ಮಕ್ಕಳೆಂಬೋಮಮತೆ ಪುಟ್ಟಿಸಿ। ಒಡಲಿಗೋಸುಗ ಪರರ ಬೇಡಿಸಿ। ಕಂಡಕಂಡವರಿಂದ ಬೈಸಿ। ನೋಡಿ ನಗುವರೇನೋ ಸ್ವಾಮಿ।।1।। ಏನಿದೇನು ನಿನ್ನ ಮಾಯ। ಇನ್ನು ಇದಕೆ ಏನುಪಾಯ। ಘನ ಪುರಂಧರ ವಿಠಲರಾಯ। ಕಾಯೋ ಎನ್ನ ಕೃಷ್ಣರಾಯ।।2।।

ಎಷ್ಟು ನೋಡಿದರು ತಣಿಯದೆನ್ನ **ರಾಗ: ಧರ್ಮವತಿ**

ಎಷ್ಟು ನೋಡಿದರು ತಣಿಯದೆನ್ನ। ತನುಮನ ನಯನ ಗೋವಿಂದ।।ಪ।। ನಿನ್ನಯ ಸುಂದರ ವದನಾರವಿಂದವ। ಜನ್ಮ ಜನ್ಮಕೂ ಮರೆಯೆನು ಗೋವಿಂದ। ಗೋವಿಂದ ಗೋವಿಂದ ನಾರಾಯಣ।।ಅ.ಪ।। ಶುದ್ಧಾತ್ಮನಾಗೆನಲು ಶ್ವೇತ ತಿಲಕದಿ ಬಂದೆ। ಭವಬಂಧನ ಕಳೆಯೆ ಚಕ್ರವ ಪಿಡಿದೆ। ಪಾಪ ಕಳೆಯೆ ಪಾಂಚಜನ್ಯವ ಧರಿಸಿದೆ। ಬೇಡಿದ ವರನೀಡೆ ವರದಹಸ್ತದಿ ನಿಂದೆ। ಅಚ್ಯುತ ಅನಂತ ಗೋವಿಂದ। ಗೋವಿಂದ ಗೋವಿಂದ ನಾರಾಯಣ।।2 ಸಾರಿ।। ನಿನ್ನ ನೋಡೊ ಭಕ್ತರಿಗೆ ವೈಕುಂಠದೂರೆಂದು। ವೆಂಕಟಗಿರಿಯ ಭೂವೈಕುಂಠ ವೆನಿಸಿದೆ। ಏಳೇಳುಜನ್ಮದ ಪಾಪ ಕಳೆಯಲೆಂದು। ಏಳು ಬೆಟ್ಟದ ಮೇಲೆ ನಿಂದಿಹ ವರದ। ಅಚ್ಯುತ ಅನಂತಾ ಗೋವಿಂದ। ಗೋವಿಂದ ಗೋವಿಂದ ನಾರಾಯಣ।।2 ಸಾರಿ।।

ದಣಿಯ ನೋಡಿದೆನೋ **ರಾಗ: ಸಾರಂಗ-ಆದಿತಾಳ**

ದಣಿಯ ನೋಡಿದೆನೋ ವೇಂಕಟನ ಮನ ।।ಪ।। ದಣಿಯ ನೋಡಿದೆ ಶಿಖಾಮಣಿಯ ನಿರ್ಮಲನ।।ಅ.ಪ.।। ಕೇಸಕ್ಕಿ ಅನ್ನ ತಿಂಬುವನ। ಬಡ್ಡಿ ಕಾಸು ಬಿಡದೆ ಹೊನ್ನು ಬಳಸಿಕೊಂಬುವನ। ದೋಸೆ ಅನ್ನವ ಮಾರಿಸುವನ। ತನ್ನ ದಾಸರಮೇಳದಿ ಕುಣಿದಾಡುತಿಹನ।।1।। ಗಂಟಿನೊಲ್ಲಿಯ ಪೊದ್ದಿಹನ। ಹೊರ ಹೊಂಟುಹೋಗಿ ಬೇಟೆಯಾಡುತ ಲಿಹನ। ಘಂಟೆ ನಾದಕೆ ಒಲಿಯುವವನ। ಭೂ ವೈಕುಂಠವಿದೆಂದು ಹಸ್ತವ ತೋರಿದವನ।।2।। ಬೆಟ್ಟದೊಳಗೆ ಇರುತಿಹನ। ಮನ ಮುಟ್ಟಿ ಭಜಿಪ ಭಕುತರಿಗೊಲಿದವನ। ಕೊಟ್ಟ ವರವ ತಪ್ಪದವನ। ಈ ಸೃಷ್ಟಿಗಧಿಕ ಪುರಂದರ ವಿಠಲನ।।3।।

ಶ್ರೀರಮಣ ಸರ್ವೇಶ ಸರ್ವಗ (ವೆಂಕಟೇಶ ಸ್ತವರಾಜ)

ಶ್ರೀರಮಣ ಸರ್ವೇಶ ಸರ್ವಗ। ಸಾರಭೋಕ್ತ ಸ್ವತಂತ್ರ ಸರ್ವದ। ಪಾರ ಮಹಿಮೋದಾರ ಸದ್ಗುಣ ಪೂರ್ಣ ಗಂಭೀರ।। ಸಾರಿದವರಘ ದೂರಗೈಸಿ। ಸೂರಿ ಜನರಿಗೆ ಸೌಖ್ಯ ನೀಡುವ। ಧೀರ ವೆಂಕಟರಮಣ ಕರುಣದಿ ಪೊರೆಯೊ ನೀ ಎನ್ನ।।1।। ಘನ್ನಮಹಿಮಾಪನ್ನ ಪಾಲಕ। ನಿನ್ನ ಹೊರತಿನ್ನನ್ಯದೈವರ। ಮನದಲಿನಾ ನೆನೆಸೆನೆಂದಿಗು ಬನ್ನ ಬಡಿಸಿದರೂ।। ಎನ್ನ ಪಾಲಕ ನೀನೆ ಇರುತಿರೆ। ಇನ್ನ ಭವ ಭಯವೇಕೆ ಎನಗೆ। ಚೆನ್ನ ವೆಂಕಟರಮಣ ಕರುಣದಿ ಪೊರೆಯೊ ನೀ ಎನ್ನ।।2।। ಲಕುಮಿಬೊಮ್ಮ ಭವಾಮರೇಶರು। ಭಕುತಿಪೂರ್ವಕ ನಿನ್ನ ಭಜಿಸೆ। ಸಕಲ ಲೋಕಕೆ ನಾಥನೆನಿಪರು ಸರ್ವಕಾಲದಲಿ।

ನಿಖಿಳ ಜೀವರ ಪೊರೆವ ದೇವನೆ ಭಕುತಿ ನೀ ಎನಗೀಯ ದಿರಲು। ವ್ಯಕುತವಾಗ್ಯಪಕೀರ್ತಿ ಬಪ್ಪದೊ ಶ್ರೀನಿಕೇತನನೆ॥3॥ ಯಾಕೆ ಪುಟ್ಟದೊ ಕರುಣ ಎನ್ನೊಳು। ಸಾಕಲಾರೆಯಾ ನಿನ್ನ ಶರಣನ। ನೂಕಿ ಬಿಟ್ಟರೆ ನಿನಗೆ ಲೋಕದಿ ಖ್ಯಾತಿ ಒಪ್ಪುವದೇ॥ ನೋಕನೀಯನೆ ನೀನೇ ಎನ್ನನು ಜೋಕೆಯಿಂದಲಿ ಕಾಯೊ ಬಿಡದೆ। ಏಕದೇವನು ನೀನೇ ವೆಂಕಟ ಶೇಷಗಿರಿವಾಸ॥5॥ ಅಂಬುಜಾಂಬಕ ನಿನ್ನ ಪದಯುಗ। ನಂಬಿಕೊಂಡೀ ಪರಿಯಲಿರುತಿರೆ। ಡೊಂಬೆಗಾರನ ತೆರದಿ ನೀ ನಿರ್ಭಾಗ್ಯ ಸ್ಥಿತಿ ತೋರೆ॥ ಬಿಂಬಮೂರುತಿ ನಿನ್ನ ಕರಗತ। ಕಂಬುವರವೇ ಗತಿಯು ವಿಶ್ವಕುಟುಂಬಿ ಎನ್ನನು ಸಲಹೋ ಸಂತತ ಶೇಷಗಿರಿವಾಸ॥5॥ ಸಾರ ಸಿರಿ ವೈಕುಂಠ ತ್ಯಜಿಸಿ। ಧಾರುಣಿಯೊಳು ಗೊಲ್ಲನಾಗಿ। ಚೋರಕರ್ಮವ ಮಾಡಿ ಬದುಕಿದ ದಾರಿಗರಿಕಿಲ್ಲ॥ ಸಾರಿ ಪೇಳುವೆ ನಿನ್ನ ಗುಣಗಳ ಪಾರವಾಗಿರುತಿಹವು ಜನರಿಗೆ ಧೀರ ವೆಂಕಟರಮಣ ಕರುಣದಿ ಪೊರೆಯೊ ನೀ ಎನ್ನ॥6॥ ನೀರಮುಳುಗಿ ಭಾರ ಹೊತ್ತು। ಧಾರುಣೀ ತಳವಗೆದು ಸಿಟ್ಟಲಿ। ಕ್ರೂರನುದರವ ಸೀಳಿ ಕರುಳಿನ ಮಾಲೆ ಧರಿಸಿದರು॥ ಪೋರ ವಿಪ್ರ ಕುಠಾರಿ ವನವನ। ಚಾರಿ ಗೋಪ ದಿಗಂಬರಾಶ್ವವ। ಏರಿ ಪೋದರು ಬಿಡೆನೋ ವೆಂಕಟ ಶೇಷಗಿರಿವಾಸ॥7॥ ಲಕ್ಷ್ಮೀನಾಯಕ ಸಾರ್ವಭೌಮನೆ। ಪಕ್ಷಿವಾಹನ ಪರಮ ಪುರುಷನೆ। ಮೋಕ್ಷದಾಯಕ ಪ್ರಾಣಜನಕನೆ ವಿಶ್ವವ್ಯಾಪಕನೆ॥ ಅಕ್ಷಯಾಂಬರವಿತ್ತ ವಿಜಯನ ಪಕ್ಷಪಾತವ ಮಾಡಿ ಕುರುಗಳ। ಲಕ್ಷ್ಯಮಾಡದೆ ಕೊಂದೆಯೋ ಶ್ರೀಶೇಷಗಿರಿವಾಸ॥8॥ ಹಿಂದೆ ನೀ ಪ್ರಹ್ಲಾದಗೋಸುಗ ಎಂದು ನೋಡದ ರೂಪ ಧರಿಸಿ। ಬಂದು ದೈತ್ಯನ ಒಡಲ ಬಗೆದು ಪೊರೆದೆ ಬಾಲಕನ॥ ತಂದೆತಾಯ್ಗಳ ಬಿಟ್ಟು ವಿಪಿನದಿ। ನಿಂದು ತಪ್ಪಿಸುವ ಪಂಚವತ್ಸರ। ಕಂದನಾ ಧ್ರುವಗೊಲಿದು ಪೊರೆದೆಯೊ ಶೇಷಗಿರಿವಾಸ॥9॥ ಮಡುವಿನೊಳಗಿಹ ಮಕರಿಕಾಲನು। ಪಿಡಿದು ಬಾಧಿಸೆ ಕರಿಯು ತ್ರಿಜಗ। ದ್ವೊಡೆಯ ಪಾಲಿಸೊ ಎನಲು ತಕ್ಷಣ ಬಂದು ಪಾಲಿಸಿದೆ॥ ಮಡದಿ ಮಾತನು ಕೇಳಿ ಬಲುಪರಿ। ಬಡವ ಬ್ರಾಹ್ಮಣ ಧಾನ್ಯ ಕೊಡಲು। ಪೊಡವಿಗಸದಳ ಭಾಗ್ಯ ನೀಡಿದೆ ಶೇಷಗಿರಿವಾಸ॥10॥ ಇಂದು ಮಾಡಿದ ಮಹಿಮೆಗಳ ನಾ। ನೆಂತು ವರ್ಣಿಸಲೇನು ಫಲ ಶ್ರೀಕಾಂತ ಎನ್ನನು ಪೊರೆಯೆ ಕೀರುತಿ ನಿನಗೆ ಫಲವೆನಗೆ॥ ಕಂತು ಜನಕನೆ ಎನ್ನ ಮನಸಿನ। ಅಂತರಂಗದಿ ನೀನೆ ಸರ್ವದ ನಿಂತು ಪ್ರೇರಣೆ ಮಾಳ್ಪೆ ಸರ್ವದ ಶೇಷಗಿರಿವಾಸ॥11॥ ಶ್ರೀನಿವಾಸನೆ ಭಕ್ತಪೋಷನೆ। ಜ್ಞಾನಿ ಕುಲಗಳಿಗಭಯ ದಾಯಕ। ದೀನಬಾಂಧವ ನೀನೆ ಎನ್ನಮನದರ್ಥ ಪೂರೈಸೋ। ಅನುಪಮೋಪಮ ಜ್ಞಾನಸಂಪದ। ವಿನಯಪೂರ್ವಕವಿತ್ತು ಪಾಲಿಸೊ ಜನುಮ ಜನುಮಕೆ ಮರೆಯ ಬೇಡವೊ ಶೇಷಗಿರಿವಾಸ॥12॥ ಮದವು ಮತ್ಸರ ಲೋಭ ಮೋಹವು। ಒದಗಬಾರದು ಎನ್ನ ಮನದಲಿ। ಪದುಮನಾಭನೆ ಜ್ಞಾನ ಭಕ್ತಿ ವಿರಕ್ತಿ ನೀನಿತ್ತು। ಹೃದಯಮಧ್ಯದಿ ನಿನ್ನ ರೂಪವು। ವದನದಲಿ ತವ ನಾಮ ಮಂತ್ರವು। ಸದಯ ಪಾಲಿಸೋ ಬೇಡಿಕೊಂಬೆನೊ ಶೇಷಗಿರಿವಾಸ॥13॥ ಅಂದ ನುಡಿ ಪುಸಿಯಾಗಬಾರದು। ಬಂದಭಾಗ್ಯವು ಹೋಗಬಾರದು। ಕುಂದು ಬಾರದೆ ನಿನ್ನ ಕರುಣವು ದಿನದಿ ವರ್ಧಿಸಲಿ॥ ನಿಂದೆಮಾಡುವ ಜನರ ಸಂಗವು। ಎಂದಿಗಾದರೂ ದೊರೆಯಬಾರದು। ಎಂದು ನಿನ್ನನು ಬೇಡಿಕೊಂಬೆನೊ ಶೇಷಗಿರಿವಾಸ॥14॥ ಏನು ಬೇಡಲಿ ಎನ್ನ ದೇವನೆ। ಸಾನುರಾಗದಿ ಎನ್ನ ಪಾಲಿಸೊ। ನಾನಾ ವಿಧವಿಧ ಸೌಖ್ಯವ ನೀಡುವುದು ಇಹಪರಂಗಳಲಿ। । ಶ್ರೀನಿವಾಸನೆ ನಿನ್ನ ದಾಸಗೆ ಏನು ಕೊರತಿಲ್ಲೆಲ್ಲಿ ನೋಡಲು। ನೀನೇ ನಿಂತೀ ವಿಧದಿ ಪೇಳಿಸು ಶೇಷಗಿರಿವಾಸ॥15॥ ಆರು ಮುನಿದವರೇನು ಮಾಳ್ಪರೋ ಆರು ಒಲಿದವರೇನು ಮಾಳ್ಪರೋ। ಆರು ಸ್ನೇಹಿಗರಾರು ದ್ವೇಷಿಗಳಾರುದಾಶಿನರು॥ ಕ್ರೂರ ಜೀವರ ಹಣಿದು ಸಾತ್ವಿಕ। ಧೀರ ಜೀವರ ಪೊರೆದು ನಿನ್ನಲಿ। ಸಾರ ಭಕುತಿಯನಿತ್ತು ಪಾಲಿಸೋ ಶೇಷಗಿರಿವಾಸ॥16॥ ನಿನ್ನ ಸೇವೆಯನಿತ್ತು ಎನಗೆ ನಿನ್ನ ಪದಯುಗ ಭಕ್ತಿ ನೀಡಿ। ನಿನ್ನ ಗುಣಗಣ ಸ್ತವನಮಾಡುವ ಜ್ಞಾನ ನೀನಿತ್ತು॥ ಎನ್ನ ಮನದಲ್ಲಿ ನೀನೇ ನಿಂತು। ಘನ್ನ ಕಾರ್ಯವ ಮಾಡಿ ಮಾಡಿಸು ಧನ್ಯನೆಂದೆನಿಸೆನ್ನ ಲೋಕದಿ ಶೇಷಗಿರಿವಾಸ॥17॥ ಜಯಜಯತು ಶಠಕೂರ್ಮ ರೂಪನೆ। ಜಯ ಜಯತು ಕಟಿ ಸಿಂಹ ವಾಮನ। ಜಯ ಜಯತು ಭೃಗುರಾಮ ರಘುಕುಲಸೋಮ ಶ್ರೀರಾಮ॥ ಜಯ ಜಯತು ಸಿರಿಯದು ವರೇಣ್ಯನೆ। ಜಯ ಜಯತು ಜನ ಮೋಹ ಬುದ್ಧನೆ। ಜಯ ಜಯತು ಕಲಿ ಕಲ್ಮಶಘ್ನನೆ ಕಲ್ಕಿ ನಾಮಕನೆ॥18॥ ಕರುಣ ಸಾಗರ ನೀನೇ ನಿಜಪದ। ಶರಣ ವತ್ಸಲ ನೀನೇ ಶಾಶ್ವತ ಶರಣಜನ ಮಂದಾರ ಕಮಲಾಕಾಂತ ಜಯವಂತ॥ ನಿರುತ ನಿನ್ನನು ನುತಿಸಿ ಪಾಡುವೆ। ವರದ ಗುರು ಜಗನ್ನಾಥ ವಿಠಲ ಪರಮ ಪ್ರೇಮದಿ ಪೊರೆಯೊ ಎನ್ನನ್ನು ಶೇಷಗಿರಿವಾಸ॥19॥

ಶ್ರೀ ಶ್ರೀನಿವಾಸ ಗೋವಿಂದಾ (ನಾಮಾವಳಿ)

ಶ್ರೀ ಶ್ರೀನಿವಾಸ ಗೋವಿಂದಾ। ಶ್ರೀವೆಂಕಟೇಶ್ವರ ಗೋವಿಂದಾ। ಭಕ್ತವತ್ಸಲ ಗೋವಿಂದಾ। ಭಾಗವತಪ್ರಿಯ ಗೋವಿಂದಾ। ನಿತ್ಯನಿರ್ಮಲ ಗೋವಿಂದಾ। ನೀಲಮೇಘಶ್ಯಾಮ ಗೋವಿಂದಾ। ಪುರಾಣಪುರುಷ ಗೋವಿಂದಾ। ಪುಂಡರೀಕಾಕ್ಷ ಗೋವಿಂದಾ। ಗೋವಿಂದಾ ಹರಿ ಗೋವಿಂದಾ। ಗೋಕುಲ ನಂದನ ಗೋವಿಂದಾ।।1।। ನಂದನಂದನ ಗೋವಿಂದಾ। ನವನೀತಚೋರ ಗೋವಿಂದಾ। ಪಶುಪಾಲಕ ಕೃಷ್ಣ ಗೋವಿಂದಾ। ಪಾಪವಿಮೋಚನ ಗೋವಿಂದಾ। ದುಷ್ಟಸಂಹಾರ ಗೋವಿಂದಾ। ದುರಿತ ನಿವಾರಣ ಗೋವಿಂದಾ। ಶಿಷ್ಟಪರಿಪಾಲಕ ಗೋವಿಂದಾ। ಕಷ್ಟನಿವಾರಣ ಗೋವಿಂದಾ। ಗೋವಿಂದ ಹರಿ ಗೋವಿಂದಾ ಗೋಕುಲ ನಂದನ ಗೋವಿಂದಾ।।2।। ವಜ್ರಮುಕುಟಧರ ಗೋವಿಂದಾ। ವರಾಹಮೂರ್ತಿನೀ ಗೋವಿಂದಾ। ಗೋಪೀಜನ ಲೋಲ ಗೋವಿಂದಾ। ಗೋವರ್ಧನೋದ್ಧಾರ ಗೋವಿಂದಾ। ದಶರಥ ನಂದನ ಗೋವಿಂದಾ। ದಶಮುಖ ಮರ್ಧನ ಗೋವಿಂದಾ। ಪಕ್ಷಿವಾಹನ ಗೋವಿಂದಾ। ಪಾಂಡವಪ್ರಿಯ ಗೋವಿಂದಾ। ಗೋವಿಂದಾ ಹರಿ ಗೋವಿಂದಾ। ಗೋಕುಲ ನಂದನ ಗೋವಿಂದಾ।।3।। ಮತ್ಸ್ಯಕೂರ್ಮಾ ಗೋವಿಂದಾ। ಮಧುಸೂದನ ಹರಿ ಗೋವಿಂದಾ। ವರಾಹ ನರಸಿಂಹ ಗೋವಿಂದಾ। ವಾಮನ ಭೃಗುರಾಮ ಗೋವಿಂದಾ। ಬಲರಾಮಾನುಜ ಗೋವಿಂದಾ। ಬೌದ್ಧಕಲ್ಕಿಧರ ಗೋವಿಂದಾ। ವೇಣುಗಾನ ಪ್ರಿಯ ಗೋವಿಂದಾ। ವೇಂಕಟರಮಣಾ ಗೋವಿಂದಾ। ಗೋವಿಂದ ಹರಿ ಗೋವಿಂದಾ। ಗೋಕುಲ ನಂದನ ಗೋವಿಂದಾ।।4।। ಸೀತಾನಾಯಕ ಗೋವಿಂದಾ। ಶ್ರೀಪತಿಪಾಲಕ ಗೋವಿಂದಾ। ದರಿದ್ರಜನಪೋಷಕ ಗೋವಿಂದಾ। ಧರ್ಮಸಂಸ್ಥಾಪಕ ಗೋವಿಂದಾ। ಅನಾಥರಕ್ಷಕ ಗೋವಿಂದಾ। ಆಪದ್ಬಾಂದವ ಗೋವಿಂದಾ। ಕರುಣಾಸಾಗರ ಗೋವಿಂದಾ। ಗೋವಿಂದಾ ಹರಿ ಗೋವಿಂದಾ। ಗೋಕುಲ ನಂದನ ಗೋವಿಂದಾ।।5।। ಕಮಲದಳಾಕ್ಷ ಗೋವಿಂದಾ। ಕಾಮಿತ ಫಲದಾತ ಗೋವಿಂದಾ। ಪಾಪವಿನಾಶಕ ಗೋವಿಂದಾ। ಪಾಹಿ ಮುರಾರೇ ಗೋವಿಂದಾ। ಶ್ರೀಮುದ್ರಾಂಕಿತ ಗೋವಿಂದಾ। ಶ್ರೀವತ್ಸಾಂಕಿತ ಗೋವಿಂದಾ। ಧರಣೀನಾಯಕ ಗೋವಿಂದಾ। ದಿನಕರತೇಜಾ ಗೋವಿಂದಾ। ಗೋವಿಂದಾ ಹರಿ ಗೋವಿಂದಾ। ಗೋಕುಲ ನಂದನ ಗೋವಿಂದಾ।।6।। ಪದ್ಮಾವತಿ ಪ್ರಿಯ ಗೋವಿಂದಾ। ಪಸನ್ನ ಮೂರ್ತಿ ಗೋವಿಂದಾ। ಅಭಯಹಸ್ತ ಗೋವಿಂದಾ। ಮತ್ಸ್ಯಾವತಾರ ಗೋವಿಂದಾ। ಶಂಕಚಕ್ರಧರ ಗೋವಿಂದಾ। ಶಾರ್ಙ್ಗಗದಾಧರ ಗೋವಿಂದಾ। ವಿರಜಾ ತೀರ್ಥ ಗೋವಿಂದಾ। ವಿರೋಧಿ ಮರ್ದನ ಗೋವಿಂದಾ। ಗೋವಿಂದಾ ಹರಿ ಗೋವಿಂದಾ। ಗೋಕುಲ ನಂದನ ಗೋವಿಂದಾ ।।7।। ಸಾಲಗ್ರಾಮಹಾರ ಗೋವಿಂದಾ। ಸಹಸ್ರನಾಮ ಗೋವಿಂದಾ। ಲಕ್ಷ್ಮೀ ವಲ್ಲಭ ಗೋವಿಂದಾ। ಲಕ್ಷ್ಮಣಾಗ್ರಜ ಗೋವಿಂದಾ। ಕಸ್ತೂರಿ ತಿಲಕ ಗೋವಿಂದಾ। ಕಾಂಚನಾಂಬರಧರ ಗೋವಿಂದಾ। ಗರುಡವಾಹನ ಗೋವಿಂದಾ। ಗೋವಿಂದ ಹರಿ ಗೋವಿಂದಾ। ಗೋಕುಲ ನಂದನ ಗೋವಿಂದಾ।।8।। ಗಜರಾಜರಕ್ಷಕ ಗೋವಿಂದಾ। ವಾನರಸೇವಿತ ಗೋವಿಂದಾ। ವಾರಿಧಿ ಬಂಧನ ಗೋವಿಂದಾ। ಏಡು ಕೊಂಡಲವಾಡ ಗೋವಿಂದಾ। ಏಕಸ್ವರೂಪ ಗೋವಿಂದಾ। ಶ್ರೀರಾಮಕೃಷ್ಣ ಗೋವಿಂದಾ। ರಘುಕುಲ ನಂದನ ಗೋವಿಂದಾ। ಪ್ರತ್ಯಕ್ಷ ದೇವ ಗೋವಿಂದಾ। ಪರಮದಯಾಕರ ಗೋವಿಂದಾ। ವಜ್ರಕವಚಧರ ಗೋವಿಂದಾ। ಗೋವಿಂದ ಹರಿ ಗೋವಿಂದಾ। ಗೋಕುಲ ನಂದನ ಗೋವಿಂದಾ।।9।। ವೈಜಯಂತಿಮಾಲ ಗೋವಿಂದಾ। ವಡ್ಡಿಕಾಸುಲವಾಡ ಗೋವಿಂದಾ। ವಸುದೇವತನಯಾ ಗೋವಿಂದಾ। ಬಿಲ್ವಪತ್ರಾರ್ಚಿತ ಗೋವಿಂದಾ। ಭಿಕ್ಷುಕ ಸಂಸ್ತುತ ಗೋವಿಂದಾ। ಸ್ತ್ರೀಪುಂರೂಪ ಗೋವಿಂದಾ। ಶಿವಕೇಶವ ಮೂರ್ತಿ ಗೋವಿಂದಾ। ಬ್ರಹ್ಮಾಂಡ ರೂಪಾ ಗೋವಿಂದಾ। ಭಕ್ತರಕ್ಷಕ ಗೋವಿಂದಾ। ಗೋವಿಂದಾ ಹರಿ ಗೋವಿಂದಾ। ಗೋಕುಲ ನಂದನ ಗೋವಿಂದಾ।।10।। ನಿತ್ಯಕಲ್ಯಾಣ ಗೋವಿಂದಾ। ನೀರಜನಾಭ ಗೋವಿಂದಾ। ಹತೀರಾಮಪ್ರಿಯ ಗೋವಿಂದಾ। ಹರಿಸರ್ವೋತ್ತಮ ಗೋವಿಂದಾ। ಜನಾರ್ಧನಮೂರ್ತಿ ಗೋವಿಂದಾ। ಜಗತ್ಸಾಕ್ಷಿರೂಪ ಗೋವಿಂದಾ। ಅಭಿಷೇಕಪ್ರಿಯ ಗೋವಿಂದಾ। ಅಪನ್ನಿರಸನ ಗೋವಿಂದಾ। ರತ್ನ ಕಿರೀಟಾ ಗೋವಿಂದಾ। ಗೋವಿಂದ ಹರಿ ಗೋವಿಂದಾ। ಗೋಕುಲ ನಂದನ ಗೋವಿಂದಾ।।11।। ರಾಮಾನುಜನುತ ಗೋವಿಂದಾ। ಸ್ವಯಂಪ್ರಕಾಶ ಗೋವಿಂದಾ। ಆಶ್ರಿತಪಕ್ಷ ಗೋವಿಂದಾ। ನಿತ್ಯಶುಭಪ್ರದ ಗೋವಿಂದಾ। ನಿಖಿಲಲೋಕೇಶಾ ಗೋವಿಂದಾ। ಆನಂದರೂಪ ಗೋವಿಂದಾ। ಇಹಪರದಾಯಕ ಗೋವಿಂದಾ। ಇಭರಾಜರಕ್ಷಕ

ಗೋವಿಂದಾ। ಗೋಕುಲ ನಂದನ ಗೋವಿಂದ। ಪರಮದಯಾಳೂ ಗೋವಿಂದಾ॥11॥ ಪದ್ಮನಾಭ ಹರಿ ಗೋವಿಂದಾ। ತಿರುಮಲವಾಸ ಗೋವಿಂದಾ। ತುಲಸೀವನಮಾಲ ಗೋವಿಂದಾ। ಶೇಷಶಾಯಿ ಗೋವಿಂದಾ। ಶೇಷಾದ್ರಿ ನಿಲಯಾ ಗೋವಿಂದಾ। ಶ್ರೀನಿವಾಸ ಶ್ರೀ ಗೋವಿಂದಾ। ಶ್ರೀವೇಂಕಟೇಶಾ ಗೋವಿಂದಾ। ಗೋಕುಲನಂದನ ಗೋವಿಂದಾ॥13॥

ಪಂಕಜಮುಖಿಯರೆಲ್ಲರು (ಆರತಿ) **ರಾಗ: ಧನ್ಯಾಸಿ-ಆದಿತಾಳ**

ಪಂಕಜಮುಖಿಯರೆಲ್ಲರು ಬಂದು ಲಕ್ಷ್ಮೀ। ವೇಂಕಟರಮಣಗಾರುತಿ ಎತ್ತಿರೆ॥ಪ॥ ಮತ್ಸ್ಯಾವತಾರಗೆ ಮಂದರೋದ್ಧಾರಗೆ। ಅಚ್ಚರಿಯಿಂದ ಭೂಮಿ ತಂದವಗೆ॥ ಹೆಚ್ಚಾದ ಉಕ್ಕಿನ ಕಂಭದಿಂದಲಿ ಬಂದ। ಲಕ್ಷ್ಮೀನರಸಿಂಹಗಾರುತಿಯೆತ್ತಿರೆ॥1॥ ವಾಮನ ರೂಪಿಲಿ ದಾನ ಬೇಡಿದವಗೆ। ಪ್ರೇಮದಿ ಕೊಡಲಿಯ ಪಿಡಿದವಗೆ। ರಾಮಚಂದ್ರನಾಗಿ ದಶಶಿರನ ಕೊಂದ॥ ಸ್ವಾಮಿ ಶ್ರೀ ಕೃಷ್ಣಗಾರುತಿಯೆತ್ತಿರೆ॥2॥ ಬತ್ತಲೆ ನಿಂತವಗೆ ಬೌದ್ಧಾವತಾರಗೆ। ಉತ್ತಮ ಅಶ್ವವನೇರಿದಗೆ॥ ಭಕ್ತರ ಸಲಹುವ ಪುರಂದರವಿಠಲಗೆ। ಮುತ್ತೈದೆಯರಾರುತಿಯೆತ್ತಿರೆ॥3॥

ಮಂಗಳಂ ಸುರೇಶಾಧೀಶ ವೆಂಕಟೇಶಗೆ

ಮಂಗಳಂ ಸುರೇಶಾಧೀಶ ವೆಂಕಟೇಶಗೆ। ಸಿಂಗಮುಖ ಸರ್ವೋತ್ತಮಾಂಗ ರಂಗನಾಥಗೇ॥ಪ॥ ಮತ್ಸ್ಯನಾಗಿ ಜಲದಿ ಸ್ವೇಚ್ಛಾರೂಪ ತಾಳ್ದಗೇ। ಅಖಿಳ ಭಾರವನ್ನೇ ಪೊತ್ತ ತ್ರಿಜಗವಂದ್ಯಗೇ॥1॥ ದುಷ್ಟಕ್ರೂರ ರೂಪದಿ ಅಸುರನ ಮೆಟ್ಟಿ ಸೀಳ್ದಗೇ। ಪುಟ್ಟ ಪೋರಗ್ವರವ ಕೊಟ್ಟ ದಿಟ್ಟ ರೂಪಗೇ॥2॥ ಮೂರಡೀ ಭೂಮಿ ಜಾಗ ಬೇಡಿದಾತಗೇ। ಮೂಢರಂತೆ ತಾಯಿ ಶಿರವ ಕಡಿದ ಶೂರಗೇ॥3॥ ಸತಿ ನಿಮಿತ್ತ ಅಸುರ ಲಂಕೆಯ ಪತಿಯನಳಿದಗೇ। ಮಥನ ಮಾಡಿ ಕಾಳಿ ಮಡುವ ಧುಮುಕಿ ದಾತಗೆ॥4॥ ಬೌದ್ಧನಾಗಿ ತ್ರಿಪುರ ಸತಿಯರ ವ್ರತವನಳಿದಗೇ। ಉತ್ತಮಾಶ್ವವೇರಿದಾ ಶ್ರೀ ಕನಕಾದ್ರಿನಾಥಗೇ॥5॥

ಬೆಟ್ಟದೊಡೆಯ ಶ್ರೀನಿವಾಸಗೆ ನಿತ್ಯ ಮಂಗಳಂ **ರಾಗ: ಮಧ್ಯಮಾವತಿ**

ಬೆಟ್ಟದೊಡೆಯ ಶ್ರೀನಿವಾಸಗೆ ನಿತ್ಯ ಮಂಗಳಂ। ಲೋಕಮಾತೆಯಾದ ಪದ್ಮಾವತಿಗೆ ಮಂಗಳಂ॥ಪ॥ ಕೆಂದಾವರೆಯ ಹೋಲುವ ಪಾದಕೆ ಅಂದುಗೆ ಕಿರುಗೆಜ್ಜೆಯು। ಉಂಗುರ ಉಡಿದಾರ ವಜ್ರಬಂಗಾರ ಕಿರೀಟವು॥1॥ ಎರಡು ಕೈಯಲಿ ಶಂಕು ಚಕ್ರವು ಗದೆಯು ಪದ್ಮವು। ನೊಸಲಿಗೆ ಕಸ್ತೂರಿ ತಿಲಕ ಕುಶಲದಿಂದಲಿ॥2॥ ಮರವನೇರಿ ವೇಣು ಕೊಳಲ ಪಿಡಿದ ಧೀರನಿಗೆ। ದುರುಳ ಕ್ಷತ್ರಿಯ ಕುಲವನಳಿದ ಉಡುಪಿಕೃಷ್ಣನಿಗೆ॥3॥ ಶೇಷಗಿರಿಯಲ್ಲಿ ನಿಂತು ವಾಸವಾದನೇ। ದಾಸರಿಂದಲಿ ಪೂಜೆಗೊಂಬುವ ವೆಂಕಟೇಶಗೆ॥4॥

ವರ ವೈಂಕುಠದಿಂದ ಬಂದವಗೆ **ರಾಗ: ಬಿಲಹರಿ, ಮಿಶ್ರಛಾಪುತಾಳ**

ವರ ವೈಕುಂಠದಿಂದ ಬಂದವಗೆ। ವನಗಿರಿಯಲಿ ಸಂಚರಿಸಿದವಗೆ। ವರಹಾದೇವರ ಅನುಸರಿಸಿಬಂದು। ಸ್ವಾಮಿ ಪುಷ್ಕರಣಿಯಲ್ಲಿ ಮಿಂದವಗೆ॥ಪ॥ ಸರಸದಿಂಬೇಟೆಗೆ ಹೊರಟವಗೆ। ಸರಸಿಜಾಕ್ಷಿಯಳ ಕಂಡವಗೆ। ಮರುಳಾಟಕೆ ತಾ ಪರವಶನಾದಗೆ। ಕೊರವಿ ವೇಷವ ಧರಿಸಿದದೇವಗೆ॥1॥ ಗಗನರಾಜನ ಪುರುಕ್ಹೋದವಗೆ। ಬಗೆಬಗೆ ನುಡಿಗಳ ನುಡಿದವಗೆ। ಖಗವಾಹನಗೆ ನಿನ್ನ ಮಗಳನ್ನು ಕೊಡು। ಎಂದು ಗಗನ ರಾಜನ ಸತಿಗ್ಹೇಳಿದವಗೆ॥2॥ ತನ್ನ ಕಾರ್ಯ ತಾ ಮಾಡಿದಗೆ। ತನ್ಹೇಸರ್ಹೇಳ್ದವಗೆ। ಮುನ್ನ ಮದುವೆ ನಿಶ್ಚಯಮಾಡಿಕೊಂಡು। ತನ್ನ ಬಳಗವ ಕರೆಸಿದ ದೇವಗೆ॥3॥ ಎತ್ತಿಲಿದಿಬ್ಬಣಕ್ಹೊರಟವಗೆ। ನಿತ್ಯ ತೃಪ್ತನಾಗಿರುವವಗೆ। ಉತ್ತರಾಣಿಯ ಅನ್ನವನುಂಡು। ತೃಪ್ತನಾಗಿ ತೇಗಿರುವವಗೆ॥4॥ ಒದಗಿ ದಿಬ್ಬಣದಿಂದ ಹೊರಟವಗೆ। ಸದಯ ಹೃದಯನಾಗಿರುವವಗೆ। ಮುದದಿಂದಲಿ ಶ್ರೀಪದುಮಾವತಿಯಳ। ಮದುವೆ ಮಾಡಿಕೊಂಡ ಮದುಮಗಗೆ॥5॥ ಕಾಂತೆಸಹಿತ ಹೊರಹೊರಟವಗೆ। ಸಂತೋಷದಿ ಹೆಸರ್ಹೇಳಿದವಗೆ। ಸಂತತ ಶ್ರೀ ಮದನಂತಾದೀಶಗೆ। ಶಾಂತ ಮೂರುತಿ ಶ್ರೀನಿವಾಸನಿಗೆ॥6॥ ಮಂಗಳಂ ಪದ್ಮಿಮಿ ಅರಸನಿಗೆ। ಲಕುಮಿ ರಮಣನಿಗೆ। ಭೂ ವೈಕುಂಠದ ಒಡೆಯಗೆ। ಲಕ್ಷ್ಮೀನರಸಿಂಹಗೆ ಮಂಗಳಾ ಜಯ ಮಂಗಳ॥7॥

57. ಸಂಕ್ರಾಂತಿ

ಬಂದಿದೆ ಬಂದಿದೆ ಸಂಕ್ರಾಂತಿ **ರಾಗ: ಸಾರಂಗ**

ಬಂದಿದೆ ಬಂದಿದೆ ಸಂಕ್ರಾಂತಿ ಬಂದಿದೆ। ಹೊಸದು ಕಾಳಿನ ಹಬ್ಬವನು ತಂದಿದೆ।। ಸೂರ್ಯನ ವ್ಯೂಹದ ಗತಿಯಲಿ। ಉತ್ತರಾಯಣ ಕಾಲವು ಬಂದಿದೆ।। ಮಾಗಿಯಂ ಸುಗ್ಗಿಯಂ ಹಿಗ್ಗನು ತೋರುತ। ಸ್ವಾಗತ ಬೀರುತ ಸಂಕ್ರಾಂತಿ ಬಂದಿದೆ।। ಬದುಕಿನ ಆಸೆಯ ತೋರಿ ಹೊಸ ನೋಟವ। ಜೀವನ ಕಳೆಯ ಹೆಚ್ಚಿಸ ಬಂದಿದೆ।। ಭಾರತ ದೇಶದಿ ಎಲ್ಲೆಡೆ ಹಬ್ಬುತ। ನೂತನ ಫಸಲಿನ ಶ್ರೀಕಾಂತಿ ತಂದಿದೆ।। ಸಂಕ್ರಾಂತಿ ಹಬ್ಬದಂದು ಹೊಸಕಾಳನು ತಂದು। ಮನೆ ಮನೆಗೆ ಹಂಚುತ ಮೈ ಮರೆತು ಕುಣಿದರು।। ಈ ಹಬ್ಬವು ಪುನಃ ಬರಲಿ ಧಾನ್ಯದ ರಾಶಿ ತರಲಿ। ಶ್ರೀಹರ್ಷವನ್ನು ಎಲ್ಲರಲಿ ತುಂಬುತ ಹಬ್ಬಿ ಬರಲಿ ಸಂಕ್ರಾತಿ।।

ನಮಗಾಗಿ ಬರುತಿದೆ ಸಂಕ್ರಾಂತಿ **ರಾಗ: ಸಾರಂಗ**

ನಮಗಾಗಿ ಬರುತಿದೆ ಸಂಕ್ರಾಂತಿ। ಉತ್ತರಾಯಣದಲ್ಲಿ ಮಕರ ಸಂಕ್ರಾಂತಿ।।ಪ।। ಬೆಲ್ಲ ಕೊಬ್ಬರಿ ಹೆಚ್ಚಿ ಎಳ್ಳನ್ನೇ ಬೆರಸಿ। ಬಣ್ಣ ಬಣ್ಣದ ಸಕ್ಕರೆ ಅಚ್ಚುಗಳ ಮಾಡಿ। ಚಂದ ಚಂದದ ಉಡುಪು ಮಕ್ಕಳಿಗೆ ಹಾಕಿ। ಹರಿಯನ್ನೇ ನೆನೆದು ಸಿಹಿಯನ್ನು ಸವಿದು।।1।। ಎಳ್ಳು ಸಕ್ಕರೆ ಅಚ್ಚು ಪಡಿಯಲ್ಲಿ ತುಂಬಿ। ಕಬ್ಬು ಬಾಳೆಹಣ್ಣು ಸಹಿತ ಮನೆಮನೆಗೆ ಬೀರಿ। ಎಳ್ಳು ಬೆಲ್ಲವ ತಿಂದು ಸವಿ ಮಾತಾಡಿರಿ ಎಂದು। ಎಲ್ಲರು ಒಂದಾಗಿ ಸಂತಸವ ನೀಡುವ।।2।। ಹಸೆಮಣೆಯನೆ ಹಾಕಿ ಮಕ್ಕಳನ್ನು ಕುಳ್ಳಿರಿಸಿ। ಕಬ್ಬು ಬೋರೆಹಣ್ಣು ಪಡಿಯಲ್ಲಿ ತುಂಬಿ। ನಾರಿಯರು ಮಕ್ಕಳಿಗೆ ಫಲವನ್ನೇ ಎರೆದು। ಹರಸಿ ಹಾಡುತಲಿ ಆರತಿ ಮಾಡುವ।।ಸಂಕ್ರಾಂತಿ।।

ಸಂಕ್ರಾಂತಿ ಸಂಭ್ರಮ ಬಂತಯ್ಯ **ರಾಗ: ಸಾವೇರಿ**

ಸಂಕ್ರಾಂತಿ ಸಂಭ್ರಮ ಬಂತಯ್ಯ ಓ... ಓ... ಓ... ಓ...। ಸುಗ್ಗಿಯ ಸಿರಿಯು ತಂತಯ್ಯ ಆ... ಆ... ಆ... ಆ...ಹೊಲಗದ್ದೆ ನಗುತ್ತೈತೆ ಹಸಿರು ತೆನೆ ಅರಳೈತೆ। ಬತ್ತರಾಗಿ ಹೆಸರು ತೊಗರಿ ಧಾನ್ಯ ಉಕ್ಕೈತೆ ಓ... ಓ...।।ಸಂ।। ಭೂಮಿ ತಾಯಿ ಹಸಿತಾಳೆ।। ಕಿರು ನಗೆಯ ಬೀರುತಾಳೆ। ಮಲ್ಲೆ ಜಾಜಿ ಹೂ ಮುಡಿದು ಒಲಿದು ಬಂದೌಳೆ ಭೂ ತಾಯಿ ಬಂದೌಳೆ।।ಸಂ।। ಬಡವರಿಗೆ ಅನ್ನದಾತೆ। ಅನ್ನಪೂರ್ಣೇಶ್ವರಿ ನೀ। ನೇಗಿಲ ಹೊತ್ತ ರೈತರಿಗೆ ಕುಲದೈವಳು ನೀ ನಮ್ಮ ಭಾಗ್ಯಲಕ್ಷ್ಮೀ ನೀ। ಓ... ಓ...।।ಸಂ।।

ಕಾಮಧೇನುವೇ ಕರುಣಿಸು ಏಳು **ರಾಗ: ಭೌಳಿ**

ಕಾಮಧೇನುವೇ ಕರುಣಿಸು ಏಳು। ಬೇಡಿದ ಕಾಮಿತ ಫಲಂಗಳ ಕೊಡುವೋಳೆ ತಾಯೇ।। ಸ್ಮರಣೆಮಾತ್ರದಲಿ ಸಕಲಪಾಪಗಳ್ಹರಿಸಿ। ಸ್ಮರಿಸಿದವರಿಗೇ ಪುಣ್ಯದ ಫಲವೂ। ದರುಶನ ಮಾತ್ರದಿ ದಾರಿದ್ರಗಳ್ಹರಿಸಿ। ಕಾಣದ ವೇದ ಸಕಲ ಪುರಾಣದಲಿ।।1।। ಒಂದೊಂದು ಕವಳವ ತಂದುಕೊಟ್ಟವರಿಗೆ। ಚಂದದಿಂ ಮುಕ್ತಿಯ ಕೊಡುವೋಳೆ ತಾಯೆ। ಬಂದು ನಿಮ್ಮೊಳು ಮೈ ಸೇವೇನೆ ಮಾಡಲು। ಬಹುಬಂಧನಗಳನೆಲ್ಲ ಪರಿಹರಿಸುವ ತಾಯೇ।।2।।ಗೋಮಯ ಗೋಮೂತ್ರ, ಗೋಕ್ಷೀರವು ದಧಿ। ಗೋಘೃತದಿಂದ ಸಕಲಸಿದ್ಧಿಯೂ। ಗೋವೆಂಬೋ ಎರಡಕ್ಷರವನುಚ್ಚರಿಸಲು। ಗೋವಳಗೊಂಡು ಹೋಗುವುದು ಪಾಪದ ರಾಶೀ।।3।।ಪಾಪವಿನಾಶಳೆ, ಪರಬ್ರಹ್ಮರೂಪಳೇ। ಸೋಪಾನವಾದೇ ಸ್ವರ್ಗದ ದಾರಿಗೇ। ಅಪಾರ ಮಹಿಮಳೆ, ಅಖಿಲರ ಪೊರೆವೋಳೆ। ಕಾಪಾಡಿ ಜನರ ರಕ್ಷಿಪೋಳೇ ತಾಯೇ।।4।।ಪುಣ್ಯ ಪ್ರಭಾವಳೆ, ಪುಣ್ಯ ಸ್ವರೂಪಳೆ। ಧನ್ಯಳೆಂದೆನಿಪೋಳೆ ದಯಗುಣಳೇ। ಚೆನ್ನ ಶ್ರೀ ವೇಲಾಪುರದ ಶ್ರೀಕೃಷ್ಣರ। ಉಣ್ಣೆಸೋಳೆ ಅಮೃತವ ಕರೆದು।।5।।

ಕಾಮಧೇನು ಬಂದಿದೆ ಮನೆಗೆ **ರಾಗ: ಕಾಂಬೋದಿ**

ಕಾಮಧೇನು ಬಂದಿದೆ ಮನೆಗೆ। ರಾಮ ಕೃಷ್ಣರೆಂಬೊ ಧನಿಯಾನಾಲೈಸುತ।।ಪ।। ವೇದನಾಲ್ಕು ಎಂಬೊ ಪಾದಸುಜ್ಞಾನವು ಭೋದಿಸುವೋ। ಕಣ್ಣು ಕಿವಿಗಳಿಂದ। ತತ್ವ ಭೋದನೆಯೆಂಬೋ ವೇದವೆ ಮುಖಮಾಡಿ। ವೇದಾಂತ ಬಾಲವ ಬೀಸುತಲಿ।।1।। ಧರ್ಮಾರ್ಥಕಾಮ ಮೋಕ್ಷಗಳೆಂಬೊ ಕೆಚ್ಚಲು। ಚಿತ್ತನಿರ್ಮಲ ಕ್ಷೀರಾಂಬುಧಿಯು। ಒಮ್ಮಾನ ತನದಲ್ಲಿ ಕರೆಸಿಕೊಳ್ಳಿರಿ ಎಂದು। ನಮ್ಮ ಮನೆಗೆ ಬಂದಿದೆ ಸುರಧೇನು।।2।। ಭಕ್ತಿಎಂಬುವ ಗರಿಕೆಹುಲ್ಲನ್ನು ಮೇಯುತ್ತ। ಚಿತ್ತದಲಿ ತಿಳಿನೀರನ್ನೆ ಕುಡಿದು। ಮುಕ್ತಿಯೆಂಬೊ ಕಲಗಚ್ಚಿಗೆ ಕತ್ತನಿರಿಸುತ್ತಾ। ಚಿತ್ತಜನಯ್ಯ ಶ್ರೀ ಪುರಂದರವಿಠಲನ ನೆನಸುತ್ತ।।3।।

ಪೂಜಿಸೋಣ ಬನ್ನಿ ಕಾಮಧೇನುವನ್ನು **ರಾಗ: ನಾದನಾಮಕ್ರಿಯೆ-ಆದಿತಾಳ**

ಪೂಜಿಸೋಣ ಬನ್ನಿ ಕಾಮಧೇನುವನ್ನು। ಸೇವಿಸೋಣ ಬನ್ನಿರಿ ಸುರಧೇನುವನ್ನು।।ಪ।। ಕ್ಷೀರವನ್ನು ನೀಡುವಂತಹ ಕಾಮಧೇನುವನ್ನು। ಲಕ್ಷ್ಮಿಯ ನೆಲೆಯಾಗಿರುವ ಸುರಧೇನುವನ್ನು। ಸರ್ವ ಸಂಪದ್ಭರಿತಳಾದ ಕಾಮಧೇನುವನ್ನು। ಕಣ್ಣ ತುಂಬ ಆನಂದ ನೀಡುವ ಸುರಧೇನುವನ್ನು।।1।। ಇಷ್ಟಾರ್ಥಗಳ ನೀಡುವಂತಹ ಕಾಮಧೇನುವನ್ನು। ಪೂಜಿಸಲು ಅರ್ಹಳಾದ ಸುರಧೇನುವನ್ನು। ಭಕ್ತರು ಮೆಚ್ಚುವ ಕಾಮಧೇನುವನ್ನು। ಮುಕ್ತಿಯ ನೀಡುವ ಸುರಧೇನುವನ್ನು।।2।।

ಕಾಮಧೇನು ತಾಯೇ ನಿಮ್ಮ **ರಾಗ: ಆನಂದಭೈರವಿ**

ಕಾಮಧೇನು ತಾಯೇ ನಿಮ್ಮ ಪಾದಕೆ ನಮೋ ನಮಃ। ಕಾಮಧೇನು ತಾಯೇ ನಿಮ್ಮ ಕೆಚ್ಚಲಿನಲಿ ಗೋಪಾಲಕನಿರುವನು।।ಪ।। ಮೇಯುವುದು ಹುಲ್ಲನ್ನು ನೊರೆಹಾಲು ಕೊಡುವುದು। ತಣ್ಣೀರು ಕುಡಿಯುವುದು, ಬಾಯಲ್ಲಿ ಬ್ರಹ್ಮನಿರುವನು। ನಾಲಿಗೆಯಲಿ ಶಾರದಾದೇವಿ ಇರುವಳು। ಮೂಗಿನಲ್ಲಿ ಮುಕ್ಕಣ್ಣನಿರುವನು। ಹಣೆಯಲ್ಲಿ ಆದಿಶೇಷನಿರುವನು। ಕಣ್ಣಿನಲ್ಲಿ ಸೂರ್ಯಚಂದ್ರಾದಿಗಳಿರುವರು। ಕೊಂಬಿನಲ್ಲಿ ಗಂಧರ್ವರಿರುವರು। ಕಿವಿಯಲ್ಲಿ ಕರ್ಣನಿರುವನು। ಬೆನ್ನಿನಲಿ ಭೀಮಸೇನನಿರುವನು। ಕೊರಳಲ್ಲಿ ಶ್ರೀಕೃಷ್ಣನಿರುವನು। ಮಡುವಿನಲ್ಲಿ ಮಹಾಲಕ್ಷ್ಮೀ ಇರುವಳು। ಹೊಟ್ಟೆಯಲ್ಲಿ ಸಪ್ತಋಷಿಗಳಿರುವರು। ಬಾಲದಲಿ ಭಾಗೀರಥಿ ಆಟವಾಡುತಿರುವಳು। ನಡುಬಾಲದಲಿ ಸೀತಾರಾಮ ಲಕ್ಷ್ಮಣ ಭರತ ಶತ್ರುಘ್ನಾದಿಗಳಿರುವರು। ತುದಿಬಾಲದಲಿ ಮುನ್ನೂರು ಮೂವತ್ತು ಕೋಟಿ ದೇವತೆಗಳಿರುವರು। ಪಾದದಲಿ ಪಾಂಡವರಿರುವರು। ಮೊಣಕಾಲ ಚಿಪ್ಪಿನಲಿ ನಾರಾಯಣ ಸ್ವಾಮಿ। ಗೀತೆ ಹೇಳುತ್ತಿರುವರು। ಇದು ಕೇಳಿದವರಿಗೆ ಉತ್ತರಾಯಣ ದಕ್ಷಿಣಾಯಣ। ಪುಣ್ಯಕಾಲದಲಿ ಸ್ನಾನ ಮಾಡಿದ ಫಲವು ಬರುವುದು। ಭಾನುವಾರದ ದಿನ ಹೇಳಿದವರಿಗೆ। ಎಂಟು ದಿನ ಮಾಡಿದ ಪಾಪ ಪರಿಹಾರವಾಗುವುದು। ಅಮಾವಾಸ್ಯೆಯ ದಿನ ಹೇಳಿದವರಿಗೆ। ಆರು ತಿಂಗಳ ಪಾಪ ಪರಿಹಾರವಾಗುವುದು। ನಿತ್ಯವೂ ಹೇಳಿದವರಿಗೆ। ಗೋದಾನ, ಭೂದಾನ, ಕನ್ಯಾದಾನ ಮಾಡಿದ ಫಲವು ಬರುವುದು। ಗೋಮಾತೆ ಭೂಮಾತೆ। ಶ್ರೀಮಾತೆ ನಮಸ್ತೇ ನಮಸ್ತೇ ನಮಸ್ತೇ।।

ಗೋಮಾತೆ ಶ್ರೀಮಾತೆ **ರಾಗ: ಹಿಂದೋಳ**

ಗೋಮಾತೆ ಶ್ರೀಮಾತೆ। ಜಯಜಯ ಮಾತೆ।।ಪ।। ಕ್ಷೀರ ಸಮುದ್ರವನ್ನು ನೀಡುವ ಮಾತೆ। ಜಗದೋದ್ಧಾರಿಣಿ ಮಂಗಳ ಮಾತೆ।।ಅ.ಪ।। ಸಂಕ್ರಾಂತಿ ಹಬ್ಬದಂದು ಪೂಜೆ ಕೈ ಗೊಳ್ಳುವ ಮಾತೆ। ಸರ್ವಮಂಗಳೆಯಾಗಿ ಕಂಗೊಳಿಪ ಮಾತೆ। ಕಾಮಧೇನುವಾಗಿ ಇಷ್ಟಾರ್ಥ ಸಲ್ಲಿಸುವ ಮಾತೆ। ಸರ್ವರೂ ಭಕ್ತಿಯಿಂದ ಪೂಜಿಸುವ ಮಾತೆ।।1।। ಮುಕ್ಕೋಟಿ ದೇವರು ನೆಲಸಿಹ ಮಾತೆ। ಸರ್ವರ ಹೃದಯದಲ್ಲಿ ನೆಲಸಿಹ ಮಾತೆ। ಲೋಕೋದ್ಧಾರಕಿ ನೆಲೆಸಿಹ ಮಾತೆ। ಮುಕ್ತಿಯ ನೀಡಲು ನೆಲಸಿಹ ಮಾತೆ।।2।।

ಮಾತೆಯೇ ಮಾತೆ ಗೋಮಾತೆ **ರಾಗ: ಬಾಗೇಶ್ರೀ**

ಮಾತೆಯೇ ಮಾತೆ ಗೋಮಾತೆ ಮಾತೆ। ಪಾತಕರು ನಾವಮ್ಮ ತ್ರೈಲೋಕ್ಯ ವಿಖ್ಯಾತೆ॥ಪ॥ ಹಾಲನ್ನು ಕರೆದುಂಡು ಮೇಲೆ ಕೆನೆ ಮೊಸರುಂಡು। ಬಲು ರಮ್ಯವಾದ ಬೆಣ್ಣೆಯನ್ನುಂಡು। ಬಲ ಕೊಡುವ ಘಮಘಮಿಪ ತುಪ್ಪವನು ನಲಿದುಂಡು। ಚೆಲುವ ಮಾತೆಯೇ ನಿನಗೆ ಕಟುಕರು ಕೊನೆಗೆ॥1॥ ಅಖಿಳ ವೇದಗಳೆಲ್ಲ ವಿಕಳವಾಯಿತು ಮಾತೆ। ಪ್ರಕಟವಾಯಿತು ನಿನ್ನ ಸದ್ಧರ್ಮವು। ಅಕಟಕಟ ಕಲಿ ಮಹಿಮೆ ಮುಕುಟಧಾರಿಗಳೆಲ್ಲ। ಚಕಿತರಾಗಿಹರಲ್ಲೆ ಮೂಕಿ ನಮ್ಮಮ್ಮ ॥2॥ ನಿನಗಾಗಿ ಸಾರಿದರು ಧರ್ಮತೀರ್ಥಂಕರರು। ನಿನಗಾಗಿ ಬೇಡಿದರು ಬಸವಾರ್ಯರು। ನಿನ್ನ ಶಂಕರ ಮಧ್ವ ರಾಮಾನುಜಾಚಾರ್ಯ। ಮನೆಮನೆಗೆ ಸಾರಿದರು ಧರ್ಮದೇವತೆಯೆಂದು॥3॥

ತುಮ್ ಜಗ್ ಜೀವನ್ ಕೀ ಜನನೀ (ಹಿಂದಿ) **ರಾಗ: ಬೇಹಾಗ್**

ತುಮ್ ಜಗ್ ಜೀವನ್ ಕೀ ಜನನೀ ಹೋ। ದೂಧ್ ದಹೀ ದೇನೇ ವಾಲಿ ಜನನಿ ಹೋ (2)। ತುಮ್ ಗೋಕುಲ್ ಕೀ ಭೀ ಗರಿಮಾ ಹೋ। ಮೋಹನ್ ಕೀ ಹೋ ತುಮ್ ಪ್ಯಾರಿ ಆ...॥ಪ॥ ತೇರೇ ಸಬಲ್, ಪುತ್ರ್ ಹೇ ಮಾತಾ। ಹೇ ಜೀವನ್ ಕೀ ಭಾಗ್ಯ ವಿಧಾತಾ। ಕೃಶಿಕೋಂಕೆ ನಯನೋಂಕೇ ತಾರೆ। ಮಿಥಾ ರಹೇ ಹೆ ಕಷ್ಟ್ ಹಮಾರೆ॥1॥ ಧರತೀ ಜೋತೇ ಪಾನೀ ಢೋತೇ। ವಾಹಕ್ ಬನ್‌ಕರ್ ಬೋಝಾ ಢೋತೆ। ಫೈಲಾತೇ ಹೈ ಗೌರವ್ ತೇರಾ। ಗೋಮಾತಾ ಅಭಿನಂದನ್ ತೇರಾ॥2॥ ತುಂ ಸೇ ಜೀವನ್ ಹೈ ಹಮ್ ಪಾತೆ। ದೂಧ್, ದಹೀ ಘೀ, ಮಕ್ಖನ್, ಖಾತೇ। ಸಬ್ ತೃಣ್ ತೇಲ್ ಅನ್ನ್ ಫಟ್ ಪಾತೇ। ಬದಲೇ ಮೇ ಹೈ ಕ್ಯಾದೇ ಪಾತೇ॥3॥ ತುಮ್ ಘೂಮ್ ಘೂಮ್ ತಿನಕೇ ಚರ್‌ತೀ ಹೊ। ದುಃಖ ಸಹತೀ ಪರ್ ದುಃಖ್ ಹರತೀ ಹೋ। ನಹೀ ಕಿಸೀ ಸೇ ಕುಛ್ ಕೆಹತೀ ಹೋ। ಜಗಮೇ ಜೀವನ್ ಭರ್ ದೇತಿ ಹೋ॥4॥ ಪರ್ ತೇರೀ ಸುಧಿ ಜಬ್ ಹೇ ಲಾತೆ। ನಯನ್ ಅಶ್ರು ಸೆ ಹೇ ಭರ್ ಆತೆ। ಕರತೇ ಹೇ ಹಮ್ ವಂದನ್ ತೇರಾ। ಗೋ ಮಾತಾ ಅಭಿನಂದನ್ ತೇರಾ॥5॥

ಕಪಿಲಾ ಗೋಮಾತೆಯರೇ **ರಾಗ: ಭೌಳಿ**

ಕಪಿಲಾ ಗೋಮಾತೆಯರೇ ವಂದನವು ನಿಮಗೆ। ಋಷಿಗಳೇ ಕರುಗಳೇ ಕೋಟಿವಂದನವು ನಿಮಗೆ॥ ಹಸುಗಳು ಕುಡಿಯುವುದು। ಕಲಗಚ್ಚು ತಿಳಿನೀರು। ಮೇಯುವುದು ಹಸಿರು। ಹುಲ್ಲು ಜೊಂಡುಗಳ। ಕರೆಯುವುದು ನೊರೆನೊರೆ ಹಾಲನು ಹಸುವು। ಪರಮಾತ್ಮ ಗರ್ಭಿತವು ಗೋವಿನ ಕ್ಷೀರವು॥1॥ ಹಸುವಿನ ಕೊರಳಲ್ಲಿ ಶ್ರೀಕೃಷ್ಣ ನೆಲೆಸಿರುವ। ಬಾಯಲ್ಲಿ ವಾಣಿಪತಿ ಬ್ರಹ್ಮನಿರುವಾ। ನಾಲಿಗೆಯಲಿ ಶ್ರೀ ವಾಗ್ದೇವಿ ನೆಲೆಸಿಹಳು। ಮೂಗಿನಲಿ ಮುಕ್ಕಣ್ಣ ಮಹಾದೇವನಿರುವ॥2॥ ಕಿವಿಯಲ್ಲಿ ನೆತ್ತಿಯಲಿ ಗಂಗೆ ಪಂಚಭೂತಗಳು। ಕಣ್ಣುಗಳಲೀ ಚಂದ್ರ ಸೂರ್ಯರು ನೆಲೆಸಿಹರು। ಕೊಂಬುಗಳಲಿ ದೇವಗಂಧರ್ವರು ಇರಲು। ಹಣೆಯಲ್ಲಿ ಶ್ರೀ ಶಿವರುದ್ರ ನಿಂತಿಹನು॥3॥ ಬೆನ್ನಿನಲಿ ವಾಸುದೇವ ಕೆಚ್ಚಲಲಿ ಸರೋವರಗಳು। ಹೊಟ್ಟೆಯಲಿ ವಿಠಲನು ಸಂತಸದಿ ನೆಲೆಸಿರಲು। ಮೊಣಕಾಲಿನಲಿ ನಾರಾಯಣಗೀತೆ ಪಾಡಲು। ಅಂಗಾಲು ಮುಂಗಾಲಲಿ ಶ್ರೀರಂಗ ಮುರಹರರಿರಲು॥4॥ ಮಡಿಲಲ್ಲಿ ಮಹಾಲಕ್ಷ್ಮಿ ಬಾಲದಲಿ ಭಾಗೀರಥಿ। ನಡುಬಾಲದಲಿ ಶ್ರೀ ಪಟ್ಟಾಭಿರಾಮ ಬಾಲಹನುಮ। ತುದಿ ಬಾಲದಲಿ ಮೂವತ್ತು ಮೂರುಕೋಟಿ ಋಷಿಗಳು। ಜಪತಪ ಧ್ಯಾನದಲಿ ನಿರತರಾಗಿಹರು॥5॥ ಉದಯದಲಿ ಎದ್ದು ಗೋಸ್ತೋತ್ರ ಮಾಡಿದರೆ। ಅತಿಪುಣ್ಯ ಫಲವು ದೊರಕುವುದು ದಿನವು। ಗೋವಿನ ಪೂಜೆಯ ಮಾಡೋಣ ಬನ್ನಿ। ಅಕ್ಕಿ ಬೆಲ್ಲವ ಕೊಟ್ಟು ನಮಿಸುವ ಬನ್ನಿ॥6॥

ಪಶುಗಳೆ ನಿಮ್ಮ ಪಾದಕೆರಗುವೆನು **ರಾಗ: ಕುರಂಜಿ**

ಪಶುಗಳೆ ನಿಮ್ಮ ಪಾದಕೆರಗುವೆನು। ಅಲ್ಲಾಡುವಿರಿ ಹಸಿಹುಲ್ಲಮೇವಿರಿ। ಕುಡಿವಿರಿ ತಿಳಿನೀರುಗಳ। ಕರೆದಿರೆ ನೊರೆ ಹಾಲುಗಳ। ಪಾದದಲ್ಲಿ ಇರುವ ಪಾಂಡವರಿಗೆ ನಮಸ್ಕಾರ। ಗಂಟಲಲ್ಲಿರುವ ಗಂಧರ್ವರಿಗೆ ನಮಸ್ಕಾರ। ನಾಲಿಗೆಯಲಿರುವ

ನಾರಾಯಣನಿಗೆ ನಮಸ್ಕಾರ। ಮೂಗಿನಲ್ಲಿರುವ ಮುಕ್ಕಣ್ಣೇಶ್ವರನಿಗೆ ನಮಸ್ಕಾರ। ಕಣ್ಣಾಗಿರುವ ಸೂರ್ಯಚಂದ್ರರಿಗೆ ನಮಸ್ಕಾರ। ಕೋಡಿನಲ್ಲಿರುವ ರಾಮಲಕ್ಷ್ಮಣರಿಗೆ ನಮಸ್ಕಾರ। ಬೆನ್ನಲ್ಲಿರುವ ಸಪ್ತಋಷಿಗಳಿಗೆ ನಮಸ್ಕಾರ। ಕೆಚ್ಚಲಲ್ಲಿರುವ ಅಚ್ಯುತನಿಗೆ ನಮಸ್ಕಾರ। ಬಾಲದಲ್ಲಿರುವ ಭಾಗೀರಥಿಗೆ ನಮಸ್ಕಾರ। ಗೋಮೇದಕದಲ್ಲಿರುವ ಲಕ್ಷ್ಮೀದೇವಿಗೆ ನಮಸ್ಕಾರ। ರೋಮರೋಮದಲ್ಲಿರುವ ಕೋಟಿದೇವತೆಗಳಿಗೂ ನಮಸ್ಕಾರ। ಮತ್ತೆಕಂಚುವಾಳ ಸುವರ್ಣದ ಪಾತ್ರೆ। ಇಷ್ಟನುಕೊಟ್ರೆ। ಎಷ್ಟು ಫಲವೋ। ಸಹಸ್ರ ಜಪಮಾಡಿದಷ್ಟುಫಲ॥

ಶ್ರೀ ಕೃಷ್ಣನಿಗೀಗ ಫಲವನೆರೆದರು (ಸಂಕ್ರಾತಿ ಸಂಜೆ) **ರಾಗ: ಆನಂದಭೈರವಿ**

ಶ್ರೀ ಕೃಷ್ಣನಿಗೀಗ ಫಲವನೆರೆದರು। ನಾರೀಮಣಿಯೇರು ಫಲವನೆರೆದರು । ಪುಷ್ಯ ಮಾಸದಲ್ಲಿ ಮಕರ ಸಂಕ್ರಾಂತಿ। ಸಕ್ಕರೆ ಅಚ್ಚು ಎಳ್ಳು ಮಾಡಿ। ಕಬ್ಬು ಬಾಳೆಹಣ್ಣು ಮನೆ ಮನೆಗೆ ಬೀರಿ ॥1॥ ಮಕ್ಕಳಿಗೆ ಉಡುಪು ಧರಿಸಿ। ಹಸೆಮಣೆಯ ಮೇಲೆ ಕುಳ್ಳಿರಿಸಿ। ಕಬ್ಬು ಬೋರೆಹಣ್ಣಿನಿಂದ ಫಲವನೆರೆದರು ॥2॥ ಮಕ್ಕಳಿಗೆ ಆರುತಿ ಮಾಡಿ ನಾರಿಯರು ಆನಂದದಿ। ಚಿರಕಾಲವೂ ನೀವು ಸುಖಿಸಿರೆಂದು। ಆಶೀರ್ವಾದವ ಮಾಡಿ ಆರುತಿ ಮಾಡುವರು ॥3॥

ಕೋಟಿ ಕೋಟಿ ಆರತಿ ಪುಣ್ಯಕೋಟಿಗಾರತಿ (ಆರತಿ) **ರಾಗ: ಸಿಂಧುಭೈರವಿ**

ಕೋಟಿ ಕೋಟಿ ಆರತಿ ಪುಣ್ಯಕೋಟಿಗಾರತಿ। ಕೋಟಿ ಪುಣ್ಯದಾರತಿ ಪುಣ್ಯ ಕೋಟಿಗಾರತಿ॥ಪ॥ ಹೆಜ್ಜೆ ಗೆಜ್ಜೆ ನಾದದಿಂದ ಕಂಕಣದ ಕಿಣಿಯುಲಿವಿನಿಂದ। ಸುಮಂಗಳಕರದಾರತಿ ಪುಣ್ಯಕೋಟಿ ಗಾರತಿ॥1॥ ಜಾತಿ ಭೇದ ಧರ್ಮಮೀರಿ ಮಾತಿಗಿಂತ ಕೃತಿಯ ತೋರಿ। ಸುಮತಿವಂತರ ಜಾಗೃತಿ। ಪುಣ್ಯಕೋಟಿಗಾರತಿ॥2॥ ಒಂದೇ ದೇಶ ಒಂದೇ ಕುಲ ಒಂದೇ ನೆಲ ಒಂದೇ ಛಲ। ಒಂದೇ ಒಂದೇ ಗೋಕುಲದ। ಪುಣ್ಯ ಕೋಟಿಗಾರತಿ॥3॥ ಪುಣ್ಯಕೋಟಿ ನಾಡಕೀರ್ತಿ। ಪುಣ್ಯವಾಯಿತು ಈ ಧರಿತ್ರಿ। ಪುಣ್ಯರೂಪಿಗಾರತಿ ಪುಣ್ಯ ಕೋಟಿಗಾರತಿ॥4॥ ಧನ್ಯವಾಯಿತು ಎಮ್ಮ ಜನ ಧನ್ಯವಾಯಿತು ಎಮ್ಮ ಮನ। ಧನ್ಯತೆಯೇ ತಾ ಪಾವನ। ಪುಣ್ಯಕೋಟಿ ನಿರಾಜನ। ಕೋಟಿ ಪುಣ್ಯದಾರತಿ ॥5॥

❖ ❖ ❖

58. ಶ್ರೀ ತ್ಯಾಗರಾಜ ಸ್ವಾಮಿಗಳ ಆರಾಧನೆ

ತ್ಯಾಗರಾಜಾಯ ನಮಸ್ತೇ (ಕೀರ್ತನೆ) **ರಾಗ: ಬೇಗಡೆ-ರೂಪಕತಾಳ**

ತ್ಯಾಗರಾಜಾಯ ನಮಸ್ತೇ ನಮಸ್ತೇ। ಕಾತ್ಯಾಯಿನೀಪತೇ ಪಶುಪತೇ ಸಿಂಹಾಸನ ಪತೇ॥ಪ॥ ವಾಗೀಶಾದ್ಯಖಿಲದೇವ ವಂದಿತ ಪದ ಪಂಕಜಾಯ ಯೋಗೇಶ್ವರ ಮಾನಸ॥ ಸಂಯುಕ್ತವದನ ವಾರಿಜಾಯ। ಭೋಗ ಮೋಕ್ಷದಾನ ವಾಮ ಭಾಗಸ್ಥಿತ ಶೈಲಜಾಯ। ಯೋಗ ಗುರುಗುಹಾತ್ಮ ಜಾಯ ತ್ಯಾಗಧ್ವಜಾಯ ಅಜಾಯ॥ ಅ.ಪ॥ ಮುಕುಂದಾದಿ ಪೂಜಿತ ಸೋಮಸ್ಕಂದ ಮೂರ್ತಯೇ। ಮುಚುಕುಂದಾದಿ ಭಕ್ತಜನ ಮನೋರಥ ಪೂರ್ತಯೇ। ಮುಕುರಬಿಂಬ ಪ್ರತಿಬಿಂಬಿತ ಮುಖ ಸ್ಫೂರ್ತಯೇ। ಮುನಿಪಕ್ಷಿ ಮೃಗಕೀಟಾದಿ ಮುಕ್ತಿಪ್ರದ ಕೀರ್ತಯೇ। ಸಕಲಾಗಮ ಮಂತ್ರ ತಂತ್ರ ಸಾರಜ್ಞಾನುರಕ್ತಯೇ। ಅಕತಾದಿ ತ್ರಿರೇಖಾತ್ಮಕಾಧಾರ ಪ್ರವೃತ್ತಯೇ। ಸಕಲ ನಿಷ್ಕಳ ಸ್ವರೂಪ ಸ್ವಚಿತ್ತ ಸುಖ ವ್ಯಾಪ್ತಯೇ। ವಿಕಲ್ಪ ಭೇದಯುಕ್ತಯೇ ವಿಟಂಕ ರೂಪಶಕ್ತಯೇ॥ಚರಣ॥

ತ್ಯಾಗರಾಜ ನಿನಗೆ ವಂದನೆ **ರಾಗ: ಪಂತುವರಾಳಿ**

ತ್ಯಾಗರಾಜ ನಿನಗೆ ವಂದನೆ ತ್ಯಾಗರಾಜ ಯೋಗಿರಾಜ ಭಾಗ್ಯವಂತನಾದ ನಿನ್ನ ಪಾದಕೆನ್ನ ವಂದನೆ ತ್ಯಾಗರಾಜ ನಿನಗೆ ವಂದನೆ॥1॥ ಎಂದರೋ ಮಹಾನುಭಾವುಲು ಅಂದರಿಕಿ ವಂದನಮುಲು ಎಂದ ನಿನ್ನ ಪಾದಗಳಿಗೆ ನನ್ನ ವಂದನೆ ತ್ಯಾಗರಾಜ ನಿನಗೆ ವಂದನೆ॥2॥ ಕೋಟಿ ಕೋಟಿ ಜಪವ ಮಾಡಿ ರಾಮಭಕ್ತನಾದೆ ನೀನು। ರಾಮಭಕ್ತಿ ಸಾಮ್ರಾಜ್ಯಕೆ

ಸಾಟಿ ಇಲ್ಲ ಯಾರು ನಿನಗೆ ತ್ಯಾಗರಾಜ ನಿನಗೆ ವಂದನೆ।।3।। ರಾಗದ್ವೇಷ ಮೋಹವಾದಿ ಅರಿಷಡ್ವರ್ಗ ತ್ಯಾಗಮಾಡಿ ತ್ಯಾಗರಾಜನಾದೆ ನೀನು। ದಾರಿ ತೋರಿ ಕಾಯೋ ಎಮಗೆ ತ್ಯಾಗರಾಜ ನಿನಗೆ ವಂದನೆ।।4।। ಸಂಗೀತ ಜ್ಞಾನಮು ಭಕ್ತಿವಿನಾ ಎಂದು ಭಕ್ತಿ ಸನ್ಮಾರ್ಗ ತೋರಿ ರಾಜನಾದೆ ಸಂಗೀತಕೆ ತ್ಯಾಗರಾಜಾ ಯೋಗಿರಾಜ ನಿನಗೆ ವಂದನೆ।।5।। ದಚ್ಚಣ್ಣ ನಮಿಪ ನಿಮಗೆ ಇಂದು ತ್ರಿಕರಣ ಶುದ್ಧವಾಗಿ ಮುಕುತಿ ದಾರಿ ತೋರೋ ಎಂದು ಮುತ್ತಿನಾರುತೀಯನೆತ್ತಿ ತ್ಯಾಗರಾಜ ನಿನಗೆ ವಂದನೆ।।6।।

ಮಹಾಯೋಗಿ ತ್ಯಾಗರಾಜ **ರಾಗ: ನಾಟ**

ಮಹಾಯೋಗಿ ತ್ಯಾಗರಾಜ। ಮನೋನಿಗ್ರಹ ತೇಜ। ಮಧುರ ರಾಮನಾಮಾಮೃತ। ಪಾನ ಮಾನವ ಕುಲತೇಜ।। ಮಹಾಮುನಿ ನಾರದಗುರು। ದರ್ಶನ ಭಾಗ್ಯಪ್ರದಾ। ದಾನ ನಿದಾನ ಜ್ಞಾನ ಸಂಪದಾ। ಸ್ವರರಾಗ ಲಯ ಶುದ್ಧ। ಗಾನ ಜ್ಞಾನ ತ್ಯಾಗರಾಜ। ಸದಾಚಾರ ಸದಾನಂದ ಸದ್ಗುರು ತ್ಯಾಗರಾಜ। ಶರಣು ಶರಣು ಸಚ್ಚಿದಾನಂದ ಬ್ರಹ್ಮರೂಪ ದೇವಿ ಶಾರದ ದಾಸಿ ವಂದಿತ ತ್ಯಾಗರಾಜ।।

ರಾಮಬ್ರಹ್ಮ ಸುಪುತ್ರಾಯ (ಮಂಗಳ) **ರಾಗ: ರೇವತಿ**

ರಾಮಬ್ರಹ್ಮ ಸುಪುತ್ರಾಯ ರಾಮನಾಮ ಸುಖಾತ್ಮನೇ ರಾಮಚಂದ್ರ ಸ್ವರೂಪಾಯ ತ್ಯಾಗರಾಜಾಯ ಮಂಗಳಂ।।1।। ಗಾನಶಾಸ್ತ್ರ ಪ್ರವೀಣಾಯ ಕಲಿಕಲ್ಮಶ ನಾಶಿನೇ ಶರಣಾಗತ ಪೋಷಾಯ ಶ್ರೀ ತ್ಯಾಗರಾಜಾಯ ಮಂಗಳಂ।।2।।

59. ಶ್ರೀ ಪುರಂದರ ದಾಸರ ಆರಾಧನೆ

ಮನ್ಮನೋಭೀಷ್ಟವರದಂ (ಧ್ಯಾನಶ್ಲೋಕ)

ಮನ್ಮನೋಭೀಷ್ಟ ವರದಂ ಸರ್ವಾಭೀಷ್ಟ ಫಲಪ್ರದಂ। ಪುರಂಧರ ಗುರುಂವಂದೇ ದಾಸಶ್ರೇಷ್ಠಂ ದಯಾನಿಧಿಂ।।

ಎತ್ತ ಪೋದನಮ್ಮ ವಿಪ್ರನ

ಎತ್ತ ಪೋದನಮ್ಮ ವಿಪ್ರನ ಎಲ್ಲಿ ಹುಡುಕಲಮ್ಮ ।।ಪ।'। ಮುತ್ತಿನ ಮೂಗುತಿ ಮುಕ್ತಿಲಿ ಬ್ರಾಹ್ಮಣ ಇಗೋ ಈಗಲೆಂದು ಮಾಯವಾದನು।।ಅ.ಪ।। ಪಂಡರಪುರವಂತೆ ಅಲ್ಲಿ। ಪಾಂಡುರಂಗನಂತೆ ತಂಡತಂಡದಿ ಹರಿ ಕೀರ್ತನೆ ಮಾಡುತ। ಕಂದನ ಲಗ್ನಕೆ ಪೋಗೆನುತ।।1।। ಅಂದಿನ ದಿನದಲ್ಲಿ ನಾರಿ ಕಂಬಕೆ ಕಟ್ಟಿರಲು। ಮಂದರೋದ್ಧಾರನ ಮೊರೆಯಿಟ್ಟು ಕೂಗಲು। ಬಂಧನ ಬಿಡಿಸಿ ಮುಕುತಿಯ ಕೊಟ್ಟನು।।2।। ಪತ್ನಿ ಪತಿಯರು ಕೂಡಿ। ಬಹಳ ಅನ್ನದಾನ ಮಾಡಿ। ಕನಕಾಭರಣವನೀಯಲು ಪತಿವ್ರತೆ ಪುರಂದರ ವಿಠಲನ ಪಾದ ಸೇರಿದಳು।।3।।

ದಾಸರ ಆರಾಧನೆ ಇಂದು **ರಾಗ: ಮಲಹರಿ**

ದಾಸರ ಆರಾಧನೆ ಇಂದು ದಾಸರ ಆರಾಧನೆ। ವರದಪುರಂದರ ದಾಸ ಶ್ರೇಷ್ಠರಾದ।।ಪ।। ಸಂಗೀತ ಸಾಹಿತ್ಯ ಲೋಕವ ಬೆಳಗಿದ। ಸುಜ್ಞಾನಮೂರುತಿ ಪುರಂದರ ವಿಠಲನ।।1।। ನಾರದ ವರದನ ಪರಮ ಪುರುಷನ। ಗಾನವಿಶಾರದ ಪುರಂದರ ವಿಠಲನ।।2।। ನವಕೋಟಿ ತ್ಯಾಜ್ಯನ ತಂಬೂರಿ ಹಿಡಿದವನ। ವೈರಾಗ್ಯ ಮೂರುತಿ ಪುರಂದರ ವಿಠಲನ।।3।। ಮುಕ್ತಿಪಥವ ತೋರಿ ಮುಕ್ತಿಯನೀವ। ಮುಕ್ತೀಶ ಪುರಂದರ ವಿಠಲದಾಸನ।।4।। ಮಥುರಾಧಿಪನ ಕುಣಿಸಿ ತಣಿಸಿದವನ। ಚೈತನ್ಯದಾಸನ ಪುರಂದರ ವಿಠಲನ।।5।।

ಬಂದ ದುರಿತ ವಿನಾಶನಾ

ಬಂದ ದುರಿತ ವಿನಾಶನಾ। ಬಂದ ದುರಿತ ವಿನಾಶವಿಂದು ಪುರಂದರರನ। ವಂದಿಸಿ ಅತಿ ಭಕುತಿ ಯಿಂದ ಸ್ಮರಿಸುವ ಜನರ ಹಿಂದು ಮುಂದೇಳು ಕುಲಕೋಟಿಗಳ ಉದ್ಧಾರ। ಸಂದೇಹ ಸಲ್ಲಬಲ್ಲವರಿ ಗಿದು ಹರಿಯೇ।।ಅ।। ದ್ವಾರಕಪುರದಲ್ಲಿ ಶ್ರೀರಮಣ ಸಭೆಯೊಳಗೆ। ಚಾರುಮಂಡಿತನಾಗಿ ಕುಳಿತಿರಲು ಯದುಪರಿ। ವಾರ ಸುತ್ತಲು ಸುತ್ತಿ ಸ್ತುತಿಸುತಿರಲಾಗ ಗೋಪನಾರಿಯರ ಖೇದದಲ್ಲಿ।। ವಾರಕಾಂತೆಯರು ಮದವೇರಿ ನೃತ್ಯವಮಾಡೆ ಭೋರೆಂಬ ವಾದ್ಯತತಿ ಮೊರೆಯುತಿರೆ ದೇವತಾ। ವೀರರವ ಘೋರೆಂದು ಪೊಗಳಲಾ ನಭದಿಂದ ನಾರದರು ಧರೆಗಿಳಿದರು।।1।। ಬರುತಲೇ ವೈಕುಂಠಪುರಂದರಸ ಗೆರಗಿದರು। ಕರಗಳನು ಮುಗಿದು ಕಿನ್ನರಿ ಧರಿಸಿ ಹರುಷದಿಂ। ಸ್ವರವೆತ್ತಿ ರಾಗ ಮೂವತ್ತಾರರಿಂ ಯದುವರನ ಇದಿರಲಿ ನಿಂದು ಪಾಡಲಾಗ।। ಎರಡು ಕಂಗಳ ಧಾರೆ ಸುರೆಯೆ ಬಾಷ್ಪೋದಕವು। ಕೊರಳುಬ್ಬಿ ತೊದಲುನುಡಿ ಮೈಸ್ಮರಣೆ ಹಾರಿ ಸಿರಿ। ಹರಿಹರೀ ಹರಿಯೆಂದು ಹರಿದಾಡುತ್ತಿರಲಾಗ ಸುರರು ಶಿರವನೆ ತೂಗಲು।।2।। ಅಚ್ಚುತನು ಪರಮ ಭಾಗವತನ ಭಕುತಿಗೆ। ಮೆಚ್ಚಿದೆನು ವರವಧಿಕ ಬೇಡು ಎಂದೆನಲಾಗ। ಮುಚ್ಚಿದಂಬಕಗಳನು ತೆರೆದು ಗೀರ್ವಾಣಮುನಿ ಎಚ್ಚರಿಕೆಯನುಗೊಳ್ಳುತ।। ಅಚ್ಚಗನ್ನಿಕೆ ರಮಣ ದೀನಜನ ಮಂದಾರ। ನಿಚ್ಚಟೆನ್ನಯ ಕೂಡೆ ಬಿಡದಲಾಡೆನಲು ಕಲಿ। ಹೆಚ್ಚಿದ ಯುಗದಲ್ಲಿ ಸೊಲ್ಲಿಸುವೆ ಕೀರ್ತಿಗಳ ಬಿಚ್ಚಿ ತೋರಿಸುವೆನೆಂದ।।3।। ವರ ಪಡೆದು ನಾರದರು ಇರುತಿರಲು ಇತ್ತಲಾ। ಬರಲು ಕಲಿ ದೊರೆತನವು ಕಾಲಾಂತರಕ್ಕೆ ಶಿರಿ। ವರನ ದಯದಿಂದಲ್ಲಿ ಜನಿತರಾದರು ಪುರಂದರವೆಂಬ ನಗರಿಯಲ್ಲಿ।। ಚರಿಸಿದರು ಕೆಲವು ದಿನ ಸಂಸಾರ ವೃತ್ತಿಯಲಿ। ಜರಿದು ವೈರಾಗ್ಯವನು ತೊಟ್ಟು ದೃಢಮನಸ್ಸಿನಲಿ। ತರುಣಿ ಮಕ್ಕಳ ಸಹಿತ ಸೇರಿದರು ಕಿಷ್ಕಿಂಧಗಿರಿ ತುಂಗ ಪಂಪದಲ್ಲಿ।।4।। ವಾಸವನು ಮಾಡಿದರು ಪ್ರಹ್ಲಾದನವತಾರ। ವ್ಯಾಸ ರಾಯರ ಬಳಿ ಮುದ್ರೆ ಗುರುಮಂತ್ರ ಉಪ। ದೇಶವನೆಗೊಂಡು ವೈಷ್ಣವರಾಗಿ ಪುರಂದರ ದಾಸ ರೆಂಬೋ ಪೆಸರಿಲಿ।। ದೇಶವನೆ ತಿರುಗಿ ಪುಣ್ಯಕ್ಷೇತ್ರಗಳ ಮೆಟ್ಟಿ। ಲೇಸಾಗಿ ಅಲ್ಲಿದ್ದ ಮಹಿಮೆಗಳ ಪೇಳಿದು। ರಾಶಯನೆ ತೊರೆದು ವಿಠಲಸನ್ನಿಧಿಯಲ್ಲಿ ವಾಸವಾದರು ಧರ್ಮ ನಡತೆಯಲ್ಲಿ ಬಿಡದೆ।।5।। ಅಂದು ಭಕುತಗೆ ಇತ್ತ ಭಾಷೆ ತಪ್ಪಲಿ ಬಾರ। ದೆಂದು ಇಂದಿರಾಪತಿ ಯೊಲಿದವರ ಮುಂದೆ। ಒಂದರಘಳಿಗೆ ತೊಲಗದಲೆ ಕುಣಿದಾಡಿ ನಂದವನೆ ತೋರಿಕೊಳುತಾ।। ಮಂದಭಾಗ್ಯರಿಗೆ ಈ ಪರಿಯುಂಟೆ ಸೊಬಗು ನಾ। ರಂದರಿವರಾದ ಕಾರುಣದಿಂದ ಪರಬೊಮ್ಮ। ಬಂದು ಸಿಲುಕಿದ ನೆಂಬುದಿದಕೆ ಪ್ರಮಾಣವನು ಚಂದದಲಿ ತಿಳಿವುದು।।6।। ಉಪದಾನವನು ಬೇಡಿ ವಿಪ್ರರಿಗೆ ಮೃಷ್ಟಾನ್ನ ಅಪರಿಮಿತವಾಗಿ ಮಾಡಿಸುತಿರಲು ಇವರಲ್ಲಿ। ಗುಪಿತ ಚರಿತೆಯ ಕಂಡು ದೇವಮುನಿ ತಟನಿಗಳು ತಪ ಸಫಲವಾಯಿತೆಂದು।। ತಪನ ಕಾಲದಲೆದ್ದು ದಾಸರ ಸದನದಲಿ। ಉಪಚಾರ ವನೆಗೊಂಡು ಧನ್ಯರಾದೆವು ಎನುತ। ಸುಪಥವನು ಇಚ್ಛೈಸಿ ತಾರತಮ್ಯಗಳಿಂದ ಉಪಚರಿಸು ತಿರುತಿರ್ದರು।।7।। ಅವರೆಂದ ವಚನಗಳೆ ವೇದಾರ್ಥ ಗಳಾಗಿ। ಅವನಿಯೊಳು ತುಂಬಿದವು ಒಂದರೆ ಗ್ರಹಿಸಿದರೆ। ಭವರೋಗ ಭಸಿತಾಗಿ ಸುಜ್ಞಾನ ವೆಂಬಂಥ ಭುವನ ನಿಧಿಯೊಳಗೆಮುಳುಗಿ।। ಪವನ ಮತವಿಡಿದು ಪರಿಪೂರ್ಣ ಮಾಚಾರದಲಿ। ತವಕದಲಿ ಹರಿಯಪಾದಗಳನೇ ಕಂಡು। ಜವನ ಪುರದಾಟಿ ಜನ ತಪ ಸತ್ಯಲೋಕದಲಿ ನವರೂಪದಲಿ ಇಪ್ಪರೋ।।8।। ಏನೊ ಇದು ಎಂದು ದೂಷಿಸದಿರಿ ದಾಸರ। ಸೂನು ಪೇಳಿದನು ಗುರು ವ್ಯಾಸಮುನಿಗಳಿಗೆ। ಆ ನಾರದರೆ ಪುರಂದರದಾಸರೆಂಬಂಥ ಈ ನುಡಿಯು ಸಿದ್ಧಾಂತದ।। ಧ್ಯಾನದಲಿ ತಿಳಿದು ಸುಜ್ಞಾನಿಗಳ ಪದನಖ। ರೇಣೆನವನಾಗಿ ಬಿನ್ನೈಸಿದೆನು ಜ್ಞಾನಮಯ। ಆನಂದ ವಿಜಯವಿಠಲನ ಪಾದಾಂಬುಜವ ಕಾಣುವ ಜನರು ಲಾಲಿಸಿ।।9।।

ಬೇಸರದೆ ಭಜಿಸಿರೊ (ಶ್ರೀ ಪುರಂದರ ದಾಸರ ಚರಿತ್ರೆ)

ಬೇಸರದೆ ಭಜಿಸಿರೊ ಪುರಂದರದಾಸರಾಯರಾ।।ಪ।। ಶ್ರೀಶ ನಿಮ್ಮನುದಾಸೀನ ಮಾಡದೆ ಪೋಷಿಸುವ ಸಂತೋಷದಿಂದಲಿ।।ಅ.ಪ।। ಪುರಂದರಗಡದ ಒಳಗೆ ಹಿರಿಯ ಸಾಹುಕಾರನೆನಿಸಿ। ಪರಿಪರಿಯ ಸೌಖ್ಯಗಳ ಸುರಿಸುತ್ತಾ।

ಇರುತಿರಲು ನರಹರಿ। ಕರುಣದಿಂದಲಿ ಬ್ರಾಹ್ಮಣನಾಗುತ್ತಾ। ಯಾಚಕರ ತೆರದಲಿ। ಹರುಷದಿಂದಂಗಡಿಗೆ ಪೋಗುತ್ತ। ಯಜಮಾನ ಕಂಡು।। ಜರಿದು ಬ್ರಾಹ್ಮಣನ್ಹೊರಗೆ ಹಾಕಲು ಮರುದಿವಸ ಮತ್ತ್ಹೋಗಿ ನಿಂತ।।1।। ಬಾರಿಬಾರಿಗೆ ಮೋರೆಹತ್ತಿ ಮೇರೆ ಇಲ್ಲದೆ ಆರು ತಿಂಗಳು ಬೆನ್ನ ಬೀಳುತ್ತ। ನಾಯಕರು ಕಂಡಿವನಾರ ಬಿಡುತಾರೆಂದು ಬೈಯುತ್ತ। ಬೇಸತ್ತು ಒಂದು ಹೇರು ರೊಕ್ಕ ಮುಂದೆ ಸುರಿಯುತ್ತ। ಇದರೊಳಗೆ ಒಂದುಡ್ಡಾರಿಸಿಕೊಯೆಂದು ಪೇಳಲು। ನಾರಾಯಣ ಬಿಟ್ಹೋದ ನಗುತ।।2।। ಹಿತ್ತಿಲ ಬಾಗಿಲಿಗೆ ಹೋಗಿ ಮತ್ತೆ ಆತನ ಮಡದಿಯ ಬೆನ್ ಹತ್ತಿ ಬಿದ್ದನು (ವಿತ್ರ) ನತ್ತ ತಾರೆನುತ। ಮಗನ ಮುಂಜೆಂದತ್ತಧಿಕದಿಂ ಬಾಯಿದೆರೆಯುತ್ತ। ಆ ಪ್ರಾಣಿ ನುಡಿದಳು। ಯತ್ತಣದ್ರವ್ಯವು ತನಗೆನುತ। ನಿನ್ನ ಮೂಗಿನ। ಮುತ್ತಿನ ಮೂಗುತಿಯ ಕೊಡುಯೆನೆ ಉತ್ತಮಳು ತೆಗೆದಿತ್ತಳಾಗ।।3।। ಜೋಕೆ ಯಿಂದಾಭರಣ ತಂದು ಆಕೆ ಗಂಡನ ಕಣ್ಣೆದುರಿಗೆ ಹಾಕಿದನು। ತಾ ಪಾಕಿ ಕೊಡುಯೆನುತಾ। ಇದು ನಮ್ಮಾಕಿಯದು ಯಂದಾತ ನುಡಿಯುತ್ತ। ಅನ್ಯರದು ಇಂಥಾದ್ಯಾಕೆ ಇರಬಾರದೆಂದು ಯೋಚಿಸುತ ಬೆಲೆ-ಪೇಳುಯೆನಲು। ನಾಲ್ಕುನೂರು ಶುಭ್ರ ಕೊಡುಯಂದ್ಹಾಕಿ ಹೋದನು-ತಿರುಗಿ ಬಾರದೆ।।4।। ತಿರುಗಿ ಬ್ರಾಹ್ಮಣ ಬಾರದಿರಲು ಕರೆದು ತನ್ನ ಹೆಂಡತಿಯ ಬರಿಯ ನಾಸಿಕವನ್ನೇ ಕಂಡನು। ಮೂಗುತಿಯು ಎಲ್ಲಿದೆನೆಲು। ಮುರಿದಿಹುದು ಯಂದಾಕೆ ಪೇಳಿದಳು। ವಳಗ್ಹೋಗಿ ತರದಿರೆ। ಅರೆವೆ ನಿನ್ನ ಜೀವವೆಂದನು। ವಿಷಕೊಂಬೆನೆಂದು। ಕರದಿ ಬಟ್ಟಲ ಧರಿಸಲಾಕ್ಷಣ। ನರಹರಿ ಮೂಗುತಿಯಬಟ್ಟಲೊಳಗಿಟ್ಟ।।5।। ಹರುಷದಿಂದಾಭರಣ ತಂದು ಪುರುಷನ ಕೈಯೊಳಗೆ ಇಡಲು। ತರಿಸಿ ತನ್ನೊಳಗಿದ್ದ ಪೆಟ್ಟಿಗೆಯ। ಅದು ಕಾಣದಿರೆ। ಬೆರಗಾಗಿ ನೋಡಿದ ತನ್ನ ಮಡದಿಯಾ। ನಿಜ ಪೇಳುಯನೆ। ಅರಸಿಪೇಳ್ದಳು ಕೊಟ್ಟ ಸುದ್ದಿಯಾ ಅಭಿಮಾನಕಂಜಿ।। ಕರದಿ ಬಟ್ಟಲ ಧರಿಸಲಾಕ್ಷಣ ಸಿರಿರಮಣ ತಾ ಕೊಟ್ಟ ಖರಿಯಾ।।6।। ದೇವ ದೇವ ಯನ್ನ ಮನದ ಭಾವವನ್ನು ತಿಳಿಯೋದಕ್ಕೆ। ತಾವ್ಪೃದ್ಧ ಬ್ರಾಹ್ಮಣನಾಗಿ ಬಂದಿದ್ದ ಪರಿಪಕ್ವದಶೆ ಇ-। ನ್ನಾವಕಾಲಕ್ಕಾಗಬೇಕೆಂದ। ವೈರಾಗ್ಯ ಭಾವದಿ ಜೀವಿಸಿಕೊಂಡಿರುವುದೇ ಛಂದಾ। ಹಿಂಗೆಂದು ಮನೆಧನ।। ಕೋವಿದರ ಕರೆದಿತ್ತು ಹರುಷದಿ। ಕಾವನಯ್ಯನ ದಾಸನಾದಾ।।7।। ಲಕ್ಷ್ಮೀಪತಿಯ ಪಾದದಲ್ಲಿ ಲಕ್ಷ್ಯವಿಟ್ಟು ವ್ಯಾಸರಾಯರ। ಶಿಕ್ಷೆಯಿಂದಂಕಿತವ ಕೊಳ್ಳುತ್ತಿಪದ। ಕೊರತೆ ಐದು। ಲಕ್ಷಪದ ಸುಳಾದಿ ಪೇಳುತ್ತ। ಪ್ರತಿ ದಿವಸದಲಿ। ಪಕ್ಷಿವಾಹನ ನಾಟ್ಯವಾಡುತ್ತಾ। ಅಪರೋಕ್ಷ ಪುಟ್ಟಲು। ಮೋಕ್ಷಸ್ಥಾನಕೆ ಕರೆದೊಯ್ದು ಅಧೋಕ್ಷಜ ಸಂರಕ್ಷಿಸಿದ।।8।। ಘೋರನರಕದಲಿಬಿದ್ದ ಅಪಾರ ಜನರು। ಚೀರುತಿರಲುದ್ಧಾರ ಮಾಡಿದ ನಾರದರಿವರು। ಅವತಾರ ಮಾಡಿ। ಮತ್ತೆ ಧಾರುಣಿಯೊಳು ಬಂದರು ನಾರಾಯಣನೆ। ಸರ್ವೋತ್ತಮಯೆಂದು ಸಾರಿದರು। ಹೀಗೆಂದು ತಿಳಿಯಲು। ಮಾರಜನಕ ವಿಜಯವಿಠಲ ಆರಿಗಾದರು ಒಲಿವ ಕಾಣಿರೋ।।9।।

ದಾಸರೆಂದರೆ ಪುರಂದರ ದಾಸರಯ್ಯ ರಾಗ: ಕಾಂಭೋದಿ-ಝಂಪೆತಾಳ

ದಾಸರೆಂದರೆ ಪುರಂದರ ದಾಸರಯ್ಯ। ಕಾಸುವೀಸವ ಬೇಡದಂಥ ವಾಸುದೇವ ಕೃಷ್ಣನ್ನ ಸೂಸಿ ಪೂಜಿಸುವಂಥಾ।।ಅ.ಪ।। ಗ್ರಾಸಕಿಲ್ಲದೆ ಪೋಗಿ ಪರರ ಮನೆಗಳ ಪೊಕ್ಕು। ದಾಸನೆಂದೂ ತುಲಸಿಮಾಲೆ ಧರಿಸೀ।। ಬ್ಯಾಸರಿಲ್ಲದೆ ಅವರ ಕಾಡಿ ಬೇಡಿ ಬಳಲಿಸುತ। ಕಾಸುಗಳಿಸುವ ಪುರುಷ ಹರಿದಾಸನೇ।।1।। ಡಂಭಕದಿ ಹರಿಸ್ಮರಣೆ ಮಾಡಿ ಜನರಾ ಮುಂದೆ। ಸಂಭ್ರಮದಿ ತಾನುಂಬ ಊಟ ಬಯಸಿ। ಅಂಬುಜೋದ್ಭವಪಿತನ ಆಗಮಗಳರಿಯದೇ। ತಂಬೂರಿ ಮೀಟಲವ ಹರಿದಾಸನೆ।।2।। ಯಾಯಿವಾರವಮಾಡಿ ವಿಪ್ರರಿಗೆ ಮೃಷ್ಟಾನ್ನ। ಪ್ರೀಯದಲಿ ತಾನೊಂದು ಕೊಡದ ಲೋಭಿ। ಮಾಯಸಂಸಾರದಲಿ ಮಮತೆ ಹೆಚ್ಚಾಗಿಟ್ಟು। ಗಾಯನವ ಮಾಡಲವ ಹರಿದಾಸನೇ।।3।। ಪಾಠಕನ ತೆರೆನಂತೆ ಪದಗಳನು ತಾ ಪಾಡಿ। ಕೂಟಜನರಾ ಮನವ ಸಂತೋಷಪಡಿಸಿ।। ಗೂಟ ನಾಮಗಳಿಟ್ಟು ಕೋಡ್ಡಿರಿಯ ತಾನೆನುತ। ಕೂಟಕವ ಮಾಡಲವ ಹರಿದಾಸನೇ।।4।। ನೀತಿಯೆಲ್ಲವನರಿದು ನಿಗಮ ವೇದ್ಯನ ನಿತ್ಯ। ವಾತಸುತನಲ್ಲಿಹನ ವರ್ಣಿಸುತಲಿ। ಗೀತ ನರ್ತನದಿಂದ ಶ್ರೀ ಕೃಷ್ಣನ್ನ ಪೂಜಿಸುವ ಪೂತಾತ್ಮ ಪುರಂದರ ದಾಸರಿವರಯ್ಯ।।5।।

ದಾಸಗುರು ದಾಸಗುರು — ರಾಗ: ರಾಮಪ್ರಿಯ

ದಾಸಗುರು ದಾಸಗುರು ವಾಸವನಾಮಕ ದಾಸಗುರು॥ಪ॥ ಭೂಸುರರಿಗೆ ಧನರಾಶಿ ಸಮರ್ಪಿಸಿ ವ್ಯಾಸರಾಯರುಪದೇಶಗೊಂಡ ಹರಿ॥ಅ.ಪ॥ ಜಲಜಭವನ ಪಿತನಾಜ್ಞೆಯಲಿ ಈ ಕಲಿಯುಗದಲಿ ಜನ್ಮ ತಾಳುತಲಿ। ಅಲವ ಬೋಧರಮತ ನೆಲೆಯನು ಸುಲಭದಿ ತಿಳಿಗನ್ನಡದಲಿ ತಿಳುಹಿಸಿ ಸಲಹಿದ॥1॥ ಪವನದೇವನ ಒಲಿಸುತಲಿ ಮಾಧವನ ಸ್ತವಿಸಿ ಸಲೆ ಕುಣಿಯುತಲೀ। ಕವನದಿ ಭಕುತಿಯ ನವವಿಧಮಾರ್ಗವ ಅವನಿಗೆ ಬೀರಿದ ದಿವಿಜಮೌನಿ ವರ॥12॥ ಕಾಮಿತ ಫಲಗಳಗರೆಯುತಲೀ ಬಲು ಪಾಮರ ಜನರನು ಸಲಹುತಲೀ। ಶ್ರೀ ಮನೋವಲ್ಲಭ ಶ್ಯಾಮಸುಂದರನ ನಾಮಾಮೃತವನು ಪ್ರೇಮದಿಂದುಣಿಸಿದ॥3॥

ತಂದೆ ಪುರಂದರದಾಸರ ಸ್ಮರಿಸುವೆ — ರಾಗ: ಶಂಕರಾಭರಣ–ಅಟ್ಟತಾಳ

ತಂದೆ ಪುರಂದರದಾಸರ ಸ್ಮರಿಸುವೆ ಎನ್ನ। ಮಂದಮತಿಗಳೆದು ಹರಿಭಟನೆನಿಸುವೆ॥ಪ॥ ಗುರುವ್ಯಾಸರಾಜರ ಚರಣಾಬ್ಜಷಟ್ ಚರಣ। ವಿರತಿ ಭಕುತಿ ಜ್ಞಾನಾರ್ಣವನ। ವರ ಉಪನಿಷದ್ವಾರಿನಿಧಿಗೆ ತಿಮಿಂಗಿಲನಹನ। ಧರೆಯ ಕವಿಕುಲ ಶಿಖಾಮಣಿ ಎನಿಪನ॥1॥ ದಿನದಿನ ದ್ರವ್ಯಾರ್ಥಲಾಭದಲಿ ತುಷ್ಟನ। ಕನಕ ಲೋಷ್ಠ ಸಮಾನ ನಿರೀಕ್ಷಿಸುವನ। ಘನಸಿದ್ಧಿಗಳು ತಾವು ಬರಲೊಡಂಬಡದೆ ಹರಿ। ಗುಣಕೀರ್ತಿಯಲ್ಲಿ ಪರವಶದಲ್ಲಿಹನ॥2॥ ಭವಜಲ ಗೋಷ್ಪಾದಕ್ಕೆ ಸರಿದಾಟಿ ಕಾಮಕ್ರೋಧವ। ಮೆಟ್ಟಿ ಭಕ್ತಿ ಸುಧೆಯುಂಡು ತೇಗಿ। ಭುವಿಯೊಳು ನಿಜಕೀರ್ತಿ ಹರಹಿ ಪವನಮತದವರೆನಿಪ ದಾಸರಿಗೆ ತವರೂಪ ತೋರಿದವನ॥3॥ ಕವನೋಕ್ತಿ ಮಳೆಗರೆದು ಹರಿದಾಸ। ಪವರ್ಗಗಳಿಗೆ ವಿರಳಾನಂದ ವಿತ್ತರ್ಥಿಸುವರ।ನವ ಭಕುತಿ ಮನಗಂಡು ಸವೆಯದಾನಂದಪುರ। ಪಥವನು ತೋರಿಸಿದಂಥ ಬಹು ಕೃಪಾಕರನ॥4॥ ಗೀತತಾಯಿ ಸುಳಾದ್ಯುಗಾಭೋಗ ಪದಪದ್ಯ। ವ್ರಾತ ಪ್ರಬಂಧ ರಚಿಸಿ ವಿಠಲನ। ಪ್ರೀತಿ ಬಡಿಸಿಪ್ರತ್ಯಕ್ಷ ಕಂಡು ನಲಿವ ವೈಷ್ಣವಾಗ್ರ್ರನಾಥ ಪ್ರಸನ್ನ ವೆಂಕಟಕೃಷ್ಣ ಪ್ರಿಯನ॥5॥

ಪುರಂದರ ರಾಯರ ಪುಣ್ಯ

ಪುರಂದರ ರಾಯರ ಪುಣ್ಯ ನಾಮ ಸ್ಮರಣೆಯನ್ನು ಜಪಿಸಿರೋ ಸುಜನರು॥ಪ॥ ಅನಂತ ಜನುಮದ ಅಘವನ್ನು ಕಳೆದ ಮ್ಯಾಲೆ। ಪುನರಾವರ್ತಿ ಬಾರದ ಲೋಕಪೊಂದಿದರು॥ಅ.ಪ॥ ಆಗಮಾರ್ಥಗಳಿಗನುವಾಗಿ ಸಾರವ ತೆಗೆದು। ರಾಗಪದಕಾವ್ಯದಿಂದ ಶ್ರೀಗುರುಮಧ್ವ ಮುನಿ ಮತವ ಪೊಂದಿ ಬಲು ಭಾಗವತ ಧರ್ಮವಹಿಸಿ ಸಾಗರಶಯನನ ಗುಣವ ಕೊಂಡಾಡಿ। ಜಗದೊಳು ಯೋಗ ಪ್ರವಾಹದಿಂದ ಮೆರೆದ ಸಾಗರವು ದಕ್ಷಿಣೋತ್ತರ ಪೂರ್ವಪಶ್ಚಿಮ। ಯೋಗದಲಿ ಚರಿಸಿ ಒಳಗಾಗದೆ ಕಲಿಯ ಗೆದ್ದ॥1॥ ನೋಡಿದ ಮಾತ್ರಿವರ ನಯನಗಳ ದೋಷವು। ಓಡುವುವು ಲೇಶವಿರದೆ ಆಡಿದಾಮಾತುರದಿ ಇವರ ವಾರ್ತೆಯವದನ। ಬೇಡದಿನ್ನೆಂದು ವಿಷಯ ಮಾಡಿದಾಮಾತ್ರಿವರ ಆರ್ದನಿಯ ಕರಗಳು ಮಾಡವು ಅನ್ಯಕರ್ಮ ಕೂಡಿ ಮನಬೆರೆದು ಜಪಿಸುತ ನಿತ್ಯ ಧ್ಯಾನವನು ಮಾಡಿದವರ ಪುಣ್ಯಕೀಡು ನಾ ಕಾಣೆ॥2॥ ಪು ಎಂದುಚ್ಚರಿಸೆ ಪುಣ್ಯ ಕರ್ಮಕೆ ಧರ್ಮ ಸಹಾಯವಾಗಿ ಒದಗುವುವು ರಂ ಎನೆ ಜ್ಞಾನಾಖ್ಯಾವೆಂಬ ರತುನಾರ್ಥಗಳು ಆಯಾಸವಿಲ್ಲದೆ ಬಪ್ಪುವುದ ಎಂದುಚ್ಚರಿಸಿ ಸರ್ವಕಾಮಗಳನ್ನು ದದಾತಿ ಎಂದಾಡುವ ರ ಎನ್ನ ರಾಜ ಗೋಪಾಲ ವಿಠ್ಠಲ ತನ್ನ ಸಾಯುಜ್ಯವಿತ್ತು ಸಲಹುವನು ಸರ್ವದಾ॥3॥

ರಂಗವಿಠಲನ ಪೊಗಳಿ ಪಾಡಿಹ — ರಾಗ: ಜೋನ್‌ಪುರಿ

ರಂಗವಿಠಲನ ಪೊಗಳಿ ಪಾಡಿಹ। ಪುರಂದರದಾಸರಿಗೆ ವಂದಿಸು ಮನವೇ। ಪರಮ ಸುಲಭದಿ ಪಾರಮಾರ್ಥ ದಾರಿಯ। ಪಾಮರ ಜನರಿಗೆ ಪ್ರೇಮದಿ ತೋರಿಹ॥1॥ ಪಂಡರಿ ರಂಗನ ಮಹಾ ಮಹಿಮೆಗಳ। ಮನದೊಳು ಅರಿಯುತ ಮಹಾಜ್ಞಾನಿಯಾಗಿ। ಪುರಂದರ ವಿಠಲನ ದಾಸಾನುದಾಸರಾಗಿ। ಇಳೆಯೊಳು ಪುರಂದರ ದಾಸರೆಂದೆಣಿಸಿ॥2॥

ಪುರಂದರ ದಾಸರಂತೆ ದೃಢಭಕ್ತಿ ಭಾವದೊಳು। ಸತತವು ಹರಿಹರ ನಾಮವ ಪಾಡುತ। ಶಾರದಾ ದಾಸಿ ವಂದಿತ ಮಹಾತ್ಮ। ಪುರಂದರ ದಾಸರ ನಮಿಸಿ ನೀ ಧನ್ಯಳಾಗು॥3॥

ಅನಂತಕೋಟಿ ಬ್ರಹ್ಮಾಂಡನಾಯಕ (ಪುರಂದರ ಗದ್ಯ) ರಾಗ: ಆನಂದಭೈರವಿ

ಅನಂತಕೋಟಿ ಬ್ರಹ್ಮಾಂಡನಾಯಕ। ರಮಾ ಬ್ರಹ್ಮ ರುದ್ರೇಂದ್ರಾದಿವಂದ್ಯ, ಭಕ್ತವತ್ಸಲ। ಭವರೋಗವೈದ್ಯ। ಶರಣಾಗತ ವಜ್ರಪಂಜರ। ಆಪದ್ಬಾಂಧವ। ಅನಾಥಬಂಧೋ। ಅನಿಮಿತ್ತಬಂಧೋ। ಪತಿತಪಾವನ ಮಹಾ ರೋಗ ನಿವಾರಣಾ॥10॥ ಮಹಾದುರಿತ ನಿವಾರಣಾ। ಮಹಾಬಂಧ ವಿಮೋಚನಾ। ಭಯಕೃದ್ಭಯವಿನಾಶನಾ, ಕೃಪಾವಾರಿಧಿ, ದೇವ ದೇವೋತ್ತಮ, ದೇವ ಶಿಖಾಮಣಿ, ಕಪಟನಾಟಕ ಸೂತ್ರಧಾರ, ನಿತ್ಯರೊಳು ನಿತ್ಯ, ಸತ್ಯ ಸಂಕಲ್ಪ॥20॥ ಮುಕ್ತಾ ಮುಕ್ತ ನಿಯಾಮಕ, ಮೋಕ್ಷಧರ,ಸುವೈಕುಂಠಪತಿ, ವೈಕುಂಠವಿಹಾರಿ, ತ್ರಿಧಾಮಾ, ತ್ರಿಗುಣವರ್ಜಿತ, ಜಗಜ್ಜನ್ಮಾದಿಕಾರಣ ಜಗತ್ಪತೇ, ಜಗದತ್ಯಂತ ಭಿನ್ನ, ಜಗದೀಶ॥30॥ ಜಗದುದ್ಧಾರ, ಜಗತ್ಸ್ವಾಮೀ, ಜಗದ್ವಿಲಕ್ಷಣ, ಜಗನ್ನಾಥ, ವಿಶ್ವಕುಟುಂಬಿ, ವಿರಾಟಮೂರ್ತಿ, ಹೇ ಮಂಗಳಾಂಗ ಹೇ ಶುಭಾಂಗ, ಪರಮ ಮಂಗಳಮೂರ್ತಿ, ಕೋಮಲಾಂಗ ॥40॥ ನೀಲಮೇಘಶ್ಯಾಮ, ಇಂದುವದನ, ಬಹುಸುಂದರ, ಇಂದಿರಾ ವಂದಿತ ಚರಣ, ವೃಕೋದರ ವಂದ್ಯ, ಕೇಶವಾದಿರೂಪ, ಅಜಾದಿರೂಪ, ವಿಶ್ವಾದಿರೂಪ, ಆತ್ಮಾದಿರೂಪ, ಅನಿರುದ್ಧಾದಿ ರೂಪ॥50॥ ಅನ್ನಮಯಾದಿ ರೂಪ, ಅನೇಕಮಂತ್ರ, ಪ್ರತಿಪಾದ್ಯ, ಸರ್ವಸಾರಭೋಕ್ತ, ಅಷ್ಟೈಶ್ವರ್ಯ ಪ್ರದಾತ, ಓಂಕಾರ ಶಬ್ದವಾಚ್ಯ, ವಿಶಿಷ್ಟ ತಾರತಮ್ಯ ವಾಚ್ಯ, ಅನಂತಾ ನಂತ ಶಬ್ದವಾಚ್ಯ, ಅಣುಮಹದ್ರೂಪ, ಶಂಖಚಕ್ರ ಪೀತಾಂಬರಧಾರಿ॥60॥ ಕಮಲಾಕ್ಷ, ಕಮಲನಾಭ, ವೈಜಯಂತೀ ವನಮಾಲಾ ಶೋಭಿತ, ಕೌಸ್ತುಭ ಭೂಷಿತ, ಸುವರ್ಣವರ್ಣ, ನವರತ್ನ ಕುಂಡಲಧಾರಿ, ಕಸ್ತೂರಿ ಶ್ರೀಗಂಧ ಲೇಪನ, ಗರುಡಾರೂಢ ಶೋಭಿತ, ಕಾಮಧೇನು, ಶ್ರೀವತ್ಸ ಲಾಂಛನ॥70॥ ಕಲ್ಪವೃಕ್ಷ, ಚಿಂತಾಮಣಿ, ಕ್ಷೀರಾಬ್ಧಿಶಾಯಿ, ಶೇಷಶಾಯಿ, ವಟಪತ್ರಶಾಯಿ, ಖಗವಾಹನ, ದೇಶಕಾಲ ಗುಣಾತೀತ, ಅನಂತಬ್ರಹ್ಮ, ಅನಂತಶಕ್ತಿ, ಅನಂತಮೂರ್ತಿ॥80॥ ಅನಂತಕೀರ್ತಿ, ಪುರಾಣ ಪುರುಷೋತ್ತಮ, ಅಕ್ರೂರವರದ, ಅಂಬರೀಷವರದ, ನಾರದವರದ, ಪ್ರಹ್ಲಾದವರದ, ಗಜೇಂದ್ರವರದ, ಮುಚುಕುಂದವರದ, ಧ್ರುವವರದ, ವಿಭೀಷಣವರದ॥90 ಕುಲಾಲ ಭೀಮ, ಸಂರಕ್ಷಕ, ಪುಂಡರೀಕವರದ, ಪರಾಶರವರದ, ಪಾರ್ಥಸಾರಥಿ, ಪಾಪವಿದೂರ, ಅರಿಜನ ಪ್ರಚಂಡ, ಚಾಣೂರಮಲ್ಲ, ಮುಷ್ಟಿಕಾಸುರ ಮರ್ಧನ, ಕಾಳಿಂದೀ ಕೂಲವನ ಕಂಠೀರವ, ಮದನಗೋಪಾಲ, ವೇಣುಗೋಪಾಲ ॥100॥ ವೇಣುನಾದಪ್ರಿಯ, ಷೋಡಶ ಸಹಸ್ರ ಗೋಪಿಕಾ ಪ್ರೀತಿವಿಲಾಸ, ಅಹಲ್ಯಾ ಶಾಪವಿಮೋಚನ, ದ್ರೌಪದೀ ಅಭಿಮಾನ ರಕ್ಷಕ, ದುಷ್ಟಜನಮರ್ದನ, ಶಿಷ್ಟಜನಪರಿಪಾಲನ, ಮುಕುಂದ, ಮುರಾರೇ ಕಂಸಾರೇ, ಅಸುರಾರೆ ॥110॥ ದೈತ್ಯಕುಲ ಸಂಹಾರ, ಕ್ಷಾತ್ರಕುಲಾಂತಕ, ಸೋಮಕಾಸುರಾಂತಕ, ಹಿರಣ್ಯಾಕ್ಷಹಿರಣ್ಯಕಶಿಪು ಸಂಹಾರ, ರಾವಣ ಕುಂಭಕರ್ಣ ಮರ್ದನ, ಶಿಶುಪಾಲ ದಂತವಕ್ತ್ರ ಶಿರಚ್ಛೇದನ, ರಘು ಕುಲೋದ್ಭವ, ದಶರಥ ಕೌಸಲ್ಯಾನಂದನ, ಸಿಂಧುರವರದ, ಸೀತಾಪತೇ ಶ್ರೀರಾಮಚಂದ್ರ॥120॥ ಯದುಕುಲೋತ್ಪನ್ನ, ಯದುಕುಲೋದ್ಧಾರಿ, ಯದುಕುಲ ತಿಲಕ, ಯದುಕುಲ ಶ್ರೇಷ್ಠ, ವಸುದೇವ ದೇವಕಿನಂದನ, ಯಶೋದಾಕಂದ, ವೃಂದಾವನವಾಸಿ, ಗೋಪಕುಮಾರ, ಗೋಕುಲ ದ್ವಾರಕಾ ವಾಸ, ಗೋವರ್ಧನೋದ್ಧಾರಿ॥130॥ ಕಾಲೀಯಮರ್ದನ, ಪಾಂಡವಬಂಧೋ, ಪಾಂಡವ ಪರಿಪಾಲ, ಪಾಂಡವ ಪ್ರಿಯ, ಸುಧಾಮಸಖ, ರುಕ್ಮಿಣೀವಲ್ಲಭ, ಸತ್ಯಭಾಮಾಪ್ರಿಯ, ಗೋಪೀಜನಜಾರ॥140॥ ನವನೀತಚೋರ, ಗೋಪಾಲಕೃಷ್ಣ, ಗಂಗಾಜನಕ, ಪ್ರಯಾಗಮಾಧವ, ಕಾಶೀಬಿಂದು ಮಾಧವ, ಪಂಪಾಪತೀ ಗುಲುಗಂಜಿ ಮಾಧವ, ರಾಮೇಶ್ವರ ಸೇತುಮಾಧವ, ಬದರೀನಾರಾಯಣ, ಶ್ರೀ ರಂಗಾನಾಥ, ವಡ್ಡಿ ಜಗನ್ನಾಥ॥150॥ ಉಡುಪಿ ಶ್ರೀಕೃಷ್ಣ, ಮೇಲುಕೋಟೆಯ ಚೆಲುವರಾಯ, ಬೇಲೂರ ಚೆನ್ನಿಗರಾಯ, ಅಹೋಬಲ ನರಸಿಂಹ, ಪಾಂಡುರಂಗ ವಿಠ್ಠಲ, ಶ್ರೀಶೈಲವಾಸ, ಅರುಣಾಚಲನಿಲಯ, ವೃಷಭಾಚಲವಿಹಾರಿ, ಅನಂತಶಯನ, ದರ್ಭಶಯನ॥160॥ ಕಪಿಲ, ಹಯಗ್ರೀವ, ದತ್ತಾತ್ರೇಯ, ಶಿಂಶುಮಾರ, ಧನ್ವಂತರಿ, ಮಮಸ್ವಾಮಿ, ಸರ್ವಸ್ವಾಮಿ, ಜಗದಂತರ್ಯಾಮಿ, ಜಗದೀಶ,

ಪ್ರಾಣೇಶ॥170॥ ದ್ವಿಜಫಣಿಪ ಮೃಡೇಶ, ಶ್ರೀರಮಣ, ಭೂರಮಣ, ದುರ್ಗಾರಮಣ, ಶ್ರೀಲಕ್ಷ್ಮೀವೆಂಕಟರಮಣ, ಭಾರತೀರಮಣ, ಮುಖ್ಯಪ್ರಾಣಾಂತರ್ಗತ ಸೀತಾಪತೇ ಶ್ರೀರಾಮ ಚಂದ್ರ, ಸಾಕ್ಷಾತ್ ಮನ್ಮಥ ಹರಿವಿಠ್ಠಲ, ಪುಂಡರೀಕವರದ, ಪಾಂಡುರಂಗವಿಠ್ಠಲ॥180॥ ಪುರಂದರವಿಠ್ಠಲ॥

ತೆರಳಿದರು ಪುರಂದರದಾಸರಾಯರು

ತೆರಳಿದರು ಪುರಂದರದಾಸರಾಯರು॥ಪ॥ ತೆರಳಿದರು ಭೇರಿದುಂದುಭಿ ಮೊರೆಯುತಲಿರೆ। ಪುರಂರದಾಸರು ನಿಜ ವೈಕುಂಠಕ್ಕೆ॥ಅ.ಪ.॥ ವಿದ್ಯಾನಗರದಿ ವಿಠಲ ಸನ್ನಿಧಿಯಲ್ಲಿ। ಪೊದ್ದಿದ್ದ ಭಾಗವತರ ಸಮ್ಮೇಳದಿ॥1॥ ವೈಕುಂಠಕೆ ಭೂಮಿಗೆ ಹರಿನಾಮದ। ಸೋಪಾನಮಾಡಿ ಭಕ್ತರಿಗೆ ಮಾರ್ಗವ ತೋರಿ॥2॥ ಅಚ್ಚಗನ್ನಿಕೆಯರಾರತಿಗಳನೆತ್ತಲು। ಅಚ್ಯುತನಿದ್ದೆಡೆಗತಿ ಸಂಭ್ರಮದಿಂದ॥3॥ ರಕ್ತಾಕ್ಷಿ ಸಂವತ್ಸರ ಪುಷ್ಯ ಬಹಳ। ದತಿಶಯದಮಾವಾಸ್ಯ ಮಂದವಾರ॥4॥ ಗುರುಮದ್ವಪತಿ ವಿಠಲನ ಧರೆಗೆ ತೋರಿ। ಪುರಂದರದಾಸರು ನಿಜ ವೈಕುಂಠಕ್ಕೆ॥5॥

ಶ್ರೀನಿವಾಸನ ಮುದದಿ ವಂದಿಸಿ (ಕಥೆ)

ಶ್ರೀನಿವಾಸನ ಮುದದಿ ವಂದಿಸಿ। ದಾನ ಶಬ್ದವನರಿಯದ ಮಹದಾನಿಯೆನಿಸಿದವ। ಶ್ರೀಪುರಂದರ ವಿಠ್ಠಲ ದಾಸರಾಕಥೆಯ। ಗಾನ ಗೈಯಲು ಕರುಣೆ ತೋರಲಿ। ವಾಣಿ ರಮೆಯರು। ಗಿರಿಜೆ ಗಣಪರು। ಸಾನುರಾಗದಿ ಹರಸಿ। ಹೈಮೆಯ ಎನುತ ಬೇಡುವೆನು॥1॥ ಭಾರತದಿ ಪಶ್ಚಿಮ ಸಮುದ್ರದ ತೀರದಲಿ। ಮಹರಾಷ್ಟ್ರ ಪ್ರಾಂತದಿ। ತೋರುತಿಹುದು ಪುರಂದರಗಢವು। ಪುಣೆಯ ಬಳಿಯಲ್ಲಿ। ಮೇರೆ ಮೀರಿದ ವಿಜಯ ನಗರವು। ಸಾರ ಮತಿಗಳು ವ್ಯಾಸರಾಜರು। ಭಾರಿ ಖ್ಯಾತಿಯ ಕೃಷ್ಣರಾಯರು। ಮೆರೆದ ಕಾಲವದು॥2॥ ಮಾಟಗಾರನು ದೇವನು। ಜಗನ್ನಾಟಕದ ಸೂತ್ರವನು ಪಿಡಿದಿಹ। ಹಾಟಕಾಂಬರ ಶ್ರೀನಿವಾಸನ। ದಯದಿ ಭುವಿಯಲ್ಲಿ। ಕೋಟಿಗೀಶ್ವರ ತಾತ ವರದಗೆ। ಸಾಟಿಯಿಲ್ಲದ ತಾಯಿ ರಾಧೆಗೆ। ಕೋಟಿಗೊಬ್ಬನು ಜನಿಸೆ। ನಾರದ ಶೀನನಾಮದಲಿ॥3॥ ಪಾಕಶಾಸನ ಪುರದಿ। ಶೀನನ ನೇಕವಿದ್ಯೆಯ ಕಲಿತು। ರತ್ನ ವ್ಯಾಕುಳದೆ ನವಕೋಟಿ ನಾರಾಯಣನು ತಾನಾಗಿ। ಆ ಕುಬೇರನ ಸತಿ ಸರಸ್ವತಿಗೇಕಪುತ್ರಿಯು। ಸುತರು ನಾಲ್ವರು। ಲೋಕದೊಡಯನ ದಾಸರಾಗಲಿಕೆಂದೆ ಜನಿಸಿಹರು॥4॥ ಚಣಚಣಕು ಧನ ಸಂಗ್ರಹಿಸಿ। ಸದ್ಗುಣೆ ಸರಸ್ವತಿ ಗಕ್ಕಿ ಬೇಳೆಯ। ನೆಣಿಸಿ ಕೊಡುವನು ಶ್ರೀನಿವಾಸನು। ಪರಮ ಲೋಭಿಯವ। ಫಣಿಶಯನ ಹರಿ ಪರಿಕಿಸಲಿವನ। ಹಣವ ಬೇಡಲು ಬಂದ ತಾ ಬ್ರಾಹ್ಮಣನ ರೂಪದಿ। ಮಗನ ಮುಂಜಿಯ ನೆಪವನೊಡ್ಡುತಲಿ॥5॥ ಕಡು ಜಿಪುಣ ಶೀನಪ್ಪ ನಾಯಕ। ಕೊಡ ಕಿಲುಬು ಕಾಸನವ ವಿಪ್ರಗೆ। ಬಿಡದೆ ಕಾಡಿದ ನಾರುತಿಂಗಳು ನಾಯಕನ। ಹರಿಯು ಕಡೆಗು ಕೊಡದಿರೆ। ಭೂಸುರನು ಸತಿಯೆಡೆಗೆ ನಡೆದನು। ಹಣವು ಸಿಗದಿರೆ। ಪಡೆದ ಮೂಗುತಿ ದಾನವಾಗಿಯೆ। ನಡೆದ ಶೀನನೆಡೆ॥6॥ ನೋಡುನಾಯಕ ಮೂಗುತಿಯನಿದ। ನೀಡೆನಗೆ ಹಣ। ಕೊಂಡು ನೀನದ। ಮಾಡುವೆನು ಮುಂಜಿಯನು ಮಗನಿಗೆಯೆಂದ ಭೂಸುರನು। ನೋಡಿ ಮೂಗುತಿ ತಿರುಗಿ ತಿರುಗಿಸೆ। ಮೂಡೆ ಮನದೊಳು ಸಂಶಯವೂ। ಮನೆ ಗೋಡಿ ನೋಡಿದ ಸತಿಯ ಮೂಗನು ಬಲಿಯೆ ಶಂಕೆಯದು॥7॥ ಅತಿಶಯದ ಕೋಪದಲಿ ಗುಡುಗಿದ। ಸತಿಯೆ ಮೂಗುತಿಯೇಕೆ ತೆಗೆದಿಹೆ। ಪತಿಯ ಮಾತಿಗೆ ನಡುಗಿ ನಡೆದಳು ದೇವರಾಮನೆಗೆ। ಪತಿಯು ದಂಡಿಪ ದಿಟವು। ಶ್ರೀಹರಿ ಗತಿಯ ಕಾಣೆನುಯೆನುತ। ವಿಷವನು ಸತಿಯು ಪಾನವ ಮಾಡತೊಡಗಲು ಶಬ್ದ ಠಣ್ಣೆನ್ನೆ॥8॥ ಸದ್ದ ಕೇಳುತ ವಿಸ್ಮಯದಲವಳೆದ್ದು ನೋಡುತ। ವಿಷದ ಪಾತ್ರೆಲಿ ಬಿದ್ದ ಮೂಗುತಿ ಕಾಂತಿ ಕಾಣುತ। ಸತಿಸರಸ್ವತಿಯು ಮುದ್ದು ಕೃಷ್ಣನ ಮದನೆ ನಮಿಸುತ। ಹದ್ದು ಕಣ್ಣಿನ ಪತಿಗೆ। ಮುಕುರವ ಸದ್ದು ಮಾಡದೆ ಕರದಲಿಡೆ। ಬೆರಗಾದನಾ ಶೀನ ಜಿಪುಣ॥9॥ ಏನು ಸೋಜಿಗ ವಿದುವೆ। ನತ್ತಿದು ನಾನೆಯಂಗಡಿಯಲ್ಲಿ ಬೀಗವ ವೈನವಾಗಿಯೇ ಜಡಿದು। ಜೋಕೆಯಲ್ಲಿಟ್ಟು ಬಂದಿಹೆನು। ಏನೆಯಾಗಲಿ ಹೋಗಿ ಕಾಣುವೆ ನಾನೆಯೆನ್ನುತ। ನಡೆಯುತಲಿ ಜೋಪಾನವಾಗಿಯೆ ಪೆಟ್ಟಿಗೆಯ ತಾ ತೆರೆದು ನೋಡಿದನು॥10॥ ಕಾಣೆಯಾಗಿದೆ ನತ್ತು ಹೋಹೋ। ಕಾಣೆಯಾಗಿಹ ಭೂಸುರನೆನುತ। ಮಾಣಿಕದ

ಮೂಗುತಿಯ ಕೈಯಲಿ ಹಿಡಿದು ದಂಗಾದ। ಜಾಣನೆನಿಸಿದ ಶ್ರೀನಿವಾಸನ ಗೋಣುಬಾಗಿಸಿ ಚಿಂತಿಸುತ್ತಲೆ। ವೇಣುಗೋಪಾಲನನು ನೆನೆದನು ಭ್ರಮಿತ ಮನನಾಗಿ।।11।। ನೀನು ನನ್ನನ್ನು ನಂಬದಿದ್ದರು। ನಾನು ನಿನ್ನನ್ನು ನೆಚ್ಚಿಹೆನು। ನೀ ನೇನು ಚಿಂತೆಯ ಮಾಡದಿರುತಿರು। ನಾಳೆಯೇ ಬರುವೆ। ನಾನೆನುತ ತೆರಳಿಹನು ವಿಪ್ರನು। ತಾನು ಪೇಳಿದ ನುಡಿಯ ನೆನೆಯುತ। ಶ್ರೀನಿವಾಸನು ಮಾತುಬಾರದ ಮೂಕನಂತಾದ।।12।। ನಾಳೆಯಾಯಿತು ಮತ್ತೆ ಬಂದಿತು। ನಾಳೆ ಹಿಂದಕೆ ವೃದ್ಧ ಬರದಿರೆ। ನಾಳೆ ಬರಬಹುದೆನುತ ನಿದ್ದೆಯ ತಡೆದು ಕಾಯ್ದಿರಲು। ನಾಳೆಯೂ ವೃದ್ಧನನು ಕಾಣದೆ ಗೋಳಿಡುತಲಾಹಾರ ತೊರೆಯುತ। ಬಾಳೇ ಬೇಸರವಾಗೆ ಶೀನನು ಬಳಲಿ ಬೆಂಡಾದ।।13।। ತನ್ನ ತಿದ್ದಲು ಬಂದ ಹಾರುವನನ್ನು ಕಾಣದೆ ಕನಲಿ ಕೊರಗುತ। ಚನ್ನಕೇಶವನವನೆ ನಿಶ್ಚಯವೆನುತ। ನಾಯಕನು ತನ್ನದೆಲ್ಲವ ದಾನಮಾಡುತ್ತ। ಚೆನ್ನ ಮಡದಿಯು ಮಕ್ಕಳೊಡನೆಯ ಸನ್ನುತಾಂಗನನರಸಿ। ಕಾಣದೆ ವ್ಯಾಸರಲಿ ಬಂದ।।14।। ವ್ಯಾಸರಿತ್ತರು ಶೀನನಾಯ್ಕಗೆ। ದಾಸ ಪುರಂದರ ವಿಠಲ ಮುದ್ರೆಯ। ಬೇಸರಿಲ್ಲದೆ ರಚಿಸು ಪದದಲಿ ದೇವ ನಾಮಹಿಮೆ।(ಪದದಿ ಬಣ್ಣಿಸು) ವ್ಯಾಸರಾಜರು ಇಂತು ಪೇಳಲು। ಭಾಸುರಾಂಗನ ಪಾರಮಾರ್ಥವ। ವಾಸುದೇವನ ಲೀಲೆಯನ್ನು ಕೊಂಡಾಡಿ ಕುಣಿಸಿದನು।।15।। ಗೃಹವ ತೊರೆದರು ಶೀನನಾಯಕ। ದಹಿಸದೆಯೆಸಂಸಾರ ಮೋಹವ। ವಹಿಸಿದನು ಗೋಪಾಳ ಬುಟ್ಟಿಯ। ಹಿಡಿವ ಧೈರ್ಯವನು। ತಹತಹಿಸಿ ಪದಗಳಲ್ಲಿ ಶ್ರೀಹರಿ ಮಹಿಮೆಯಗಣಿತ ಪಾಡುತಲಿ। ನಿರ್ವಹಿಸಿದನು ತಾ ದಾಸದೀಕ್ಷೆಯ ವಿಹಿತ ಮಾರ್ಗದಲ್ಲಿ ।।16।।

❖ ❖ ❖

60. ಅಯ್ಯಪ್ಪ ವ್ರತ

ಸ್ವಾಮಿಯೇ ಶರಣಂ ಅಯ್ಯಪ್ಪ

ಸ್ವಾಮಿಯೇ ಶರಣಂ ಅಯ್ಯಪ್ಪ। ಅಯ್ಯನೇ ಶರಣಂ ಅಯ್ಯಪ್ಪ।।ಪ।। ಪೊಚ್ಚಮಲೆ ಪೊನ್ನುಮಲೆ ಪುಣ್ಯಮಲೆ ಶಬರಿಮಲೇ। ಮಣಿಕಂಠನಿರುವಾಮಲೆ। ಭಕ್ತರು ಶತಕೋಟಿ ಬರುವಾಗ ಮುಕ್ತಿಯ ಪಥತೋರಿ। ಶರಣು ಎನ್ನುವಾ ಮಲೆ।।ಸ್ವಾಮಿ।। ನನ್ನಯ್ಯಜಗದಯ್ಯ। ನನ್ನಯ್ಯ ಅಯ್ಯಪ್ಪನೇ। ಶರಣು ಸರಣು ಶರಣು ಸರಣು ಸ್ವಾಮಿಯೇ।।1।। ಜಗದೀಶನಾ ಮಗನೇ ಸ್ವಾಮಿಕಲಿಕಾಲ ಕಂಡವನೇ। ಪಂಪಾನದೀ ತೀರದಿ ಜನಿಸಿದ ಅಯ್ಯನಯ್ಯನೇ। ಹರಿಹರ ನಂದನನೇ ಭುವಿಗೆ ನೀ ಬಂದವನೇ। ಹೊಸಯುಗವ ನೀ ತಂದೆಯಲ್ಲೋ। ನನ್ನಯ್ಯ ಜಗದಯ್ಯ।।2।। ಕನಿಸಿನ ವೀರನಾಗೀ ವೀರಮಣಿಕಂಠನಾಗೀ। ಹುಲಿವಾಹನನಾಗಿ ಸ್ವಾಮಿ ಮಹಿಷಿಮರ್ದನನಾಗಿ। ಏಳುಮಲೆ ಏರಿದೆಯಾ ಶರಬಮಲೆ ಸೇರಿದೆಯಾ। ಭಕ್ತರ ಮನದಲ್ಲಿ ನೆಲಸಿದೆಯಾ। ನನ್ನಯ್ಯ....।।3।। ಬಲುಕಟ್ಟುನಿಟ್ಟಾಗಿ ಬಂದೆವೋ ಕರಿಮಲೆ ನೀಲಿಮಲೆ ಏರುತ ಬಂದೆವೋ। ಹದಿನೆಂಟು ಹಂತಗಳ ಏರುತ ಬಂದೆವು ನನ್ನಯ್ಯ..। ಶರಣೆಂದು ಹೇಳಿ ಹಾಡುತಾ ಬಂದೆವು। ಭಕ್ತಿಕೊಡು ಮುಕ್ತಿಕೊಡು ಸ್ಮರಿಸುವ ಶಕ್ತಿಕೊಡು ಸ್ವಾಮಿ। ಭಕ್ತರಿಗೆ ಅಭಯ ನೀಡು ।।4।।

ಹರಿಹರ ಸುತನ ಸನ್ನಿಧಿ ಸೇರಲು ಸ್ವಾಮಿಯ ರಾಗ: ಮಧ್ಯಮಾವತಿ

ಹರಿಹರ ಸುತನ ಸನ್ನಿಧಿ ಸೇರಲು ಸ್ವಾಮಿಯ ಕಾಣಲು ಹದಿನೆಂಟೇ ಮೆಟ್ಟಿಲು।। ಹದಿನೆಂಟೇ ಮೆಟ್ಟಿಲು.।ಪ।। ಭಕುತಿಯ ಶಿಶುವ ಆಡುವ ತೊಟ್ಟಿಲು। ಭಕತರು ಪಾದದ ಧೂಳಿನ ಬಟ್ಟಲು। ಜನುಮಜನುಮದ ಪಾಪವ ಅಟ್ಟಲು। ದೇವನ ಪಾದವ ಮುಟ್ಟಲು ಹದಿನೆಂಟೇ ಮೆಟ್ಟಿಲು।।ಅ.ಪ।। ಮೊದಲನೆ ಮೆಟ್ಟಿಲ ಮೇಲೆ ನಿಲ್ಲುವ ಐಯ್ಯಪ್ಪಾ ಎನ್ನುವ। ಎರಡನೆ ಮೆಟ್ಟಿಲ ಮೇಲೆ ನಿಲ್ಲುವ ನಮ್ಮಪ್ಪಾ ಎನ್ನುವ। ಮೂರನೆ ಮೆಟ್ಟಿಲ ಮೇಲೆ ನಿಲ್ಲುವಾ ಸ್ವಾಮಿ ಶರಣಂ ಎನ್ನುವ। ನಾಲ್ಕನೆ ಮೆಟ್ಟಿಲ ಮೇಲೆ ನಿಲ್ಲುವಾ ಸ್ವಾಮಿ ಐಯ್ಯಪ್ಪ ಎನ್ನುವ।।1।। ಆರನೆ ಮೆಟ್ಟಿಲ ಮೇಲೆ ನಿಲ್ಲುವ ಲೋಕ ಮೋಹವ ವರ್ಜಿಸುವ। ಏಳನೇ ಮೆಟ್ಟಿಲ ಮೇಲೆ ನಿಲ್ಲುವ ಮದಮಾತ್ಸರ್ಯವ ಮೆಟ್ಟುವ। ಎಂಟನೆ ಮೆಟ್ಟಿಲ ಮೇಲೆ ನಿಲ್ಲುವ ಆಸೆಗಳೆಲ್ಲಾ ನೂಕುವ।।2।। ಒಂಭತ್ತನೆ ಮೆಟ್ಟಿಲ ಮೇಲೆ ನಿಲ್ಲುವ ಯೋಗ ರಕ್ಷಕಾ ಎನ್ನುವ। ಹತ್ತನ್ನೆ ಮೆಟ್ಟಿಲ ಮೇಲೆ

ನಿಲ್ಲುವ ದೀನರಕ್ಷಕಾ ಎನ್ನುವ। ಹನ್ನೊಂದನೆ ಮೆಟ್ಟಿಲ ಮೇಲೆ ನಿಲ್ಲುವಾ ಸತ್ಯದಾ ದಾರಿ ಮೆಟ್ಟುವ। ಹನ್ನೆರಡನೆ ಮೆಟ್ಟಿಲ ಮೇಲೆ ನಿಲ್ಲುವಾ ಮನವನು ಧ್ಯಾನದಿ ಕಟ್ಟಲು॥3॥ ಹದಿಮೂರನೆ ಮೆಟ್ಟಿಲ ಮೇಲೆ ನಿಲ್ಲುವಾ ದೇವನ ಹೃದಯದಿ ತುಂಬಲು। ಹದಿನಾಲ್ಕನೆ ಮೆಟ್ಟಿಲ ಮೇಲೆ ನಿಲ್ಲುವಾ ನಿನ್ನನ್ನು ಮುಟ್ಟಲು। ಹದಿನೈದನೆ ಮೆಟ್ಟಿಲ ಮೇಲೆ ನಿಲ್ಲುವ ಧನ್ಯನಾಗಿ ಮುನ್ನಡೆಯುಲು। ಹದಿನಾರನೆ ಮೆಟ್ಟಿಲ ಮೇಲೆ ನಿಲ್ಲುವಾ ತನ್ಮಯಗೊಳಿಸುವ ತೊಟ್ಟಿಲು॥4॥ ಹದಿನೇಳನೆ ಮೆಟ್ಟಿಲ ಮೇಲೆ ನಿಲ್ಲುವ ದಿವ್ಯಾನಂದದ ಬಟ್ಟಲು। ಹದಿನೆಂಟನೆ ಮೆಟ್ಟಿಲ ಮೇಲೆ ನಿಲ್ಲುವಾ ಸ್ವಾಮಿ ಪಾದಗಳ ಮುಟ್ಟಲು॥5॥

ನಿನ್ನ ದರುಶನಕೆ ಸ್ವಾಮಿ ನಿನ್ನ ದರ್ಶನಕೆ

ನಿನ್ನ ದರುಶನಕೆ ಸ್ವಾಮಿ ನಿನ್ನ ದರ್ಶನಕೆ। ಸ್ವರ್ಣಕ್ಷೇತ್ರ ಗುಡಿಯಲ್ಲಿರುವ ನಿನ್ನ ದರ್ಶನಕೆ। ಹಳ್ಳದಿಣ್ಣೆಗಳ ಕಾಡು ಕಲ್ಲುಮುಳ್ಳುಗಳ ದಾಟಿ। ಉಲ್ಲಾಸದಿ ಇಂದು ನಾವು ಬರುವೆವಯ್ಯಪ್ಪ. ಸ್ವಾಮಿ ಶರಣಂ ಅಯ್ಯಪ್ಪ॥ ಶರಣಂ ಶರಣಂ ಅಯ್ಯಪ್ಪ॥ಪ॥ ಮಂಡಲ ವ್ರತಮಾಡಿ ಮಾಲೆ ಹಾಕಿಕೊಂಡೆವು। ತಿರುಮುಡಿ ಕಟ್ಟಿನಾವು ತಲೆಮೇಲಿಟ್ಟೆವು। ಸಂತೆಯಲಿ ನಿಂದು ನಾವು ಪೂಜೆಮಾಡಿದೆವು। ಪಂಪಮೇಳ ಹಾಡಿಕೊಂಡು ಬರುವೆವಯ್ಯಪ್ಪ॥ ಏರುವುದು ಕಷ್ಟ ಮೇಲೆ ಏರುವುದು ಕಷ್ಟ। ನಿನ್ನ ಕೈಯ ನೀಡಿ। ಮಲೆಗಳ ಮೇಲೆ ಸೇರಿಸು ನನ್ನಯ್ಯ॥1॥ ಹಂತಹಂತದಿ ನಾವು ಕೈಯಮುಗಿವೆವಯ್ಯಪ್ಪ। ತೆಂಗಿನಕಾಯಿ ಅಡಿಗಡಿಗೆ ಹೊಡೆಯುವೆವಯ್ಯಪ್ಪಾ ಹಂತ ಹದಿನೆಂಟನು ಮೆಟ್ಟಿ ಬರುವೆವಯ್ಯಾಪ್ಪ। ನಿನ್ನ ಮುಂದೆ ನಿಂತು ನಾವು ಬೇಡುವೆವಯ್ಯಪ್ಪ॥ ದೋಷತೀರಿತು ಸ್ವಾಮಿ ಮೋಕ್ಷಕರುಣಿಸು॥ ಸ್ವಾಮಿ ಕಂಗಳ ತೆಗೆದು ನಮ್ಮ ದುಃಖ ಹೋಗಲಾಡಿಸು॥2॥

ನನ್ನೀ ಮನ ಬೃಂದಾವನ

ನನ್ನೀ ಮನ ಬೃಂದಾವನ ಅಲ್ಲಿ ನಿನ್ನ ಶ್ರೀರೂಪ। ನನ್ನ ನಾಲಿಗೆಗೆ ನಿನ್ನ ನಾಮವು ಪುಣ್ಯ ನೈವೇದ್ಯ ॥ಪ॥ ಹಗಲಲೂ ಕಾರಿರುಳಲೂ ಈ ಯಾತ್ರೆ ನಿಲ್ಲೋಲ್ಲಾ। ಯುಗಯುಗಾಂತರ ಮುಗಿದು ಹೋದರು ಹರಕೆ ಮುಗಿಯೊಲ್ಲಾ॥ ಇನ್ನೊಂದು ಜನ್ಮವು ನನಗೆ ಬಂದರು ಪೂಜೆ ತೀರೋಲ್ಲಾ। ಹರಿಹರತಾತ್ಮಜ ಮೋಕ್ಷ ನೀಡದೆ ಅಡಿಯ ಬಿಡೆನಲ್ಲ॥1॥ಕನಸಲೂ ನನ್ನ ಮನಸಲೂ ನಿತ್ಯಕರ್ಮವೇಳೆಯೊಳು। ಕನಕದೀಪದ ಜ್ವಾಲೆ ನೀಡುವ ಕರುಣೆಯೇ ನನಗೆ ಇರುವ ಆಶ್ರಯ ಕೊಡುವದೇವರು ಶಬರಿಮಲೆಯೊಳಗೆ। ಅಖಿಳಾಂಡೇಶ್ವರನಯ್ಯನಯ್ಯನೆ ಶರಣು ಅಯ್ಯಪ್ಪ॥2॥

ಶಬರಿ ಗಿರಿವಾಸ ದೇವಾ

ಶಬರಿ ಗಿರಿವಾಸ ದೇವಾ। ಅಭಯ ನೀಡಯ್ಯಪ್ಪಾದೇವಾ। ಅಶರಣನಾನು ಸ್ವಾಮಿ ಪರವಶನಾನು ದುಃಖಪರವಶ ನಾನು। ಒಂದೇ ದರುಶನ ಕೊಡು ಜಗದೀಶ॥ಪ॥ ನಿತ್ಯಾಂಧಕಾರದಿ ಬಾಳಿನ ಹಾದಿಯಲ್ಲಿ। ನಿನ್ನನ್ನು ಕಾಣದೆ ಕಾಣದಲೆ। ಸಂಕ್ರಮ ದೀಪದ ಹೊನ್ನಿನ ಪ್ರಭೆಯಲ್ಲಿ। ಸನ್ನಿಧಾನ ಸೇರಿಸಿಕೊ ಶಬರೀಶಾ॥1॥ ಕರ್ಮಬಂಧನಗಳು ಮಾತ್ರವೇ ಉಳಿವ ಮಣ್ಣಿನ ಜನ್ಮ ಸೇರಲಾ। ನಿತ್ಯದಲ್ಲೇ ಇಹ ಸ್ವಪ್ನದಂತೆ ನಿತ್ಯ। ಸತ್ಯ ಸ್ವರೂಪನು ನೀನಂತೆ ನಿತ್ಯ ಸತ್ಯ ಸ್ವರೂಪನು ನೀನಂತೆ॥2॥

ಶಬರೀ ಶೈಲನಿವಾಸ ದೇವಾ

ಶಬರೀ ಶೈಲನಿವಾಸ ದೇವಾ। ಶರಣಾಗತರನು ಪಾಲಿಸೋ॥ ಪಥ ಶರಣೂಮಮ ಶರಣೂ। ಅಭಯದಾಯಕ ಅಯ್ಯಪ್ಪ॥ ಅಯ್ಯಪ್ಪ ಶರಣು। ಶರಣು ನನ್ನಯ್ಯಪ್ಪ॥ ಶಬರಿಗೀರಿಶ ಶರಣು ಶರಣು ಶರಣು ಅಯ್ಯಪ್ಪ॥1॥ ಹರಿಚಂದನಾಭಿಷೇಕ ಹಣೆಯಲಿಟ್ಟು। ಹರಿಹರ ನಂದನಾ ಅಯ್ಯಪ್ಪನಾ। ಪುರದರುಶನ ಸುಖ ಸಂತೃಪ್ತಿ ಪಡೆದ। ತಪಸುಮಾಡುವ ಸ್ವಾಮಿ ಭಕ್ತನು ನಾನು॥2॥ ಮಣಿಕಂಠ ಮಹಿಷಿ ಮರ್ಧನ। ಮಕರ ಸಂಕ್ರಮಣ ದೀಪಪ್ರಿಯ। ಕಲಿಯುಗ ವರದನೆ ಅಂತಃಕರಣನೇ। ದಿವ್ಯಾಭರಣ ಪ್ರಶೋಭಿತನೇ॥3॥

ಪಾದವ ನಂಬಿದೆನೋ ಪ್ರಭು

ಪಾದವ ನಂಬಿದೆನೋ ಪ್ರಭು ಪಾದವ ನಂಬಿದೆನು। ನಿಷ್ಠೆಯ ಕಂಡಲ್ಲಿ ಕಷ್ಟವ ನೀಗುವ। ಪಾದವ ನಂಬಿದೆನೋ ಸ್ವಾಮಿಯೇ। ಅಯ್ಯಪ್ಪ। ಸ್ವಾಮಿಯೇ ಅಯ್ಯಪ್ಪ ಸ್ವಾಮಿಯೆ ಅಯ್ಯಪ್ಪ ಶರಣು ಶರಣು ಅಯ್ಯಪ್ಪ।।ಪ।। ಜಾತಿಭೇದ ನನ್ನಲ್ಲಿಲ್ಲ ಉಚ್ಚ ನೀಚ ಉಳಿದೇ ಇಲ್ಲ। ಮಾಲೆಯಲ್ಲಿ ಮಾನವರು ನಿನ್ನವರೆಲ್ಲ। ನಿನ್ನ ನಾಮಸ್ಮರಣೆಯಲ್ಲೇ ಜೀವನವೆಲ್ಲ।।1।। ಕೋಪದಿಂದ ಹಾಡಿಕೊಂಡು ಕಾಡುಮೇಡು ಸುತ್ತಿಕೊಂಡು। ಒಟ್ಟಾಗಿ ಹದಿನೆಂಟು ಮೆಟ್ಟಿಲೇರಿ ಸ್ವಾಮಿ। ನಿನ್ನನ್ನ ಕಂಡು ನಾವು ಮುಕ್ತಿಕೋರಿ। ಪಾಪನಾಶವನು ಮಾಡೆಂದು ಸನ್ನಿಧಿಸೇರಿ।।2।।

ಸ್ವಾಮಿ ಸಂಗೀತದಿಂದೊಲಿಸೆ

ಸ್ವಾಮಿ ಸಂಗೀತದಿಂದೊಲಿಸೆ। ಗಾನ ಗಂಧರ್ವನಲ್ಲವು ನಾನು।।ಪ।। ಜಪಮಾಲೆಯಂತೆ ಕೈಯಲ್ಲಿಮಂತ್ರ ಶ್ರುತಿಮಾಡೋ ತಂಬೂರದಂತೇ।। ಸ್ವಾಮಿ ಅಯ್ಯಪ್ಪ ಸ್ವಾಮಿ ಶಬರಿಮಲೆ ಸ್ವಾಮಿ।।ಪ।। ಬ್ರಹ್ಮಯಾಮದಲಿ ಪೂಜಾ ಕ್ಷೇತ್ರದಲಿ। ಸನ್ನಿಧಿಯಲಿ ನಾನಿರುವೆ। ರತ್ನಗಿರಿನಾಥ ಅಯ್ಯಪ್ಪ ನಿನ್ನಪುಣ್ಯಾಕ್ಷರ ಮಂತ್ರ ಹಾಡಿ। ಏನೋ ಸಂತಸದಾ ಮೋಡಿ।।1।। ಮನುಷ್ಯನುಆದ ನನ್ನನು ಕಾಯೋ। ಮಣಿಕಂಠಸ್ವಾಮಿದಯತೋರಿ। ಮದಮಾತ್ಸರ್ಯಗಳ ದೂರಮಾಡುವ। ಮಹದೋಪದೇಶವ ನೀ ಸಾರಿ। ಸ್ವಾಮಿ ಅಯ್ಯಪ್ಪ।।2।। ಸಾರೋಪದೇಶಗಳ ನಿನ್ನಯ ನಾಮದ। ಮೊದಲಕ್ಷರವಾಗಿ ಹಾಡುವೆ। ಈ ವಿಶ್ವದಾದ್ಯಂತ ಹಾಡಿ ಭಗವಂತ। ನಿನ್ನ ತೇಜ ಸ್ವರೂಪವ ಸಾರುವೆ। ಮನದಂತರಾಳದಲ್ಲಿ ನಾಪೂಜಿಸುವೇ। ಸ್ವಾಮಿಅಯ್ಯಪ್ಪ ಸ್ವಾಮಿ ಶಬರಿಮಲೆ ಸ್ವಾಮಿ।।3।।

ಎಲ್ಲಾ ದುಃಖವ ನೀಗಿಬಿಡು ನನ್ನಯ್ಯಾ

ಎಲ್ಲಾ ದುಃಖವ ನೀಗಿಬಿಡು ನನ್ನಯ್ಯಾ ಶಬರೀವಾಸ। ಎಲ್ಲಾ ದೋಷವ ಹಚ್ಚಿಬಿಡು ನನ್ನಯ್ಯಾ ಅನುಗ್ರಹಿಸು ದೇವಾ ।।ಪ।। ಒಂದೂ ದಿನವೂ ಮರೆತಿಲ್ಲ। ನಿನ್ನನು ಸ್ಮರಿಸಿದ ಕ್ಷಣವಿಲ್ಲಾ। ಮಾಯಾಮಯವೀ ಜೀವನದಲ್ಲಿ ಮದ ಮಾತ್ಸರ್ಯಗಳಾ ಓಡಿಸಯ್ಯಾ। ಪ್ರೇಮವ ಹುಡುಕೀ ಅಲೆದು ಅಲೆದು। ಕ್ಷಣದಾ ಸುಖವನು ತ್ಯಜಿಸಿರುವೆ।।1।। ಸರಸರನಗಲು ಸುಸ್ತಾಗಿ ಮನಸ್ಸೆ ಎಲ್ಲೋ ಅಲೆಯುತಿದೆ ಅಖಿಳಾಂಡೇಶ್ವರ ಅಭಯವ ನೀಡದೆ। ಇನ್ನು ನನಗೇ ಬದುಕಿಲ್ಲ।। ಸ್ವಾಮಿ ಶರಣಂ ಅಯ್ಯಪ್ಪ ಶರಣು ಶರಣು ಅಯ್ಯಪ್ಪ।।2।।

ಸ್ವಾಮಿ ಶರಣು ನಿನಗೆ ಅಯ್ಯಪ್ಪ — ರಾಗ: ಧೇನುಕ

ಸ್ವಾಮಿ ಶರಣು ನಿನಗೆ ಅಯ್ಯಪ್ಪ। ಸ್ವಾಮಿ ಶರಣು ನಿನಗೆ।।ಪ।। ಶಬರಿಮಲೆಯಲಿ ನೆಲೆಸಿಹ ಪ್ರಭುವೆ। ಶಕ್ತಿಸಾಮರ್ಥ್ಯವ ತೋರಿದ ದೊರೆಯೆ। ಹರಿಹರಕೃಪೆಯ ಪಡೆದ ಸ್ವಾಮಿಯೇ। ತ್ರೈಲೋಕ್ಯವಂದಿತ ದೇವಾದಿದೇವನೆ।।1।। ದರ್ಶನ ಭಾಗ್ಯವ ಸತತ ಕರುಣಿಸು। ಭಜನೆಯಲಿ ಮನ ಇರುವಂತೆ ಹರಸು। ನೇಮನಿಷ್ಠೆಯಲಿ ಭಜಿಸುವೆ ನಿನ್ನ। ಅಂತರಂಗದಲಿ ವಾಸಿಸೊ ಅಯ್ಯಪ್ಪ।।2।। ಭಕ್ತವೃಂದವು ನಿನ್ನೆಡೆಬಂದಿಹರು। ಮಕರ ಜ್ಯೋತಿಯ ಕಾಣಬಯಸಿಹರು। ಅಸೀಮಸಂತಸ ಹೃದಯ ತುಂಬಿಹರು। ಚೈತನ್ಯ ದಾಸನು ಮೈಮರೆತಿಹನು।।3।।

ಸ್ವಾಮಿ ಅಯ್ಯಪ್ಪನೆ ನಿನ್ನ

ಸ್ವಾಮಿ ಅಯ್ಯಪ್ಪನೆ ನಿನ್ನ ಕ್ಷೀರಾಭಿಷೇಕಕ್ಕೆ ಗೋವುಗಳು ಹಾಲ ಕರೆದವು। ಕಾದ ಜನರೆಲ್ಲರು ಹೆಜ್ಜೇನ ತಂದಿಹರು। ಜೇನ ಅಭಿಷೇಕಕೆಂದು।।ಪ।। ಓಂಕಾರನಾದದ ಗೆಜ್ಜೆಗಳ ಧ್ವನಿಯಿಂದ ಮೈಮರೆತು ಜನಕೆ ಇಂದು। ಸುಪ್ರಭಾತವ ನೀಡು ಅಯ್ಯಪ್ಪಸ್ವಾಮಿ ಸುಪ್ರಭಾತವ ನೀಡು ಅಯ್ಯಪ್ಪ।।1।। ಪಂಪೆಯಲಿ ತಾ ಮಿಂದು। ಕರಿನೀಲಿಯ ಖಾವಿಯನೆ ಉಟ್ಟು। ಸಂಭ್ರಮದಿ ನೆನೆ ನೆನೆದು। ಅಡಿಗಡಿಗೆ ನುಡಿ ನುಡಿದು ಅಯ್ಯಪ್ಪ ಶರಣು ಎಂದು। ಮೇಲೆತ್ತುವ ಧೂಪದಿಂದ। ಸ್ವಾಮಿಯೇ ಶರಣಂ ಅಯ್ಯಪ್ಪ ತವಕದಲಿ ನಿನ್ನ ನೋಡಲು ಬರುತಿರಲು। ಸುಪ್ರಭಾತವ ನೀಡು ಅಯ್ಯಪ್ಪ ಸ್ವಾಮಿ ಸುಪ್ರಭಾತವ ನೀಡು ಅಯ್ಯಪ್ಪ।।2।। ಗುಡಿ ಎಲ್ಲ

ಬೆಳಕಾಗಿ। ನಕ್ಷತ್ರ ಹೊಳೆವಂತೆ ನಿನ್ನ ಪಾದದ ಪೂಜೆಗಾಗಿ। ಮಂತ್ರಘೋಷದಕಾರ। ಎಣ್ಣೆಮಜ್ಜನ ಇಂಪಾದ ಗಾನದಿಂದ ಭಕುತರೆಲ್ಲರು ಬಂದು ಕೈಯಮುಗಿವರು ಆಗ ಕರ್ಪೂರದಾರತಿಗೆ। ಅಯ್ಯಪ್ಪನ ಮೊಗವ ನೋಡುವಾ ಜನಕ್ಕೆ ಸುಪ್ರಭಾತವ ನೀಡು ಅಯ್ಯಪ್ಪ। ಸ್ವಾಮಿ ಸುಪ್ರಭಾತವ ನೀಡು ಅಯ್ಯಪ್ಪ॥3॥

ಸ್ವಾಮಿ ನೀವು ಕೊಂಡಮೀದ **ರಾಗ: ಹಿಂದೋಳ-ರೂಪಕತಾಳ**

ಸ್ವಾಮಿ ನೀವು ಕೊಂಡಮೀದ ನಿಲಚಿತಿವಯ್ಯ। ಅಯ್ಯಪಬ್ಬ ನಾಮಮುತೊ ವೆಲಗಿತಿವಯ್ಯ। ನಿತ್ಯ ಮುರಾರಿಯ ಅನಿ ಚೂಪಿತವಯ್ಯ। ವ್ಯಾಘ್ರ ವಾಹನುಡೈಯಿ ವಚ್ಚಿತಿವಯ್ಯ॥ಪ॥ ನಡುಕಲುತೊ ಭಕ್ತುಲು ವಚ್ಚಾರಯ್ಯ। ಇರಿಮುಡಿ ಕಟ್ಟುಕನಿ ಮಕರ ಜ್ಯೋತಿಕಿ ಪದುನೆನಮಿದಿ ಮಿಟ್ಟಲಕು ಕರ್ಪೂರಮು ವೆಲಗಿಂಚಿ। ನೀತಿಲೋ ಅಭಿಷೇಕಾಲು ಚೇಶಾರಯ್ಯ॥1॥ ಹರಿಹರ ಪುತ್ರುಡು ನೀಲಮಣಿ ಕಂಟುಡೈ। ಏಕಾಂತ ವಾಸುಡು ಮಹಿಷ ಸಂಹಾರುಡೈ। ಜ್ಯೋತಿನಿ ಚೂಡಗನೆ ಆನಂದಮು ಕಲಗಿಂದಿ ನೀ ಮಹಿಮಲು ಏ ವಿಧಮುನ ವರ್ಣಿಂಚಿದೆನ್ತಯ್ಯ॥2॥ ಎನ್ನೊ ವಿಧಮುಲುಗಾ ವೇಡುತು ನಿನ್ನು। ದರಶನಮು ಚೆಯ್ಯಾಲನಿ ಕಲವರಿಂಚುಚು। ನೀ ಮಹಿಮಲು ಚೂಪಿಕಿವಿ ಕುಕ್ಕೇಸ್ವಾಮಿ ಲೊ। ನೀ ನಾಮಮುಲು ಜಪಿಂಚುಚು ವೇಡುತುನ್ನಾರಯ್ಯ॥3॥

ಅಯ್ಯಪ್ಪ ಸ್ವಾಮಿ ನಿನ್ನ ಏಮನಿ **ರಾಗ: ರೇವತಿ-ಆದಿತಾಳ**

ಅಯ್ಯಪ್ಪ ಸ್ವಾಮಿ ನಿನ್ನ ಏಮನಿ ವೇಡುದುನು ನೀ ಮಹಿಮಲು ಕೆಲಿಯಕ ವೇದನ ಕಲಗಿನ ಮನಸುಕು॥ಪ॥ ನೋಮುಲು ವ್ರತಮುಲು ಪೂಜಲು ಕೆಲಿಯಕ। ನೀ ಭಜನ ಚೇಯುಟುಕು ಜ್ಞಾನಮುಕಲಿಗಿಂಚು ಸ್ವಾಮಿ ಮೆಲ್ಲೆಲು ಜಾಜುಲು ತುಳಸಿ ಬಿಲ್ವಮುಕೋನು। ನೀ ಪಾದಮುಲುಕು ಅರ್ಚನ ಚೇಯುಚುನ್ನಾರು ಸ್ವಾಮಿ॥1॥ ಶಬರಿ ಮಲೆಯ ಮುನ ನೀ ಮಹಿಮಲು ಚೂಪಚು। ಭಕ್ತುಲ ಕೋರಿಕಲು ಕೀರ್ತಿ ಭಕ್ತಿ ಮಾರ್ಗ ಮುಚೂಪೆ। ಅಯ್ಯಪ್ಪ ಸ್ವಾಮಿ ನೀಕು ಶರಣಂ॥2ಸಾರಿ॥ ಶರಣು ಶರಣು ಶರಣು ಶರಣು॥2ಸಾರಿ॥ ಕುಕ್ಕೆ ಸ್ವಾಮಿ ನೀಕು ಶರಣು ಶರಣು। ಅಯ್ಯಪ್ಪ ಅಯ್ಯಪ್ಪ ಅಯ್ಯಪ್ಪ ಅಯ್ಯಪ್ಪ॥2॥

ಭಜಿಸುವೆ ನಿನ್ನ ಅಯ್ಯಪ್ಪ **ರಾಗ: ಮಧ್ಯಮಾವತಿ**

ಭಜಿಸುವೆ ನಿನ್ನ ಅಯ್ಯಪ್ಪ। ಮಹಾಮಹಿಮನು ನೀನಪ್ಪ। ಹರಿಹರ ಪುತ್ರನೆ ಅಯ್ಯಪ್ಪ। ಶರಣಂ ಶರಣಂ ಅಯ್ಯಪ್ಪ॥1॥ ಹುಲಿಯನು ಏರಿದ ಅಯ್ಯಪ್ಪ। ಮಹಾಪರಾಕ್ರಮ ನೀನಪ್ಪ। ರಕ್ತನೇತ್ರನೆ ಅಯ್ಯಪ್ಪ। ಶರಣಂ ಶರಣಂ ಅಯ್ಯಪ್ಪ॥2॥ ಜ್ಯೋತಿ ಸ್ವರೂಪನೆ ಅಯ್ಯಪ್ಪ। ಪೂರ್ಣ ಪ್ರಕಾಶನು ನೀನಪ್ಪ। ವಿಶ್ವ ಪೂಜಿತ ಅಯ್ಯಪ್ಪ। ಶರಣಂ ಶರಣಂ ಅಯ್ಯಪ್ಪ॥3॥ ಪವಿತ್ರಾತ್ಮನೆ ಅಯ್ಯಪ್ಪ। ಪಾಪಕಳೆವವ ನೀನಪ್ಪ। ಪಂಪಾನದಿ ತೀರದ ಅಯ್ಯಪ್ಪ। ಶರಣಂ ಶರಣಂ ಅಯ್ಯಪ್ಪ॥4॥ ಶಬರಿಗಿರಿಯ ಅಯ್ಯಪ್ಪ। ಬ್ರಹ್ಮಚಾರಿಯು ನೀನಪ್ಪ। ಭಸ್ಮಧಾರಿಯೆ ಅಯ್ಯಪ್ಪ। ಶರಣಂ ಶರಣಂ ಅಯ್ಯಪ್ಪ॥5॥ ಪಾಯಸಪ್ರಿಯನೆ ಅಯ್ಯಪ್ಪ। ತುಪ್ಪದಭಿಷೇಕ ನಿನಗಪ್ಪ। ಭಕ್ತವತ್ಸಲ ಅಯ್ಯಪ್ಪ। ಶರಣಂ ಶರಣಂ ಅಯ್ಯಪ್ಪ॥6॥ ನಯನ ಮನೋಹರ ಅಯ್ಯಪ್ಪ। ಕರ್ಪೂರದಾರತಿ ನಿನಗಪ್ಪ। ದರುಶನ ತೋರೋ ಅಯ್ಯಪ್ಪ। ಶರಣಂ ಶರಣಂ ಅಯ್ಯಪ್ಪ॥7॥

ಅಯ್ಯನೆ ಅಯ್ಯಪ್ಪ **ರಾಗ: ಮೋಹನ**

ಅಯ್ಯನೆ, ಅಯ್ಯಪ್ಪ ಶಬರಿ ಗಿರೀಶ। ಹರಿಹರ ಸುತನೆ ಸುರನರ ಸೇವಿತ॥ಪ॥ ಶಬರಿಮಲೆಯಲ್ಲಿ ನೆಲೆಸಿಹೆಯಪ್ಪ। ದೀನದುರ್ಬಲರ ಸ್ವಾಮಿ ನೀನಪ್ಪ। ಭಕ್ತರ ಕಾಯಲು ಬಂದಿಹೆಯಪ್ಪ। ದುರಿತಗಳೆಲ್ಲವ ತರಿದಿಹೆಯಪ್ಪ॥ 1॥ ಭಕ್ತರಾಭೀಷ್ಟವ ಪೂರೈಸಪ್ಪ। ನಿರ್ಮಲ ಹೃದಯವ ಕರುಣಿಸುವೆಯಪ್ಪ। ಸದಾಚಾರ ಪ್ರವೃತ್ತಿ ದಯಪಾಲಿಸುವೆಯಪ್ಪ। ನೇಮನಿಷ್ಠೆವ್ರತಕೆ ನೀನೆ ಕಾರಣನಪ್ಪ॥2॥ ಮಕರಜ್ಯೋತಿಯಾಗಿ ಕಾಣುವೆಯಪ್ಪ। ಕೈವಲ್ಯ ನೀಡುತ ಪೊರೆಯುವೆ ಯಪ್ಪ। ಎಲ್ಲರ ಹೃದಯವ ಬೆಳಗುವೆಯಪ್ಪ। ಚೈತನ್ಯದಾಸನು ನಮಿಸುವನಪ್ಪ॥3॥

ಮಕರ ಸಂಕ್ರಮಣ ದೀಪವ ನೋಡಲು

ಮಕರ ಸಂಕ್ರಮಣ ದೀಪವ ನೋಡಲು ಮನಸುಗಳಾಸೆ। ಮಲೆಯಲ್ಲಿ ಮಂಜು ಮಾರುತ ಸಹಿಸಿ ನಡೆದಿದೆ ಪರಿಸೇ।।ಪ।। ಅಭಯಾನಾಶ್ರಯ ಬೇಡುವುದೊಂದೆ ನಮಗೆ ಸಂತೋಷ। ಜಗದ ಮಾನವರೆಲ್ಲ ನಿನಗೆ ಶರಣು ಶರಣು ಸರ್ವೇಶಾ।।1।।

ಹರಿಹರಾತ್ಮಜ ಅಯ್ಯಪ್ಪ ನಿನ್ನ ಶಬರಿಗಿರಿ ಶೃಂಗ। ಸನ್ಮತಿ ತರುವ ಮೋಕ್ಷದ ದಾರಿ ನಮಗೆ ಧನ್ಯತೆ ತಂದ।।2।।

ಬೆಳಗುತಿದೆ ಬೆಳಗುತಿದೆ ನೋಡಲ್ಲಿ ಜ್ಯೋತಿ — ರಾಗ: ಆನಂದಭೈರವಿ

ಬೆಳಗುತಿದೆ ಬೆಳಗುತಿದೆ ನೋಡಲ್ಲಿ ಜ್ಯೋತಿ। ಬಾಳನ್ನು ಬೆಳಗುವ ಬಂಗಾರ ಜ್ಯೋತಿ।।ಪ।। ಗಿರಿಗಳ ಸಾಲುಗಳು ಹಣತೆಯಾಗಿರಲು। ಭಕುತಿ ತೈಲವನು ತುಂಬಿ ಕೊಂಡಿರಲು। ಪುಣ್ಯ ಬತ್ತಿಯೇ ಹತ್ತಿಕೊಂಡಿರಲು। ಬೆಳಗುತಿದೆ ಬೆಳಗುತಿದೆ ಆನಂದ ಜ್ಯೋತಿ।।1।। ಘೋರ ಪಾಪವನ್ನು ದಹಿಸುವ ಜ್ಯೋತಿ। ನಾನೆಂಬ ಅಹಂಕಾರ ಅಳಿಸುವ ಜ್ಯೋತಿ। ಅಜ್ಞಾನ ತಿಮಿರನು ನುಂಗುವ ಜ್ಯೋತಿ। ಶರಣರನು ರಕ್ಷಿಸುವ ಜ್ಯೋತಿ।।2।। ಕೋಟಿ ರವಿಕಾಂತಿಯನ್ನು ನಾಚಿಸುವ ಜ್ಯೋತಿ। ಧರೆಯಲ್ಲಿ ಬೆಳಗುವ ದಿವ್ಯ ಪರಂ ಜ್ಯೋತಿ।।3।। ಹೃದಯ ಮಂದಿರವನು ಬೆಳಗುವ ಜ್ಯೋತಿ। ಪರಿಪೂರ್ಣ ಜ್ಞಾನವನು ನೀಡುವ ಜ್ಯೋತಿ। ಹರಿಹರನು ಬೆಳಗಿಸಿದ ಕರುಣೆಯ ಜ್ಯೋತಿ। ಶಬರಿಮಲೆಯಲ್ಲಿ ನೆಲಸಿ ಹರಸುತಿಹ ಜ್ಯೋತಿ।।4।।

ಹರಿವರಾಸನಂ ವಿಶ್ವಮೋಹನಂ — ರಾಗ: ಮಧ್ಯಮಾವತಿ

ಹರಿವರಾಸನಂ ವಿಶ್ವಮೋಹನಂ। ಹರಿಹರೀಶ್ವರಂ ಆರಾಧ್ಯಪಾದುಕಂ।। ಅರಿವಿಮರ್ದನಂ ನಿತ್ಯ ನರ್ತನಂ। ಹರಿಹರಾತ್ಮಜಂ ದೇವಮಾಶ್ರಯೇ।।1।। ಶರಣಂ ಅಯ್ಯಪ್ಪ ಸ್ವಾಮಿ। ಶರಣಂ ಅಯ್ಯಪ್ಪ।। ಶರಣಂ ಅಯ್ಯಪ್ಪ ಸ್ವಾಮಿ ಶರಣಂ ಅಯ್ಯಪ್ಪ।। ಶರಣ ಕೀರ್ತನಂ ಸ್ವಾಮಿ ಭಕ್ತ ಮಾನಸಂ। ಹರಣ ಲೋಲುಪಂ ಸ್ವಾಮಿ ನರ್ತನಾಲಸಂ। ಅರುಣ ಭಾಸುರಂ ಸ್ವಾಮಿ ಭೂತನಾಯಕಂ। ಹರಿ ಹರಾತ್ಮಜಂ ಸ್ವಾಮಿ ದೇವಮಾಶ್ರಯೇ। ಶರಣಂ ಅಯ್ಯಪ್ಪ ಸ್ವಾಮಿ ಶರಣಂ ಅಯ್ಯಪ್ಪ। ಶರಣಂ ಅಯ್ಯಪ್ಪ ಸ್ವಾಮಿ ಶರಣಂ ಅಯ್ಯಪ್ಪ।।2।। ಪ್ರಣವ ಸತ್ಯಕಂ ಪ್ರಾಣನಾಯಕಂ। ಪ್ರಣವ ಕಲ್ಪಕಂ ಸುಪ್ರಭಾಂಜಿತಂ। ಪ್ರಣವ ಮಂದಿರಂ ಕೀರ್ತನ ಪ್ರಿಯಂ। ಹರಿಹರಾತ್ಮಜಂ ದೇವಮಾಶ್ರಯೇ। ಶರಣಂ ಅಯ್ಯಪ್ಪ ಸ್ವಾಮಿ ಶರಣಂ ಅಯ್ಯಪ್ಪ। ಶರಣಂ ಅಯ್ಯಪ್ಪ ಸ್ವಾಮಿ ಶರಣಂ ಅಯ್ಯಪ್ಪ।।3।। ತ್ರಿಭುವನಾರ್ಚಿತಂ ಸ್ವಾಮಿ ಸುಂದರಾನನಂ। ತ್ರಿನಯನಂ ಪ್ರಭು ಸ್ವಾಮಿ ದಿವ್ಯದೇಶಿಕಂ। ವಿದಶ ಪೂಜಿತಂ ಸ್ವಾಮಿ ಚಿಂತಿತ ಪ್ರಭುಂ। ಹರಿ ಹರಾತ್ಮಜಂ ಸ್ವಾಮಿ ದೇವಮಾಶ್ರಯೇ। ಶರಣಂ ಅಯ್ಯಪ್ಪ ಸ್ವಾಮಿ ಶರಣಂ ಅಯ್ಯಪ್ಪ। ಶರಣಂ ಅಯ್ಯಪ್ಪ ಸ್ವಾಮಿ ಶರಣಂ ಅಯ್ಯಪ್ಪ।।4।। ಶ್ರಿತಜನಪ್ರಿಯಂ ಸ್ವಾಮಿ ಚಿಂತಿತ ಪ್ರದಂ। ಶ್ರುತಿ ವಿಭೂಷಣಂ ಸ್ವಾಮಿ ಸಾಧು ಭಾವನಂ। ಶ್ರುತಿ ಮನೋಹರಂ ಸ್ವಾಮಿ ತೀರ್ಥಲಾಲಸಂ। ಹರಿಹರಾತ್ಮಜಂ ಸ್ವಾಮಿ ದೇವಮಾಶ್ರಯೇ। ಶರಣಂ ಅಯ್ಯಪ್ಪ ಸ್ವಾಮಿ ಶರಣಂ ಅಯ್ಯಪ್ಪ। ಶರಣಂ ಅಯ್ಯಪ್ಪ ಸ್ವಾಮಿ ಶರಣಂ ಅಯ್ಯಪ್ಪ।।5।।

❖ ❖ ❖